ಏನೂ ಇಲ್ಲವಲ್ಲ. ಇದು ಮುಕ್ತವಾದಂಥ ಚರ್ಚೆ, ನಿಯಮ 68ರ ಪ್ರಕಾರ ಚಂದ್ರೇಗೌಡರು ಎಲ್ಲಾ ಉತ್ತರ ಹೇಳುತ್ತಾರೆ ನಿಮಗೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಈ ಚರ್ಚೆಗೆ ಬ್ಯಾಕ್‌ಗ್ರೌಂಡ್ ನಿಮಗೆ ಹೇಳಬೇಕಾಗಿದೆ.

ಅಧ್ಯಕ್ಷರು:- ಆಮೇಲೆ ಒಂದು, ತಾವು ದಯವಿಟ್ಟು ಪ್ರಾರಂಭ ಮಾಡುವುದಕ್ಕೆ ಮೊದಲು, ಈ ಚರ್ಚೆ 3.20ಕ್ಕೆ ಪ್ರಾರಂಭವಾಗುತ್ತದೆ. 4 ಗಂಟೆಗೆ ಈ ಚರ್ಚೆ ಮುಗಿಸಿ ಅನಂತರ ಎರಡು ವಿಚಾರಗಳಿವೆ. ಅದಕ್ಕೆ ಹೋಗಬೇಕಾಗುತ್ತದೆ.

ನಿಯಮ 68ರ ಮೇರೆಗೆ

ರಸಗೊಬ್ಬರದ ಬೆಲೆ ಏರಿಕೆಯ ಬಗ್ಗೆ.

† ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ):- ಈ ಚರ್ಚೆಯ ಬ್ಯಾಕ್‌ಗ್ರೌಂಡ್ ಏನೆಂದರೆ, ನಾನು ಸದನದಲ್ಲಿ ಒಂದು ಪ್ರಶ್ನೆ ಕಳುಹಿಸಿದ್ದೆ. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 18. ಅದಕ್ಕೆ ಮಾನ್ಯ ಸಚಿವರು ಉತ್ತರ ಹೇಳುತ್ತಿದ್ದರು. ಅದೇ ದಿವಸ ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಆತ್ಮಾನಂದರವರ ಪ್ರಶ್ನೆಯೂ ಇತ್ತು. ಪ್ರಶ್ನೆ ಸಂಖ್ಯೆ: 445 ಈ ಉತ್ತರಗಳು ಒಂದಕ್ಕೊಂದು ಸಮಂಜಸವಾಗಿರಲಿಲ್ಲ. ಮತ್ತೆ ಸಾಕಷ್ಟು ಮಾಹಿತಿ ಕೂಡಾ ಪ್ರಶ್ನೋತ್ತರ ಕಾಲದಲ್ಲಿ ಸಿಕ್ಕುವುದಿಲ್ಲ ಅನ್ನುವಂಥ ಕಾರಣದಿಂದ ತಾವು ನಮಗೆ ಈ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ಮೊದಲು ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಬಹಳ ಪ್ರಾಮುಖ್ಯವಾದಂಥ, ರೈತರಿಗೆ ಸಂಬಂಧಪಟ್ಟಂಥ ಈ ವಿಚಾರ, ನಮ್ಮ ಪ್ರಶ್ನೆಗೆ ಕೊಟ್ಟಿರತಕ್ಕಂಥ ಉತ್ತರ, ನಾನು ಕೇಳಿರುವ ಪ್ರಶ್ನೆ ಒಂದು ಅವರು ಕೊಟ್ಟಿರುವ ಉತ್ತರ ಮತ್ತೊಂದು. ಇದು ಅವತ್ತು ಗೊಂದಲಕ್ಕೆ ಕಾರಣವಾಗಿ ನಾವು ಸಭಾತ್ಯಾಗ ಮಾಡುವಂಥ ಸ್ಥಿತಿಗೆ ಹೋಗಬೇಕಾಯಿತು.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಮಾನ್ಯ ಸ್ನೇಹಿತರು, ತಮ್ಮಲ್ಲಿ ನನ್ನ ಅರಿಕೆ ಏನೆಂದರೆ ಇವರಿಗೆ ಯಾವ ಯಾವ ವಿಷಯದಲ್ಲಿ ಅಂಕಿಅಂಶಗಳು ಬೇಕು, ಅವರು ಇಲ್ಲಿ ಹೇಳತಕ್ಕಂಥ ವಿಷಯಗಳಿಗೆ ಸರ್ಕಾರದಿಂದ ಮೊದಲೇ ಏನಾದರೂ ತಿಳಿದುಕೊಳ್ಳಬೇಕಾದಂಥ ವಿಷಯ ನನಗೆ ಸೂಕ್ಷ್ಮವಾಗಿ ಹೇಳಿದರು ಅದನ್ನು ತಯಾರು ಮಾಡುತ್ತಿದ್ದೆ. ನನಗೆ ಗೊತ್ತಿರಲಿಲ್ಲ. ಅವರಿಗೆ ಯಾವ ವಿಷಯವಾಗಿ ಹೆಚ್ಚು ಅಂಕಿಅಂಶಗಳು ಬೇಕೆಂದು? ಅದರಿಂದ ತಾವು ಈಗಾಗಲೇ ಸೂಚನೆ ಮಾಡಿರುವ ಹಾಗೆ, ಒಪ್ಪಿಕೊಂಡರೆ, ಅದನ್ನು ನಾಳೆ ನಾಡಿದ್ದಾದರೂ ತಯಾರು ಮಾಡಬಹುದು, ಅದಕ್ಕೆ ಅಷ್ಟೇನೂ ಕಷ್ಟ ಇಲ್ಲ. ಆದರೆ ಸ್ವಲ ಕಾಲಾವಕಾಶ ಹೆಚ್ಚಿಗೆ ಕೊಟ್ಟಿದ್ದರೆ ವಿಷಯ ಸಂಗ್ರಹಣೆ ಮಾಡಿಕೊಡಬಹುದಾಗಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಬಿ.ಎ.ಸಿ.ಯಲ್ಲಿ ವಿಷಯ ಚರ್ಚೆ ಮಾಡಬೇಕೆಂದು ಬಂದಾಗ ನಾವು ಮುಖ್ಯಮಂತ್ರಿಗಳಿಗೆ ಏನು ಸಲಹೆ ಕೊಟ್ಟಿದ್ದೇವೆ ಎಂದರೆ, ನೀವು ಒಂದು ನಿರ್ಣಯವನ್ನು ಅಸೆಂಬ್ಲಿಯಲ್ಲಿ ಇಡಿ, ಆಂಧ್ರಪ್ರದೇಶ ಸರಕಾರದವರು ಮಾಡಿದ್ದಾರೆ. ರಸಗೊಬ್ಬರದ ಬೆಲೆಯು ಜಾಸ್ತಿಯಾಗಿರತಕ್ಕಂಥಾದ್ದು ಕೇಂದ್ರ ಸರಕಾರ, ಇವೊತ್ತು ಅವರಲ್ಲಿರತಕ್ಕಂಥ ಆರ್ಥಿಕ ನೀತಿಯಂತೆ ಇರತಕ್ಕಂಥ ಸಬ್ಸಿಡಿಯನ್ನು ರದ್ದು ಮಾಡಿರುವುದು. ಅವರು ಕೊಡುತ್ತಾ ಇದ್ದಂಥ ಆರು ಸಾವಿರ ಕೋಟಿ ರೂಪಾಯಿಗಳನ್ನು ನಿಲ್ಲಿಸಿರುವುದರಿಂದ ಗೊಬ್ಬರದ ಬೆಲೆ ಜಾಸ್ತಿಯಾಗಿದೆ. ಕಾಂಗ್ರೆಸ್‌ನಲ್ಲಿಯೂ ರೈತರು ಇದ್ದಾರೆ, ಎಲ್ಲಾ ಪಾರ್ಟಿಗಳಲ್ಲಿಯೂ ರೈತರ ಹಿತೈಷಿಗಳು ಇದ್ದಾರೆ. ನಾವೆಲ್ಲರೂ ಸೇರಿಕೊಂಡು ಯೂನಾನಿಮಸ್ ಆಗಿ ಆಂಧ್ರಪ್ರದೇಶದ ಅಸೆಂಬ್ಲಿಯಲ್ಲಿ ನಿರ್ಣಯವನ್ನು ಮಾಡಿದ ಹಾಗೆ ಒಂದು

ನಿರ್ಣಯವನ್ನು ನಾವು ಕೂಡ ಇಲ್ಲಿ ಮಾಡಿ ಕೇಂದ್ರಕ್ಕೆ ಕಳುಹಿಸೋಣ. ಇದರ ಬಗ್ಗೆ ಚರ್ಚೆ ಬೇಡ ಎಂದೂ ಕೂಡ ನಾವು ಹೇಳಿದ್ದೇವೆ. ರಾಜ್ಯ ಸರಕಾರದಲ್ಲಿ ಯಾವ ಅಂಕಿಅಂಶಗಳನ್ನು ನೀವು ಕೊಡಬಹುದು? ಎರಡು ಕೋಟಿ ರೂಪಾಯಿಗಳು ನಮಗೆ ಕೇಂದ್ರದಿಂದ ಬಂದಿದೆ, ಡಿಸೆಂಬರ್ 31ರೊಳಗಡೆ ಸಣ್ಣ ರೈತರಿಗೆ ನಾವು ಹಂಚುವುದಕ್ಕೆ ಆಗುತ್ತಾ ಇಲ್ಲ, ಎಂದು ಕಾರಣ ಹೇಳಬಹುದು. ಹಾಗೆಯೇ ಅವೈಲೆಬಲಿಟಿ ಬಗ್ಗೆ ಬೇಕಾದರೆ ಹೇಳಬಹುದೇ ಹೊರತು, ಬಾಕಿ ಏನನ್ನೂ ಹೇಳುವುದಕ್ಕಾಗುವುದಿಲ್ಲ ಎಂಬುದು ನಮಗೆ ಗೊತ್ತಿದೆ. ನಾವೆಲ್ಲರೂ ಸೇರಿ ಕೇಂದ್ರ ಸರಕಾರದ ಮೇಲೆ ಒತ್ತಾಯ ತಂದು ಸಬ್ಸಿಡಿಯನ್ನು ರದ್ದು ಮಾಡಬೇಕೆಂದು ಕೇಳಿಕೊಂಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಈ ಮಾಹಿತಿಗಳು ಬೇಕೆಂಬ ದೃಷ್ಟಿಯಿಂದಲೇ ಚರ್ಚೆ ಪ್ರಾರಂಭ ಮಾಡಿದೆ. ಇದರ ಹಿನ್ನಲೆಗೆ ಹೋದರೆ, ರಾಜ್ಯ ಸರಕಾರ ರಸಗೊಬ್ಬರದ ಸಹಾಯಧನವನ್ನು ಕೇಂದ್ರ ಸರಕಾರದವರು ಹಿಂತೆಗೆದುಕೊಂಡಿರುವ ಬಗ್ಗೆ ಪ್ರಸ್ತುತ ಸರಕಾರದ ನಿಲುವು ಏನು ಎಂದು ಪ್ರಶ್ನೆ ಕೇಳಿದ್ದೆ. ಇದು ನನ್ನ ಮೂಲ ಪ್ರಶ್ನೆ. ಅದನ್ನು ನಿಲುವು ಎಂಬುದನ್ನು ಇವರು ಬಿಟ್ಟು ಬಿಟ್ಟರು. ರಸಗೊಬ್ಬರದ ಸಹಾಯಧನ ಯೋಜನೆಯನ್ನು ಕೇಂದ್ರ ಸರಕಾರ ಜಾರಿಗೊಳಿಸುತ್ತಿದೆ, ಕೇಂದ್ರ ಸರಕಾರವು ರಸಗೊಬ್ಬರದ ಸಹಾಯಧನವನ್ನು ಹಿಂತೆಗೆದುಕೊಂಡಿರುವುದರಿಂದ ರಾಜ್ಯ ಸರಕಾರ, ಕೇಂದ್ರ ಸರಕಾರದ ಸಹಾಯಧನದಿಂದ ರಸಗೊಬ್ಬರದ ಬೆಲೆ ಏರಿಕೆಯನ್ನು ಸರಿದೂಗಿಸಲು ಕ್ರಮ ಕೈಗೊಳ್ಳುತ್ತಿದೆ, 17.53 ಕೋಟಿ ರೂ.ಗಳು ಕೇಂದ್ರ ಸರಕಾರದಿಂದ ಬಂದಿದೆ. ಅದೇ ದಿವಸ ಆತ್ಮಾನಂದರವರು ಕೇಳಿದ ಪ್ರಶ್ನೆಗೆ ಉತ್ತರವಾಗಿ ತಾವುಗಳು ಹೇಳಿದ್ದೀರಿ, ರಸಗೊಬ್ಬರದ ಬೆಲೆ ಏರಿಕೆಯು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ 'ಹೌದು', ಎಂದು ಹೇಳಿದ್ದಾರೆ. ರೈತರು ಇದರಿಂದ ಆರ್ಥಿಕವಾಗಿ ಸಂಕಷ್ಟಕ್ಕೆ ಗುರಿಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ? ಹೌದು, ಎಂಬ ಉತ್ತರ ಕೊಟ್ಟಿದ್ದಾರೆ, ಬಂದಿದ್ದಲ್ಲಿ ರೈತರಿಗೆ ಪರಿಹಾರೋಪಾಯಗಳನ್ನು ತೆಗೆದುಕೊಳ್ಳಲು ಸರಕಾರದವರು ಏನು ಕ್ರಮಗಳನ್ನು ತೆಗೆದುಕೊಂಡಿದೆ? ರಸಗೊಬ್ಬರಗಳ ಬೆಲೆ ಏರಿಕೆಯಿಂದ ರೈತರ ಮೇಲೆ ಬಿದ್ದಿರುವ ಹೊರೆಯನ್ನು ಕಡಿಮೆ ಮಾಡಲು ಒಟ್ಟು 17.53 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಸಗೊಬ್ಬರವನ್ನು ಸಬ್ಸಿಡಿ ದರದಲ್ಲಿ ರೈತರಿಗೆ ವಿತರಣೆ ಮಾಡುವ ಯೋಜನೆಯನ್ನು ಈ ಮುಂಗಾರಿನಲ್ಲಿ ಜಾರಿಗೊಳಿಸಲಾಗಿದೆ. ರಾಜ್ಯದಲ್ಲಿ ಗೊಬ್ಬರದ ಕೊರತೆ ಹಾಗೂ ಬೆಲೆ ಏರಿಕೆಯಿಂದ ದೃಷ್ಟಿ ಉತ್ಪಾದನೆಗೆ ತೊಂದರೆಯಾಗಿಲ್ಲವೆ? ಅದಕ್ಕೆ ಉತ್ತರವಾಗಿ ರಾಜ್ಯದಲ್ಲಿ ಸಧ್ಯಕ್ಕೆ ರಸಗೊಬ್ಬರಗಳ ಕೊರತೆ ಇರುವುದಿಲ್ಲ, ಆದರೆ ರಸಗೊಬ್ಬರಗಳ ಬೆಲೆ ಏರಿಕೆಯಿಂದಾಗಿ ಅದರ ಬಳಕೆ ಕಡಿಮೆಯಾಗಿದೆ. ಇದರಿಂದ ಕೃಷಿ ಉತ್ಪಾದನೆ ಕುಂಠಿತವಾಗಿದೆ ಎಂದು ಹೇಳಿ ಸರಕಾರವು ಒಪ್ಪಿಕೊಂಡಿದೆ. ರಸಗೊಬ್ಬರದ ಏರಿಕೆಯ ಕಾರಣದಿಂದಾಗಿಯೇ ರೈತರು ಬಳಕೆ ಮಾಡುತ್ತಿಲ್ಲ ಎಂಬುದನ್ನು ಸರಕಾರ ಒಪ್ಪಿಕೊಂಡಿದೆ. ಮತ್ತು ಇದರಿಂದ ಆಗಬಹುದಾದ ಪರಿಣಾಮಗಳನ್ನು ಕೂಡ ತಾವು ಗಮನಿಸಿದ್ದೀರಿ ಎಂದು ನಾನು ಭಾವಿಸುತ್ತೇನೆ. ಇದು ಇಷ್ಟು ನೀವೇ ನಮಗೆ ಕೊಟ್ಟ ಮಾಹಿತಿಗಳು. ಯಾವ ಕಾರಣಕ್ಕಾಗಿ ಗೊಬ್ಬರದ ಸಬ್ಸಿಡಿಯನ್ನು ಕೇಂದ್ರ ಸರಕಾರ ವಜಾ ಮಾಡಿತು? ಅದಕ್ಕೆ ಮುಖ್ಯವಾಗಿ ಕೊಟ್ಟಂಥ ಕಾರಣ ಇದಕ್ಕೆ ಕೊಡತಕ್ಕಂಥ 6 ಸಾವಿರ ಕೋಟಿ ರೂಪಾಯಿಗಳನ್ನು ಮಿಕ್ಕು ಸಹಾಯಧನವನ್ನು ಕೊಡುವುದರಿಂದ ಅಥವಾ ಇದಕ್ಕೆ ಬೇಕಾದಂಥ ಪೂರಕವಾದ ರಾಸಾಯನಿಕ ಪದಾರ್ಥಗಳನ್ನು ಪರದೇಶಗಳಿಂದ ತರಿಸಿಕೊಳ್ಳುವುದರಿಂದ ವಿದೇಶಿ ವಿನಿಮಯದ ಮೇಲೆ ಪರಿಣಾಮವಾಗುತ್ತದೆ ಎನ್ನುವಂಥ ಮಾತನ್ನು ಹೇಳಿದರು. 1952ರಲ್ಲಿ 54 ದಶಲಕ್ಷ ಟನ್‌ಗಳಷ್ಟು ಆಹಾರಧಾನ್ಯಗಳನ್ನು ಬೆಳೆದ ಭಾರತ 1989-90ಕ್ಕೆ 1 ಲಕ್ಷದ 78 ಸಹಸ್ರ ಮಿಲಿಯನ್ ಟನ್ ಆಹಾರವನ್ನು ಉತ್ಪಾದನೆ ಮಾಡಿದೆ. ಪ್ರಸ್ತುತ ವರ್ಷದ ಗುರಿ ಎರಡು ಲಕ್ಷ ಮಿಲಿಯನ್ ಟನ್‌ಗಳು. ಈ ರೀತಿಯಾಗಿ ನೀವು ರೈತರ ಮೇಲೆ ಹೊರೆ ಹೇರುವುದರಿಂದ ನಿಮ್ಮ ಗುರಿಯನ್ನು ಸಾಧಿಸುವುದಕ್ಕೆ ಆಗುತ್ತದೆಯೇ? ಈ ಪ್ರಶ್ನೆಯನ್ನು ನೀವು ಕೇಂದ್ರ ಸರಕಾರಕ್ಕೆ

ಕೇಳಬೇಕಾಗಿತ್ತು. ಎರಡನೆಯದಾಗಿ ಯಾವ ಕಾರಣಗಳನ್ನು ಹೇಳಿ, ಸಹಾಯಧನವನ್ನು ಹಿಂದಕ್ಕೆ ಪಡೆದರೋ ಮುಂದೆ ನಮ್ಮ ಉತ್ಪತ್ತಿ ಕಡಿಮೆಯಾದರೆ ಅದೇ ಆಹಾರಧಾನ್ಯವನ್ನು ತರಿಸುವುದಕ್ಕಾಗಿ ವಿದೇಶಿ ವಿನಿಮಯವನ್ನು ಖರ್ಚು ಮಾಡಬೇಕಾದಂಥ ಪ್ರಸಂಗ ಬಂದರೆ ಆಗ, ಕೇಂದ್ರ ಸರಕಾರದ ನೀತಿಯನ್ನು ಒಪ್ಪುವುದಕ್ಕೆ ಸಾಧ್ಯವಾಗುತ್ತದೆಯೇ? ಇವೆರಡೂ ಅಲ್ಲ, ಮುಖ್ಯವಾದದ್ದು ಕೇಂದ್ರ ಸರ್ಕಾರ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗೆ ಸಲಾಮು ಹಾಕಬೇಕಾಗಿತ್ತು ಅಲ್ಲಿಂದ ಸಾಲ ತರಬೇಕಾಗಿತ್ತು. ಅವರು ಮೂಗುಹಿಡಿದರು, ಇವರು ಬಾಯಿಬಿಟ್ಟರು. ಕೇಂದ್ರ ಸರ್ಕಾರದ ಆರ್ಥಿಕ ನೀತಿಗೆ ಜನ ಮತ ಕೊಟ್ಟಿದ್ದಾರೆ, ಸರ್ಕಾರ ರಚನೆ ಮಾಡಿದ್ದೇವೆ ನಿಮಗೆ ಸ್ವಾತಂತ್ರ್ಯ ಇದೆಯೆಂದು ಹೇಳಿ. ಯಾವ ಕಾರಣಕ್ಕಾಗಿ ವಿ.ಪಿ.ಸಿಂಗರ ಸರ್ಕಾರವನ್ನು ಕೈಬಿಟ್ಟರು? ವಿದೇಶೀ ಸಾಲ ಮಾಡುವುದಿಲ್ಲ, ನಾವು ಹೊಟ್ಟೆಬಟ್ಟೆ ಕಟ್ಟಿಯಾದರೂ ಸ್ವಾವಲಂಬಿಗಳಾಗಿ ಬದುಕುತ್ತೇವೆ ಎನ್ನುವ ಸ್ವಾಭಿಮಾನದಿಂದ ಸರ್ಕಾರವನ್ನು ಬಿಟ್ಟರು. ಇದು ಚರಿತ್ರೆಯಲ್ಲ ಇತ್ತೀಚೆಗೆ ನಡೆದಿರುವ ಘಟನೆ, ತದ್ವಿರುದ್ಧವಾಗಿ ಈ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ತಕ್ಷಣವೇ ಅದರ ತದ್ವಿರುದ್ಧವಾದ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಗೆ ಇಡೀ ರಾಷ್ಟ್ರವನ್ನು ಗುಲಾಮರನ್ನಾಗಿ ಮಾಡಿ, ರಾಷ್ಟ್ರದ ರೈತರಿಗೆ ಇದ್ದಂತಹ ಸಬ್ಸಿಡಿಯನ್ನು ವಜಾ ಮಾಡುವ ಕೆಲಸ ಮಾಡಿತು ಅದು ಹೇಗೆ ಮಾಡಿದರು ಅದರ ವಿವರಕ್ಕೆ ಆಮೇಲೆ ಬರುತ್ತೇನೆ. ಜಪಾನ್ ದೇಶದಲ್ಲಿ ಒಟ್ಟು ಉತ್ಪತ್ತಿಯಾಗುವ 100 ರೂಪಾಯಿಯನ್ನು ರೈತ ಸಂಪಾದನೆ ಮಾಡಿಕೊಟ್ಟರೆ, ಶೇಕಡ 72ರಷ್ಟು ಸಹಾಯಧನ ಕೊಡುತ್ತಾರೆ. ಪ್ರಸ್ತುತ ಭಾರತದಲ್ಲಿ ಗೊಬ್ಬರದ ಮೇಲೆ ಕೊಡುವ ಸಹಾಯಧನದ ದಾಮಾಷಾ ಎಷ್ಟಾಗುತ್ತದೆ ಅಂತ ಒಂದು ಅಂದಾಜನ್ನು ನಾನು ಲೆಕ್ಕ ಮಾಡಿದ್ದೇನೆ ಶೇಕಡ 2.33. ಜಪಾನ್ ಅಂತರರಾಷ್ಟ್ರೀಯವಾಗಿ ವ್ಯವಸಾಯ ಪ್ರಧಾನವಾದ ದೇಶವಲ್ಲ. ಜಗತ್ತಿನ ಅತ್ಯಂತ ಶ್ರೇಷ್ಠ ಕೈಗಾರಿಕಾದೇಶ ಅಂತಹ ದೇಶದಲ್ಲಿ ಶೇಕಡ 72ರಷ್ಟು ಸಹಾಯಧನ ಕೊಡ್ತಾರೆ, ಕೃಷಿ ಪ್ರಧಾನವಾದ ಭಾರತದಲ್ಲಿ ಶೇಕಡ 72ರಷ್ಟು ಕೃಷಿ ಅವಲಂಬಿಸಿರುವ ರೈತರಿರುವ ದೇಶದಲ್ಲಿ ಅವರ ಹೊಟ್ಟೆಮೇಲೆ ಹೊಡೆಯುವ ಕೆಲಸ ಆಗುತ್ತದೆ. ಇದನ್ನು ನಾವು ಪಕ್ಷಾತೀತವಾಗಿ ಗಮನಿಸಿ ಆಲೋಚನೆ ಮಾಡಬೇಕು. ನಾವು ರೈತರ ಪರವಾಗಿದ್ದೇವೆ, ಅಂತ ಬೆಳಿಗ್ಗೆ ಧರಣಿ ಮಾಡಿದರು ನಮ್ಮ ಮಿತ್ರರು. ಇಲ್ಲಿ 350–400 ಕೋಟಿ ಲುಕ್ಸಾನು ಆದಾಗ ಕರಸೇವೆ ಮಾಡೋಕೆ ಯಾರೂ ಹೋಗಲಿಲ್ಲ. ಇಲ್ಲಿ ಮಾಡ್ತೀವಿ ನಾವು ಕರಸೇವೆ ಬಾವಿ ಒಳಗೆ ಬಿದ್ದು, ಅಲ್ಲಿ ಬಸವಣ್ಣನವರು ಕಾಯಕವೇ ಕೈಲಾಸ ಅಂದರು, ಅವರ ಅನುಯಾಯಿಗಳು ಆ ಕಾಯಕ ಮಾಡೋಕೆ ಹೋಗಲ್ಲಿಲ್ಲ, ರಾಮನ ಕಾಯಕ ಮಾಡೋಕೆ ಹೋದರು. ಇಂತಹ ದುರಂತವಿರುವ ಈ ದೇಶದಲ್ಲಿ ಇಂತಹ ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಒಂದು ರಾಜ್ಯದ ಅಧಿಕಾರ ಮಾಡುವ ಪಕ್ಷ, ತನ್ನ ನಿಲುವೇನು, ಏನು ಮಾಡಬೇಕೆಂದು ಮಾಡಿದೆ? ಇದಕ್ಕಾಗಿ ಸಮಗ್ರ ಚಿಂತನೆ ಮಾಡಿ ಎಲ್ಲ ಮುಖಂಡರನ್ನೂ ಕರೆದು ಮಾನ್ಯ ಸಿಂಧ್ಯಾರು ಸಲಹೆ ಮಾಡಿದಹಾಗೆ, ನನ್ನ ಸಲಹೆಯೂ ಅದೇ ಇತ್ತು, ಕೇಂದ್ರ ಸರ್ಕಾರದ ಒತ್ತಡ ತರುವ ಕೆಲಸ ಮಾಡಬೇಕು. ಈ ರೈತವಿರೋಧಿ ನೀತಿಯನ್ನು ಈ ಸದನ ಸ್ಪಷ್ಟವಾಗಿ ಒಕ್ಕೊರಲಿನಿಂದ ಪ್ರತಿಭಟನೆ ಮಾಡಬೇಕು. ಆ ಕೆಲಸ ಮಾಡಬೇಕೆಂಬ ಸದಿಚ್ಛೆಯಿಂದಲೇ ನಾವು ಈ ಚರ್ಚೆ ಮಾಡಿ ಅಂತ ಕೇಳಿದ್ದು. ಒಪ್ಪಿಕೊಂಡು ಬಿಟ್ಟಿದ್ದೀರಿ ನೀವು, ರಸಗೊಬ್ಬರ ಬೆಲೆ ಜಾಸ್ತಿಯಾಗಿದ್ದರಿಂದ ರೈತ ಬಳಕೆ ಕಡಿಮೆ ಮಾಡಿದ್ದಾನೆ. ಎಷ್ಟು? ನಾನು ಮೈಸೂರು ಫರ್ಟಿಲೈಸರ್ಸ್ ಕಂಪೆನಿಯಿಂದ ವಿವರ ತರಿಸೋಕೆ ಪ್ರಯತ್ನ ಮಾಡಿದೆ. ಅವರು ಹೇಳಿದರು ಶೇಕಡ 50ಕ್ಕಿಂತ ಕಡಿಮೆ ಗೊಬ್ಬರದ ಸೇಲ್ಸ್ ಆಗಿದೆ. ಪ್ಲಾಂಟೇಶನ್ ಕಮ್ಯುನಿಟಿಯಿಂದ ಬರುವವನು ನಾನು ಸುಮಾರು 300 ಕೋಟಿರೂ.ಗಳ ವಿದೇಶಿ ವಿನಿಮಯ ಸಂಪಾದನೆ ಮಾಡಿಕೊಡುವ ಕಾಫಿ ಬೆಳೆಗಾರರು ಸೆಪ್ಟೆಂಬರ್ ಅಕ್ಟೋಬರ್ ತಿಂಗಳಿನಲ್ಲಿ ಗೊಬ್ಬರ ಹಾಕುತ್ತಾರೆ. ನೂರಕ್ಕೆ 80ರಷ್ಟು ಪ್ಲಾಂಟೇಶನ್‌ನವರು ಇವತ್ತು ಗೊಬ್ಬರ ಹಾಕಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? 300 ಕೋಟಿಗೂ ಮಿಕ್ಕು ವಿದೇಶೀ ವಿನಿಮಯ ತಂದುಕೊಡುವ ಪ್ಲಾಂಟೇಶನ್ ಇವತ್ತು ಗೊಬ್ಬರ ಹಾಕಲಾರದ ಪರಿಸ್ಥಿತಿಗೆ ಬಂದಿದೆ. ರೈತನದು

ಮತ್ತೊಂದು ಕಡೆ. ಆದ್ದರಿಂದ ಯಾವ ದೃಷ್ಟಿಯಿಂದ ಇದು ಸರಿ? ಯಾವ ಕಾರಣಕ್ಕಾಗಿ ಸಬ್ಸಿಡಿಯನ್ನು ವಿಥ್‌ಡ್ರಾ ಮಾಡಿದ್ದೇವೆ ನಾವು ಇದರ ಪ್ರತಿಭಟನೆ ನಾವು ಮಾಡದಿದ್ದರೆ ಹೇಗೆ ಆಗುತ್ತದೆ? ಆಯ್ತು, ಇದಕ್ಕಾದರೂ ಒಂದು ಕ್ರಮವಿದೆಯೇ? ಹಿಂದಿನ ಮುಖ್ಯಮಂತ್ರಿ ಶ್ರೀ ಬಂಗಾರಪ್ಪನವರ ನೇತೃತ್ವದಲ್ಲಿ ಸರ್ವಪಕ್ಷಗಳ ಸಭೆ ವಿಯೋಗ ಹೋಯ್ತು ಕೇಂದ್ರ ಹಣಕಾಸು ಮಂತ್ರಿಯನ್ನು ಭೇಟಿ ಮಾಡಿದಿವಿ. ಎಲ್ಲವನ್ನೂ ವಿವರವಾಗಿ ಹೇಳಿದ್ದೇವೆ. ಸ್ವಾಮಿ, ಕಳೆದ ಜುಲೈಯಲ್ಲಿ ಕೇಂದ್ರ ಸರ್ಕಾರ ಈ ಗೊಬ್ಬರದ ಸಬ್ಸಿಡಿಯನ್ನು ವಿತ್‌ಡ್ರಾ ಮಾಡತಕ್ಕಂಥ ಒಂದು ಅಘಾತಕರಕವಾದಂಥ ಕೆಲಸವನ್ನು ಏನು ಮಾಡಿದರು ಇದರಿಂದ ಆಗಬಹುದಾದ ಪರಿಣಾಮವನ್ನು ಎಲ್ಲರೂ ಹೇಳಿದರು. ಶೇಕಡ 40ರಷ್ಟು ನೀವು ಸಬ್ಸಿಡಿಯನ್ನು ವಿತ್‌ಡ್ರಾ ಮಾಡತಕ್ಕಂಥ ಕಾರ್ಯದಿಂದಾಗಿ ಪ್ರತಿಯೊಬ್ಬ ರೈತ ಕುಟುಂಬದವರು ಈ ನೋವನ್ನು, ಸಂಕಟವನ್ನು ಅನುಭವಿಸಬೇಕಾಗುತ್ತದೆ ಎನ್ನುವಂಥ ಮಾತನ್ನು ಅವರಿಗೆ ಹೇಳಿದೆವು. ಆಗ 40 ಇದ್ದದ್ದನ್ನು 30ಕ್ಕೆ ಇಳಿಸಿದ್ದೇವೆ ಎಂದು ಹೇಳಿದರು. ಏನೋ ಅಷ್ಟೋ ಇಷ್ಟೋ ಸಿಕ್ಕಿತು ಎಂದು ಹೇಳಿ ನಾವು ಇಲ್ಲಿಗೆ ವಾಪಸ್ ಬಂದರೆ ಈ ಶೇಕಡ 30, 40 ರಿಂದ 30ಕ್ಕೆ ಇಳಿಸಿದ ದರ ಯಾರಿಗೆ? ಮಾರ್ಜಿನಲ್ ಅಂಡ್ ಸ್ಮಾಲ್ ಫಾರ್ಮರ್ಸ್. ಈ ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್ ಯಾರು? ಇದರ ಚರ್ಚೆ ಶುರುವಾಯಿತು. ಸ್ಮಾಲ್ ಫಾರ್ಮರ್ಸ್ ಮತ್ತು ಮಾರ್ಜಿನಲ್ ಫಾರ್ಮರ್ಸ್‌ಗೆ ನಬಾರ್ಡ್‌ನವರು ಒಂದು ಆಯಾಮ ಕೊಡುತ್ತಾರೆ, ಇನ್ನೊಂದು ಸಂಸ್ಥೆಯಲ್ಲಿ ಇನ್ನೊಂದು ಆಯಾಮ ಕೊಡುತ್ತಾರೆ. ಆಗಲೂ ನಾವು ಹೇಳಿದೆವು. ತಾವು ಮಂತ್ರಿಯಾಗಿದ್ದಾಗ ಭೂಶಾಸನದ ಕಾಯಿದೆಯನ್ನು ತಮ್ಮ ಮುಖಂಡತ್ವದಲ್ಲಿ ಜಾರಿಗೆ ತಂದಿರಿ. ನೀರಾವರಿ ಪ್ರದೇಶದಲ್ಲಿ ಒಂದು ಕುಟುಂಬಕ್ಕೆ ಹತ್ತು ಎಕರೆ ಮೇಲೆ ಯಾರಿಗೂ ಭೂಮಿ ಇಲ್ಲ. ನೀವು ಕೃಷಿ ಮಂತ್ರಿಗಳು. ಇದರಲ್ಲಿ ಯಾರು ಸಣ್ಣವರು, ದೊಡ್ಡವರು ಯಾರು, ನೀವು ನಿಗಧಿ ಮಾಡಿ. ನಾನು ಬೇರೆಯವರಿಗೆ ಹೇಳುವುದಿಲ್ಲ. 54 ಎಕರೆ ಒಟ್ಟು ಬಹಳ ದೊಡ್ಡ ರೈತ ಎಂದು ಹೇಳತಕ್ಕಂಥವರಿಗೆ 54 ಎಕರೆಗಿಂತ ಜಾಸ್ತಿ ಇರುವುದಕ್ಕೆ ಸಾಧ್ಯವಿಲ್ಲ. That is the maximum limit ಅದರೊಳಗೆ ಸಣ್ಣ ರೈತ, ದೊಡ್ಡ ರೈತ ಎಂದು ಹುಡುಕುವುದಕ್ಕೆ ಹೋದರು. ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ತರುತ್ತೇನೆ, ಇವರು ಕೊಟ್ಟಂಥ ಶೇಕಡ 30ರ ರಿಯಾಯಿತಿ ಯಾವ ರೈತನಿಗೂ ಈ ಕಾರಣಕ್ಕಾಗಿ ಸಿಕ್ಕಲಿಲ್ಲ. ಕಳೆದ ವರ್ಷ ಹಣ ಪೂರ್ತಿ ವಾಪಸ್ ಹೋಯಿತು, ಏತಕ್ಕೆ ತರಿಸಿದ್ದು? ಇದಾದ ಮೇಲೆ ನೀವು ಏನು ಮಾಡಿದ್ದೀರಿ ಎಂದು ಕೇಳಿದರೆ ಕೇಂದ್ರ ಸರ್ಕಾರ 17.53 ಕೋಟಿ ರೂಪಾಯಿ ಕೊಟ್ಟಿದೆ, ಅದೇನಾದರೂ ರೈತರಿಗೆ ತಲುಪಿದೆಯೇ? ದಯಮಾಡಿ ಹೇಳಿ. ತಲುಪಿದೆಯೋ? ಸಣ್ಣ ರೈತರು ಯಾರು, ದೊಡ್ಡ ರೈತರು ಯಾರು ಈ ಚರ್ಚೆಯೊಳಗೆ 'ಕಲ್ಲಪ್ಪ ಗುಂಡಪ್ಪ ಸೇರಿ ಮಣಸಪ್ಪ ಪುಡಿಯಾದ', ನಿಮ್ಮ ಈ ಚರ್ಚೆಯೊಳಗೆ ಬಡ ರೈತ ಬೀದಿಯಲ್ಲಿ ಬಿದ್ದಿದ್ದಾನೆ. ಮಾರ್ಕೆಟಿಂಗ್ ಫೆಡರೇಷನ್‌ನವರು ಮೂರು ಅಥವಾ ನಾಲ್ಕು ಸರ್ಕ್ಯುಲರ್‌ಗಳನ್ನು ಹೊರಡಿಸಿದ್ದಾರೆ. 2.9.92ರಲ್ಲಿ ಒಂದು ಟೆಲಿಗ್ರಾಂ ಕಳುಹಿಸುತ್ತಾರೆ. 3-9-92ಕ್ಕೆ ಆ ಟೆಲಿಗ್ರಾಂನ್ನು ಖಾಯಂ ಮಾಡುತ್ತಾರೆ. ತಾವು ತಾರೀಖನ್ನು ಬರೆದುಕೊಳ್ಳಬೇಕು. ಮಾರ್ಕೆಟಿಂಗ್ ಫೆಡರೇಷನ್‌ನವರು ಏನೇನು ಮಾಡಿದ್ದಾರೆ ಎಂದು ಹೇಳುತ್ತೇನೆ. ಯಾರಿಗೆ ಟೆಲಿಗ್ರಾಂ? ಯಾರು ಕಳುಹಿಸಿದರು? ಕೆಳಗಡೆ ಇರತಕ್ಕಂಥ ಎಲ್ಲಾ ಬ್ರಾಂಚ್ ಮ್ಯಾನೇಜರ್‌ಗಳಿಗೆ, ಎಲ್ಲಾ ರೀಜನಲ್ ಆಫೀಸ್‌ಗಳಿಗೆ ಮಾರ್ಕೆಟಿಂಗ್ ಫೆಡರೇಷನ್‌ನವರು ತಂತಿ ಕಳುಹಿಸುತ್ತಾರೆ 2-9-92ಕ್ಕೆ. ಅದಾದಮೇಲೆ 22-9-92ಕ್ಕೆ ಮತ್ತೊಂದು ರಿವಿಷನ್ ಆಫ್ ಸೆಲ್ಲಿಂಗ್ ರೇಟ್ಸ್ ಆಫ್ ಫರ್ಟಿಲೈಜರ್ಸ್ ಎಂದು ಹೇಳಿ ನಂ.ಎಫ್.ಆರ್.ಟಿ.554 92-93 ಮತ್ತೊಂದು ಸರ್ಕ್ಯುಲರ್. 19-11-92ಕ್ಕೆ ಮೂರನೆಯ ಸರ್ಕ್ಯುಲರ್ ಕರ್ನಾಟಕ ಸ್ಟೇಟ್ ಕೋ-ಅಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ಇವರಿಂದ. 19-11-92 ಆಗಿನ ಕೃಷಿ ಮಂತ್ರಿಗಳು ಬೆಂಗಳೂರು ಅಕ್ಟೋಬರ್ 23ನೇ ತಾರೀಖು ಶ್ರೀಮಾನ್ ಚಿಕ್ಕೇಗೌಡರು ಇಲ್ಲ ಎಂದು ಕಾಣುತ್ತದೆ. ಅವರು ಮಂತ್ರಿಯಲ್ಲ, ಅದ್ದರಿಂದ ಇಲ್ಲ. ಅವರು ಒಂದು ಹೇಳಿಕೆಯನ್ನು ಪತ್ರಿಕೆಯಲ್ಲಿ ಮಾಡುತ್ತಾರೆ.

ಇವು ಮೂರು-ನಾಲ್ಕು ಹೇಳಿಕೆಗಳು, ಇದಕ್ಕೆ ಕಾರಣವನ್ನು ನಾನು ಹೇಳುತ್ತೇನೆ. ಈ ನಾಲ್ಕು ತಾರೀಖು. ಅದಾದಮೇಲೆ ನಾನು ಸೆಲ್ಲಿಂಗ್ ರೇಟ್ಸ್ ಆಸ್ ಆನ್ 25-9-92 ಹೊರಗಡೆ ಏನು ಮಾರಾಟ ಆಗುತ್ತದೆ ಎನ್ನತಕ್ಕಂಥದ್ದನ್ನು ಮೈಸೂರು ಫರ್ಟಿಲೈಸರ್ ಕಂಪನಿಯಿಂದ ಮತ್ತು ವಿವಿಧ ಕಂಪನಿಗಳಿಂದ ನಾನು ತರಿಸಿದೆ. ಇವಿಷ್ಟು ದಾಖಲೆಗಳನ್ನು ಹೇಳಿದ ಉದ್ದೇಶ ಒಂದಕ್ಕೊಂದಕ್ಕೆ ಯಾವುದಕ್ಕಾದರೂ ಬೆಲೆಗಳಲ್ಲಿ ಸಂಬಂಧ, ತಾಳೆ ಇದೆಯೇ? ನಿಮಗೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಾನು ಬಹಳ ದೀರ್ಘವಾಗಿ ನಿಮ್ಮ ಮತ್ತು ಈ ಸದನದ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಚ್ಛಿಪಡುವುದಿಲ್ಲ. ಸ್ಪಿಕ್ ಕಂಪನಿ, ಫ್ಯಾಕ್ಟ್ ಕಂಪನಿಯವರದ್ದು ಕಾಂಪ್ಲೆಕ್ಸ್ ಗೊಬ್ಬರ. ಏಕೆ ಕಾಂಪ್ಲೆಕ್ಸ್ ಗೊಬ್ಬರವೆಂದು ಪರ್ಟಿಕ್ಯುಲರ್ ಆಗಿ ಹೇಳುತ್ತೇನೆಂದರೆ ಆ ಗೊಬ್ಬರವನ್ನು ಇದಾದಮೇಲೆ 40-30, ಸಣ್ಣವರು, ದೊಡ್ಡವರು ಹೀಗೆಲ್ಲ ವಿಭಜಿಸಿದ ಮೇಲೆ ಆ ಕಾಂಪ್ಲೆಕ್ಸ್ ಗೊಬ್ಬರವನ್ನು ಡೀನ್ಯಾಶನಲೈಸ್ ಮಾಡಿದಿರಿ, ಡೀ ಕಂಟ್ರೋಲ್ ಮಾಡಿದಿರಿ. ಅದರಿಂದ ಪ್ರತಿ ಒಬ್ಬ ರೈತ He is at the mercy of the seller ಮಾರುಕಟ್ಟೆಯಲ್ಲಿ ಅವನು ನಿಗದಿ ಮಾಡಿದ್ದುದು ಬೇರೆ ಬೆಲೆ ಆದರೆ ಕೊಳ್ಳುವ ಶಕ್ತಿ ಇರಬೇಕಲ್ಲ. ಆ ಕೊಳ್ಳುವ ಶಕ್ತಿ ಇಲ್ಲದೆ ಇವತ್ತು ಕಾಂಪ್ಲೆಕ್ಸ್ ಮೆನ್ಯೂರ್‌ಗಳ ವ್ಯಾಪಾರ ಬಹುತೇಕ ಸ್ಥಗಿತವಾಗಿದೆ, ಅದು ಮತ್ತೊಂದು ಭಾಗ. ನಾನು ರೆಫರ್ ಮಾಡಿದಂತಹದಂಥ 2.9.92ರ ಟೆಲಿಗ್ರಾಮ್. ಡಿಎಪಿ ಆಲ್ ಬ್ರಾಂಚಸ್, 4600, ಆ ತಾರೀಖಿಗೆ 4600 ರೂಪಾಯಿ ಬೆಲೆ ನಿಗದಿ ಮಾಡಿದಾಗ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ಎಷ್ಟು ಗೊಬ್ಬರ ಇತ್ತು. ಜಿಲ್ಲಾ ಕೇಂದ್ರಗಳಲ್ಲಿ ಎಷ್ಟು ಗೊಬ್ಬರ ಇತ್ತು. ಇದರ ಬಗ್ಗೆ ವ್ಯಾಖ್ಯಾನ ನಡೆದೂ ನಡೆದು ಕೊನೆಗೆ ಮಂತ್ರಿಗಳು 65 ಸಾವಿರ ಟನ್ ಗೊಬ್ಬರ ಇದೆ, ಹಳೇ ರೇಟಿಗೆ ಕೊಡುತ್ತೇವೆ ಎಂದು ಹೇಳಿದರು. ನಾನು ಅನೇಕ ಸಾರಿ ಖಾಸಗಿಯಾಗಿ, ಸಾರ್ವಜನಿಕವಾಗಿ, ಸಭೆ ಸಮಾರಂಭಗಳಲ್ಲಿ ಪ್ರಸ್ತಾಪ ಮಾಡಿದ್ದೇನೆ. ಗೊಂದಲಕ್ಕೆ ಇಡಬೇಡಿ, ಯಾರಿಗೆ ಕೊಡುತ್ತಿದ್ದೇವೆಂದು ಹೇಳಿಬಿಡಿ, ಎಷ್ಟು ಕೊಡುತ್ತೇವೆಂದು ಹೇಳಿ, ಬೆಲೆ ಎಷ್ಟು ಎಂದು ಹೇಳಿ ಎಂದು. 4600 ರೂಪಾಯಿ; 22.9.92ರಲ್ಲಿ ರಿವಿಜನ್ ಆಫ್ ಸೆಲ್ಲಿಂಗ್ ರೇಟ್. ನಾನು ನಾಲ್ಕಾರು ಕಂಪನಿಗಳ ಉದಾಹರಣೆ ಹೇಳುವುದಿಲ್ಲ. ಅದೇ ಸ್ಪಿಕ್ ಕಂಪನಿಯು, selling rate for cash inclusive of taxes is Rs.8540, selling rate on credit Rs.8670. Karnataka State Co-operative Marketing Federation. ಫ್ಯಾಕ್ಟ್ ಕಂಪನಿಯದು, ಕಾಂಪ್ಲೆಕ್ಸ್......

ಶ್ರೀ ಸಿ. ಬೈರೇಗೌಡ:- ಅದು ಯಾವುದು ನೀವು ಹೇಳುತ್ತಿರುವುದು? ಎನ್‌ಪಿಕೆ ಪರ್ಸೆಂಟೇಜ್‌ನಲ್ಲಿ ಹೋಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಫ್ಯಾಕ್ಟ್ ಕಂಪನಿ ಕಾಂಪ್ಲೆಕ್ಸ್ 20:20 ಇದೆ. 20:20 ಅದು ಸ್ಪಿಕ್ ಕಂಪನಿಯದು. ಆಲ್ 17 ಎಂದು ಇದೆ, ಆಲ್ 20 ಇದೆ Rs.6711 ಸಾಲ ಕೊಟ್ಟರೆ 6826.

(ಶ್ರೀ ಡಿ.ಎ. ಚಿನ್ನಪ್ಪ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು.)

ಫ್ಯಾಕ್ಟ್‌ನಲ್ಲಿ ಸ್ಪಿಕ್ ಡಿಎಪಿ; 8670. ಇದು ಅವರದ್ದು ಆಯಿತು. ಪುನಃ 19.11.92ಕ್ಕೆ ಇದೇ ಕರ್ನಾಟಕ ಸ್ಟೇಟ್ ಕೋ ಅಪರೇಟೀವ್ ಮಾರ್ಕೆಟಿಂಗ್ ಫೆಡರೇಶನ್‌ನವರು ಹೊರಡಿಸಿದಂತಹ ಆದೇಶದಲ್ಲಿ ಆಲ್ ಡಿಎಪಿ, ಟನ್ನಿಗೆ 7865 ಆಯಿತು. ಸಾಲ ಕೊಟ್ಟರೆ, 7983 ಆಯಿತು. ಅಂದರೆ 25.8.92ರಲ್ಲಿ 4600 ರೂಪಾಯಿ ಇದ್ದಂತಹ ಡಿಎಪಿ ಗೊಬ್ಬರ 19.11.92ಕ್ಕೆ 7963, ಅರ್ಥಾತ್ ಒಂದು ಟನ್ನಿಗೆ ಎರಡು ಪಟ್ಟು ಹೆಚ್ಚಾಯಿತು. ನಾನು ಉಳಿದ ವಿವರಕ್ಕೆ ಹೋಗುವುದಿಲ್ಲ. ಆದರೆ 23.11.92ಕ್ಕೆ ಮಂತ್ರಿಗಳು ಹೇಳಿರತಕ್ಕದ್ದರಲ್ಲಿ ಇದೇ ಡಿಎಪಿಗೆ 50 ಕೆಜಿಗೆ 357; ಎಂದು. ಈ 357ನ್ನು ನಾನು 50 ರಿಂದ ಭಾಗಿಸಿದರೆ ಪುನಃ ಅದು 6600 ಚಿಲ್ಲರೆ ಆಗುತ್ತದೆ. ಈ ರೀತಿ ಒಂದೊಂದು ಕಾಲಕ್ಕೆ ಒಂದೊಂದು ಬೆಲೆ. ಕೆಳಗಡೆ ಇರತಕ್ಕ ರೈತ ಹೋಗಿ ಸೊಸೈಟಿಯಲ್ಲಿ ಕೇಳಿದರೆ ಬೆಲೆ ನಿಗದಿ ಆಗಿಲ್ಲ ಎಂದು ಹೇಳುತ್ತಾರೆ. ಯಾವ ಹೊತ್ತಿನಲ್ಲಿ ಏನು ಬರುತ್ತದೋ? ಆ ಬೆಲೆ ಯಾರು ನಿಗದಿ

ಮಾಡಬೇಕೋ ನನಗೆ ಗೊತ್ತಿಲ್ಲ. ಮಾರ್ಕೆಟಿಂಗ್ ಫೆಡರೇಶನ್‌ನವರು ಮಾಡುತ್ತಾರೋ, ಇಲ್ಲ ನಿಮ್ಮ ಇಲಾಖೆಯವರು ಮಾಡುತ್ತಾರೋ ಅಥವಾ ಕೇಂದ್ರ ಸರ್ಕಾರವೇ ಮಾಡಿ ಕಳಿಸುತ್ತದೋ? ಇದರ ಮೇಲೆ ಒಂದು ಸಾವಿರ ರೂಪಾಯಿ ಸಬ್ಸಿಡಿ ಡಿಎಪಿ ಮೇಲೆ ಕೊಟ್ಟರು. ಆ ರಿಯಾಯಿತಿ ದರದ ಪಟ್ಟಿಯನ್ನು ಮಾನ್ಯ ಕೃಷಿ ಮಂತ್ರಿಗಳು ಅಕ್ಟೋಬರ್ 23ನೇ ತಾರೀಖು ಪತ್ರಿಕೆಗೆ ಬಿಡುಗಡೆ ಮಾಡುತ್ತಾರೆ.

3-40 P.M.

ಇಷ್ಟು ದಿವಸಗಳ ವಿಳಂಬವಾದ ಮೇಲೆ, ಬೆಲೆ ಹೊಂದಾಣಿಕೆಯಾಗುತ್ತದೆಂದು ನೋಡಿದರೆ ಡಿ.ಎ.ಪಿ.ಗೆ 50 ಕೆ.ಜಿ. ಚೀಲಕ್ಕೆ 357 ರೂಪಾಯಿ ಆಗಿದೆ. ಅದು 6600 ರೂಪಾಯಿ ಟನ್ನಿಗೆ ಆಯಿತು. ಈ ದ್ವಂದ್ವಗಳು ಬೇಡವೆಂದು ಹೇಳಿ, ಖಾಸಗಿ ಕಂಪನಿಗಳು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ನೋಡಬಹುದು. ಯಾರು ಎಷ್ಟು ಬೇಕಾದರೆ ಯಾವತ್ತಿನ್ನಲ್ಲಾದರೂ ಬೇಕಾದರೆ ಮಾಡಿಕೊಳ್ಳಬಹುದು. ಯಾವಾಗ ಬೇಕಾದರೂ ಬದಲಾವಣೆಯನ್ನು ಮಾಡಿಕೊಳ್ಳಬಹುದು. ನಾನು ಮೈಸೂರು ಫರ್ಟಿಲೈಸರ್ ಕಂಪನಿಗೆ ಹೋಗಿ ಕೇಳಿದೆ ಆಲ್.ಡಿ.ಎ.ಪಿ...

ಶ್ರೀ ಸಿ. ಬೈರೇಗೌಡ:- ಅದು ಕಾಂಪ್ಲೆಕ್ಸ್ ಗೊಬ್ಬರವೇ......

ಶ್ರೀ ಡಿ.ಬಿ. ಚಂದ್ರೇಗೌಡ:- ಎಷ್ಟು ಅಪರಾಧಗಳನ್ನು ಮಾಡಿದ್ದಾರೆಂದು ಹೇಳುತ್ತಿದ್ದೇನೆ ಅಷ್ಟೆ. ಟನ್‌ಗೆ 4600 ರೂಪಾಯಿ ಇದ್ದದ್ದು ಸಬ್ಸಿಡಿ 1000 ಇದರ ಮೇಲೆ ವಜಾ ಜಾತ 7865 ರೂಪಾಯಿ ಆಗಿದೆ. ಆದರೆ ನೇರವಾಗಿ ಕಂಪನಿಯಿಂದಲೇ ತೆಗೆದುಕೊಂಡರೆ 6854 ರೂಪಾಯಿಗೆ ಗೊಬ್ಬರವನ್ನು ಕೊಡುತ್ತಿದ್ದಾರೆ. ನಾವು ಸೊಸೈಟಿಯನ್ನು ಮಾಡಿ ಏನು ಮಾಡಿದ್ದೇವೆಂದರೆ ಮಾರ್ಕೆಟಿಂಗ್ ಫೆಡರೇಶನ್ ಮಾಡಿಕೊಂಡು ಮತ್ತು ಎಲ್ಲಾ ಕಂಪನಿಗಳನ್ನು ಇಟ್ಟುಕೊಂಡು ಒಂದು ಟನ್‌ನ ಮೇಲೆ 1000-1500 ರೂಪಾಯಿಯವರೆಗೆ ಹೆಚ್ಚು ಬೆಲೆಯನ್ನು ಕೊಡುತ್ತಿದ್ದೇವೆನ್ನುವ ಕಂಪ್ಯಾರಿಸನ್ ಕೊಡುವುದಕ್ಕಾಗಿ ನಿಮಗೆ ಇಷ್ಟು ಫಿಗರ್ಸ್ ಕೊಡುತಿದ್ದೇನೆ. ಹಾಗೆಯೇ ಯೂರಿಯಾ ಬಹಳ ಮುಖ್ಯವಾದುದು. ಏಕೆಂದರೆ ಕಾಂಪ್ಲೆಕ್ಸ್ ಎಲ್ಲರೂ ಹಾಕುವುದಿಲ್ಲ. ತೆಂಗಿನ ತೋಟದವರು, ದ್ರಾಕ್ಷಿಯನ್ನು ಬೆಳೆಯುವವರು, ಕಾಫಿ ತೋಟದವರು ಹಾಕುತ್ತಾರೆ. ಸಣ್ಣಸಣ್ಣ ರೈತರೆಲ್ಲಾ ಹಾಕುವುದಿಲ್ಲ. ಇದರದ್ದು ಕೂಡ ಬೆಲೆ ಜಾಸ್ತಿಯಾಗಿಲ್ಲ ಎನ್ನುವ ಇಂಪ್ರೆಷನ್ ಕೇಂದ್ರ ಸರ್ಕಾರದವರು ಕೊಟ್ಟರು. ಅದು 2940 ರೂಪಾಯಿ ಇದ್ದದ್ದು, ಈಗ ಎಲ್ಲಾ ಸಬ್ಸಿಡಿ ಸೇರಿ ಸೆಲ್ಲಿಂಗ್ ರೇಟ್ 2683, ಆಗಸ್ಟ್ ತಿಂಗಳಿನಲ್ಲಿ ಅದರ ಬೆಲೆ 3020, ಈಗಿನ ಬೆಲೆ 2815 ರೂಪಾಯಿ ಆಗಿದೆ. ಎಲ್ಲಾ ಬೆಲೆಗಳ ವಿವರವನ್ನು ನಾನು ಕೊಡುವುದಕ್ಕೆ ಹೋಗುವುದಿಲ್ಲ. ಈ ರೀತಿಯಾಗಿ ತಿಂಗಳುತಿಂಗಳಿಗೆ ವಾರವಾರಕ್ಕೆ ಗೊಂದಲವನ್ನು ನಿರ್ಮಾಣ ಮಾಡಿ, ಗೊಬ್ಬರದ ಬೆಲೆ ನಿಗದಿಯಾಗದೆ ಕೆಳಗಡೆ ಇರತಕ್ಕ ಸಹಕಾರಿ ಸಂಘಗಳು ಯಾವ ಬೆಲೆಗೆ ಮಾಡಬೇಕೆನ್ನುವುದು ಗೊತ್ತಿಲ್ಲ. ಎಷ್ಟು ಸ್ಟಾಕ್ಸ್ ಇರಬೇಕೆನ್ನುವುದು ಗೊತ್ತಿಲ್ಲ. ಇಷ್ಟೆಲ್ಲಾ ಬೆಲೆ ಜಾಸ್ತಿಯಾಗಿದೆ ಸೊಸೈಟಿಗಳಾದರೂ ಸಹಾಯ ಮಾಡಲಿ, ಎಂದು ಹೇಳಿದರೆ ಈ ಮಾರ್ಕೆಟಿಂಗ್ ಫೆಡರೇಶನ್‌ನವರು ಯಾರು ದುಡ್ಡು ಕೊಡುತ್ತಾರೋ ಅವರಿಗೆ ಅಷ್ಟೆ ಗೊಬ್ಬರ ಕೊಡುತ್ತಾರೆ. ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್‌ನವರೆ ಎಲ್ಲಾ ಸೊಸೈಟಿಗಳಿಗೂ ಅಷ್ಟೊಂದು ಗೊಬ್ಬರವನ್ನು ಸುಲಭವಾಗಿ ಕಳುಹಿಸಿಲ್ಲ. ಅದರ ಮೇಲೆ ರಿಸ್ಟ್ರಿಕ್ಷನ್. ಆ ಸೊಸೈಟಿಯ ಸ್ಥಿತಿಗತಿಗಳನ್ನು ನೋಡಿ ಆ ಸ್ಥಿತಿಗತಿಗೆ ಹೊಂದಿಕೊಂಡು ಕೊಡಿ ಎಂದು ಹೇಳುತ್ತಾರೆ. ಗೊಬ್ಬರದ ಬೆಲೆಯ ವ್ಯತ್ಯಾಸದಿಂದ ಗೊಂದಲ ಒಂದು ಕಡೆಯಾಗಿದೆ. ಮತ್ತೊಂದು ಕಡೆ ಬೆಲೆಯ ವ್ಯತ್ಯಾಸದಿಂದಾಗಿ ಅವೈಲಬಿಲಿಟಿ ಇಲ್ಲ. ತಾವು ಪ್ಲಾಂಟೇಷನ್ ಭಾಗದಿಂದ ಬಂದಿರತಕ್ಕವರು. ಅಕ್ಟೋಬರ್ ತಿಂಗಳಿನಲ್ಲಿ ಗೊಬ್ಬರವೇ ಇಲ್ಲ, ಯಾವ ಸೊಸೈಟಿಯಲ್ಲಿಯೂ ಇಲ್ಲ, ಯಾವ ಕಂಪನಿಯಲ್ಲಿ ಕೇಳಿದರೂ ಇಲ್ಲ. ಏಕೆಂದರೆ ಬೆಲೆ ನಿಗದಿಯಾಗಿಲ್ಲವೆಂದು ಹೇಳುತ್ತಾರೆ. ಹಾಗಾಗಿ ಈ ಸಾರಿ ತಾವು ಮಾಹಿತಿಯನ್ನು

ತರಿಸಿಕೊಳ್ಳಬೇಕು. ಯಾವ ಪ್ಲಾಂಟೇಷನ್‌ನವರೂ ಗೊಬ್ಬರ ಹಾಕುವುದಕ್ಕೆ ಸಾಧ್ಯವಾಗಿಲ್ಲ. ಕೆಲವರು ನವೆಂಬರ್ ತಿಂಗಳಿನಲ್ಲಿ ಹಾಕಿದ್ದಾರೆ. ತಾವು ಪ್ಲಾಂಟೇಷನ್ನಿನ ಸದಸ್ಯರಾಗಿದ್ದೀರಿ. ಗೊಬ್ಬರ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ಯಾರೂ ಹಾಕುವುದಕ್ಕೆ ಆಗಲಿಲ್ಲ. ಬೆಲೆ ಜಾಸ್ತಿಯಾಗಿರುವುದು ಒಂದು ಕಾರಣವಾಗಿದ್ದರೆ, ಸಿಕ್ಕದೆ ಇರುವುದು ಮತ್ತೊಂದು ಕಾರಣವಾಗಿದೆ. ಈ ದ್ವಂದ್ವಗಳ ಮಧ್ಯೆ ಏನು ಪರಿಸ್ಥಿತಿ ನಿರ್ಮಾಣವಾಗಿದೆ ಅದಕ್ಕೆ ಏನು ಮಾಡಬೇಕು? ಆ ಕಾರಣದಿಂದ ತಮ್ಮಲ್ಲಿ ಮನವಿ ಮಾಡುತ್ತೇನೆಂದರೆ ಪಕ್ಷಾತೀತವಾಗಿ ಎಲ್ಲರೂ ರೈತರ ಪ್ರತಿನಿಧಿಗಳೇ, ನಾವು ಏನಾದರೂ ಒಂದು ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಒಟ್ಟಾಗಿ ಕೇಂದ್ರ ಸರ್ಕಾರಕ್ಕೆ ಹೇಳದೇ ಇದ್ದರೆ ಅವರ ಮನಸ್ಸನ್ನು ಒಲಿಸದೇ ಇದ್ದರೆ ನಾವು ಏನೂ ಪ್ರಯತ್ನ ಮಾಡಿದರೂ ಆಗುವುದಿಲ್ಲ. ಹೀಗಾಗಿರುವುದರಿಂದ ಪರಿಣಾಮ ಏನು? ಸರ್ಕಾರವೇ ಒಪ್ಪಿಕೊಳ್ಳುತ್ತದೆ ಪ್ರೊಡಕ್ಷನ್ ಲಾಸ್ ಆಗುತ್ತದೆ ಎಂದು. ಪ್ರತಿವರ್ಷ ಬೆಳೆಯತಕ್ಕಂಥ ರಾಗಿ, ಜೋಳ, ಭತ್ತದ ಬೆಳೆಗಳಲ್ಲಿ ಒಂದೊಂದು ಬೆಳೆಗೂ ಈ ಪ್ರೊಡಕ್ಷನ್ ಲಾಸ್ ಸಿಕ್ಕಿಬಿಡುತ್ತದೆ. ಆದರೆ ಪ್ಲಾಂಟೇಷನ್‌ನಂಥ ವಿದೇಶಿ ವಿನಿಮಯವನ್ನು ಸಂಪಾದನೆ ಮಾಡತಕ್ಕಂಥ ಬೆಳೆಗಳಿಗೆ ಒಂದೆರಡು ವರ್ಷಗಳಾದ ನಂತರ ಅದರ ಪರಿಣಾಮ ಏನು ಎನ್ನುವುದು ಗೊತ್ತಾಗುತ್ತದೆ. ಈ ವರ್ಷ ಕಾಫಿ ಮಂಡಳಿಯವರೇನು ಕಾಫಿ ಬರುತ್ತದೆಂದು ಅಂದಾಜು ಮಾಡಿದ್ದಾರೆ ಅಷ್ಟು ಕಾಫಿ ಬರುವುದಿಲ್ಲವೆಂದು ಈಗಾಗಲೆ ಹೇಳುತ್ತಿದ್ದೀರಿ. ಆ ಕಾರಣದಿಂದಾಗಿ ನಮ್ಮ ವಾದ ಏನಿದೆ ಎಂದರೆ ಅಗ್ರಿಕಲ್ಚರಿಸ್ಟ್ ಎನ್ನತಕ್ಕ ವಾದವನಷ್ಟನ್ನೇ ತಮ್ಮ ಮುಂದಿಟ್ಟರೆ ಆಗುವುದಿಲ್ಲ, ಕೇಂದ್ರ ಸರ್ಕಾರದವರಿಗೆ ನಿಮಗೆ ವಿದೇಶಿ ವಿನಿಮಯ ಬರುವುದಿಲ್ಲ ಎನ್ನುವುದನ್ನು ಹೇಳಬೇಕು. ಮುನ್ನೂರು ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯವನ್ನು ತರತಕ್ಕಂಥ ಪ್ಲಾಂಟೇಷನ್‌ನಲ್ಲಿ ನಮಗೆ ಧಕ್ಕೆಯಾಗುತ್ತದೆ ಎನ್ನತಕ್ಕ ವಾದವನ್ನು ನಾವು ಮಾಡಬೇಕು. ಆದುದರಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ಕರ್ನಾಟಕದಲ್ಲಿ ಒಟ್ಟಾರೆ ಬಳಕೆ ಮಾಡತಕ್ಕ ಗೊಬ್ಬರವೆಷ್ಟು? ಇದು ಏಕೆ ಬೇಕು ಎಂದರೆ ಗೊಬ್ಬರವನ್ನು ಬಳಸತಕ್ಕ ರೈತ ಕುಟುಂಬಗಳ ಸಂಖ್ಯೆಯು ನಮ್ಮ ಹತ್ತಿರ ಸೊಸೈಟಿಗಳಲ್ಲಿ ಇದೆ. ಸುಮಾರು 35–40 ಲಕ್ಷ ರೈತರು ಗೊಬ್ಬರವನ್ನು ಬಳಸುತ್ತಾರೆ. ಇದರಿಂದಾಗಿ ನಾವು ಏನು ಮಾಡಿದ್ದೇವೆಂದರೆ ರೈತರು ಗೊಬ್ಬರವನ್ನು ಹಾಕತಕ್ಕ ಅನಿವಾರ್ಯ ಪರಿಸ್ಥಿತಿಗೆ ತಂದಿದ್ದೇವೆ. ನೀವು ಕೃಷಿ ಇಲಾಖೆಯವರು ಬೆಳಗಿನಿಂದ ಸಂಜೆಯವರೆಗೆ ಆ ಗೊಬ್ಬರವನ್ನು ಹಾಕಿ, ಈ ಗೊಬ್ಬರವನ್ನು ಹಾಕಿ ಎಂದು ಹೇಳುತ್ತಿರುತ್ತಾರೆ. ಹಾಗೂ ಹೀಗೂ ಸಾಂಪ್ರದಾಯಕವಾಗಿ ಬೆಳೆಯತಕ್ಕ ಪದ್ಧತಿಯು ಇಂದು ಸಂಪೂರ್ಣವಾಗಿ ನಿಂತು ಹೋಗಿದೆ. ಇಂದು ಸಾಂಪ್ರದಾಯಕ ಪದ್ಧತಿಯಲ್ಲಿ ಬೆಳೆ ಇಡುತ್ತಿಲ್ಲ. ಗೊಬ್ಬರವನ್ನು ಹಾಕದಿದ್ದರೆ ಸಾಧ್ಯವೇ ಇಲ್ಲ ಎನ್ನತಕ್ಕ ಸ್ಥಿತಿಗೆ ಬಂದಿದ್ದೇವೆ. ಆದುದರಿಂದ ಈ ಅಪರಾಧವನ್ನು ಮಾಡಿದವರು ನೀವು, ನಿಮ್ಮ ಇಲಾಖೆಯವರು, ಭೂಮಿಯೂ ಸಹ ಮಾತು ಕೇಳುವುದಿಲ್ಲ, ನಮ್ಮಲ್ಲಿ ಮೈಯುಣ್ಣುವುದು ಎನ್ನುತ್ತೇವೆ, ಹೊಸ ಗೊಬ್ಬರಗಳಿಗೆ ಭೂಮಿಯ ಮೈಯುಂಡಾಗಿದೆ. ಆದುದರಿಂದ ಗೊಬ್ಬರವನ್ನು ಬಿಟ್ಟು ಬೆಳೆಯನ್ನು ಬೆಳೆಯುತ್ತೇವೆ ಎನ್ನತಕ್ಕ ಸ್ಥಿತಿಯಲ್ಲಿ ಯಾರೂ ಇಲ್ಲ. ಗೊಬ್ಬರವನ್ನು ಹಾಕಿ ಬೆಳೆಯನ್ನು ಬೆಳೆಯುವುದಕ್ಕೆ ಆಗಲಾರದಂಥ ಸ್ಥಿತಿಗೆ ನಮ್ಮ ಕೇಂದ್ರಸರ್ಕಾರ ತಂದಿಟ್ಟಿದೆ. ಹಾಗಾದರೆ ನಾವು ಈಗ ಏನು ಮಾಡಬೇಕು? ಇಲಾಖೆಯನ್ನು ಬೈಯೋಣವೇ? ಇನ್ನು ಆ ಗೊಬ್ಬರಗಳನ್ನು ಯಾವಾಗ ಯಾವಾಗ ಎಷ್ಟೆಷ್ಟು ಹಾಕಬೇಕು ಎನ್ನುವ ಬಗ್ಗೆ ದುರುಪಯೋಗ ಬೇರೆ, ಅದರ ವಿವರಣೆಗೆ ನಾನು ಹೋಗುವುದಿಲ್ಲ. ಅದು ದೊಡ್ಡ ಹಗರಣವೆಂದು ನೀವು ಒಪ್ಪಿಕೊಂಡು ಬಿಟ್ಟಿದ್ದೀರಿ. ನಮ್ಮ ದುರಾದೃಷ್ಟವಶಾತ್ ಏನೆಂದರೆ ನಿಮ್ಮದು ಹೊಸ ಸರ್ಕಾರ ನಾವು ಏನೇ ಹೇಳಿದರು ಅದನ್ನು ಒಪ್ಪಿಕೊಂಡು ಬಿಡುತ್ತೀರಿ, ಅದನ್ನು ಕೇಳಿ ನಮಗೆ ಪರವಾಗಿಲ್ಲ ಇವರು ನಾವೆಲ್ಲ ಹೇಳಿದ್ದನ್ನು ಒಪ್ಪಿಕೊಳ್ಳುತ್ತಾರೆಂದು ಬಾಯಲ್ಲಿ ನೀರು ಬರುತ್ತದೆ. ಆದರ ಪರಿಣಾಮವೇನು ಎನ್ನುವುದು ನಮಗೆ ಗೊತ್ತಾಗುವುದಿಲ್ಲ. ಅದು ಗೊತ್ತಾಗಬೇಕಾದರೆ ನೀವು ಇಂಥ ಕೆಲಸ ದಯಮಾಡಿ ಮಾಡಬೇಕು.

ಆದುದರಿಂದ ಕರ್ನಾಟಕದಲ್ಲಿ ಖಾಸಗೀ ಮೂಲಗಳಿಂದ, ಸಹಕಾರಿ ಸಂಘಗಳಿಂದ, ಸರ್ಕಾರದ ವತಿಯಿಂದ ಒಟ್ಟು ಖರ್ಚಾಗತಕ್ಕ ಗೊಬ್ಬರ ಎಷ್ಟು? ಈ ಸಾರಿ ಖರ್ಚಾಗಿರತಕ್ಕ ಗೊಬ್ಬರ ಎಷ್ಟು? ಇದರಲ್ಲಿ ನಾನು ಹೇಳಿದಂತೆ ಅರ್ಧಕ್ಕಿಂತ ಕಡಿಮೆಯಾಗಿದ್ದರೆ ಅದರಿಂದ ಉತ್ಪಾದನೆಯ ಮೇಲೆ ಬೀಳತಕ್ಕ ಪರಿಣಾಮವೇನು? ಅತ್ಯಂತ ಭೀಕರವಾದಂಥ ಪರಿಣಾಮವನ್ನು ನಾವು ಹೇಗೆ ನಿಭಾಯಿಸಬೇಕು, ಇದಕ್ಕೆ ಒಂದು ಸ್ಕೀಮ್ ಹಾಕಬೇಕು. ಇನ್ನು ಎರಡನೆಯದಾಗಿ 17.53 ಕೋಟಿ ರೂಪಾಯಿಗಳನ್ನು ಸಹಾಯಧನವಾಗಿ ಕೇಂದ್ರ ಸರ್ಕಾರವೇನು ಕೊಟ್ಟಿದೆ ಅದಕ್ಕೆ ಮತ್ತೆ ಮೂಗುದಾರವನ್ನು ಹಾಕಬೇಡಿ, ಸಣ್ಣ ರೈತ ಅತಿ ಸಣ್ಣ ರೈತ ಈ ರೀತಿ ಅವರನ್ನು ಹುಡುಕುವುದರಲ್ಲಿಯೇ ಸಮಯ ಕಳೆಯಬೇಡಿ, ಅದರಿಂದ ಬಂದ ಹಣವೂ ಸಹ ವಾಪಸ್ ಹೊರಟು ಹೋಗುತ್ತದೆ. ಈ 17.53 ಕೋಟಿ ರೂಪಾಯಿ ಸಹಾಯಧನದಲ್ಲಿ ಎಷ್ಟು ಹಣ ರೈತರ ಮನೆಗೆ ತಲುಪಿದೆ ತಲುಪದಿದ್ದರೆ ಏಕೆ ತಲುಪಿಲ್ಲ? ಏಕೆ ತಲುಪಿಸಲು ಸಾಧ್ಯವಾಗಲಿಲ್ಲ? ಸರ್ಕಾರವನ್ನು ವಿಚಾರಣಾ ಕಮೀಷನ್‌ನ ಮುಂದೆ ಇಟ್ಟು ವಿಚಾರಣೆ ಮಾಡಿ ಎಂದು ಹೇಳುತ್ತಿಲ್ಲ, ವಸ್ತುಸ್ಥಿತಿಯನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡೋಣವೆಂದು, ಆಗಲೇ ನಾವು ಪರಿಹಾರವನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆಂದು ಹೇಳುತ್ತಿದ್ದೇನೆ. ಅದಲ್ಲದೆ ನನ್ನ ಗಮನಕ್ಕೆ ಬಂದಿರತಕ್ಕ ವಿಚಾರದಂತೆ ಕೇಂದ್ರದವರು ಕೊಟ್ಟಿರತಕ್ಕ ಸಹಾಯಧನವನ್ನು ಪೂರ್ತಿ ನೀವು ಖರ್ಚು ಮಾಡಿಲ್ಲ, ಅದು ಖರ್ಚಾಗದೇ ಇರುವುದಕ್ಕೆ ಕಾರಣ, ಇಂಥ ತಾಂತ್ರಿಕವಾದ ಕಾರಣಗಳು. ಆದುದರಿಂದ, ಈ ದೃಷ್ಟಿಯಿಂದ ಒಟ್ಟಾರೆ ರಾಜ್ಯದ ರೈತರ ಮೇಲಾಗಿರತಕ್ಕಂಥ ಪರಿಣಾಮವನ್ನು ನಿಭಾಯಿಸುವುದಕ್ಕೆ ಬೇರೆ ಏನಾದರೂ ಮಾರ್ಗಗಳನ್ನು ಗುರುತಿಸಿದ್ದೀರಾ? ಗೊಬ್ಬರದ ಬೆಲೆ ಜಾಸ್ತಿಯಾಯಿತು. ಕೇಂದ್ರ ಸರ್ಕಾರ ಕೊಡಲಿಲ್ಲ. ಇದಕ್ಕೆ ಪರ್ಯಾಯವಾದ ವ್ಯವಸ್ಥೆಯನ್ನು ಶುರು ಮಾಡಬಹುದಲ್ಲ? ಹಿಂದಿನ ಸರ್ಕಾರ ಇದ್ದಂಥ ಕಾಲದಲ್ಲಿ ಶೇಕಡ 5ರಷ್ಟು ಬಡ್ಡಿ ರಿಯಾಯಿತಿಯನ್ನು ಕೊಡುತ್ತಿತ್ತು. ಯಾವುದಾದರೊಂದು ರೂಪದಲ್ಲಿ ರೈತನಿಗೆ ತುಂಬಿಕೊಡುವುದಕ್ಕೋಸ್ಕರವಾಗಿ ಅದನ್ನು ನಿಮ್ಮ ಸರ್ಕಾರ ಬಂದ ಕೂಡಲೇ ತೆಗೆದರು. ಮತ್ತೆ ನಾವೆಲ್ಲಾ ಒತ್ತಡ ತಂದೆವು. ಆ ಒತ್ತಡವನ್ನು ಅಥವಾ ಇರತಕ್ಕಂಥ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡವರು ಮತ್ತೆ ರೀಇಂಟ್ರಡ್ಯೂಸ್ ಮಾಡಿದರು. ರಿಇಂಟ್ರಡ್ಯೂಸ್ ಮಾಡಿದ ನಂತರ ಅದರ ಪೂರ್ಣ ಪ್ರಮಾಣದ ಲಾಭ ಸಿಗಲಿಲ್ಲ. ಕೆಳಗಡೆಯ ಸೊಸೈಟಿಗಳಿಗೆ ನಿಮ್ಮ difference of 5% ಹೋಗಲೇ ಇಲ್ಲ. ಆ difference amount ನಮಗೆ ಬಂದಿಲ್ಲ, ಕಳುಹಿಸಿಕೊಡಿ ಎಂದು ಸೊಸೈಟಿಯವರು ಕೇಳುತ್ತಾರೆ. ನನಗೆ ಅವರಿಂದ ನಿನ್ನೆ ಮತ್ತು ವೊನ್ನೆ ಬಂದ ರೆಪ್ರಸೆಂಟೇಷನ್ ಅನ್ನು ಹಾಗೆ ಇಟ್ಟಿದ್ದೇನೆ. ನಿಮಗೆ ಅಗತ್ಯವಾದರೆ ಅದನ್ನು ಕಳುಹಿಸಿಕೊಡುತ್ತೇನೆ. ಆದರೆ, ಇದಕ್ಕೊಂದು ಬೇರೆ ಮಾರ್ಗ ಕಂಡುಹಿಡಿದು ಇಂಟ್ರೆಸ್ಟ್ ಸಬ್ಸಿಡಿ ಕೊಡಿ. ಹಿಂದಿನ ಸರ್ಕಾರ ಅರ್‍ಯಾಕ್ ಕೇಸ್ ಒಂದರಲ್ಲಿಯೇ, ಅರ್‍ಯಾಕ್ ಬಾಟಲ್ ಮಾಡುವ ಯೂನಿಟ್‌ಗೆ ಮೂರು ರೂಪಾಯಿಗಳನ್ನು ಜಾಸ್ತಿ ಮಾಡಿತು. ಅದರ ಪರಿಣಾಮವಾಗಿ 18 ಕೋಟಿ ರೂಪಾಯಿಗಳು ಬಂತು, ಯಾರಿಗೆ? ಸರ್ಕಾರಕ್ಕೆ ಬರಲಿಲ್ಲ, ಸಾರಾಯಿ ಕುಡಿಯುವವನಿಗೆ ಬರಲಿಲ್ಲ, ತಯಾರು ಮಾಡುವವನಿಗೆ ಬರಲಿಲ್ಲ. ಬರೀ ಬಾಟಲ್ ಮಾಡಿದವರಿಗೆ ಗಿಫ್ಟ್ ಎಂದು 18 ಕೋಟಿ ರೂಪಾಯಿಗಳನ್ನು ಕೊಟ್ಟರು. 36 ಕೋಟಿ ರೂಪಾಯಿಗಳು ಅವರ ಬಡ್ಡಿ ಮತ್ತು ಬಡ್ಡಿ ಮೇಲಿನ ಸುಸ್ತಿ ಬಡ್ಡಿಯನ್ನು ವಜಾ ಮಾಡಿದರು. ಅನಂತರ ಅಸಲು ಕಟ್ಟುವುದಕ್ಕೆ ಸಮಯ ಕೊಡುತ್ತೇವೆಂದರು. ರಾಜ್ಯ ಸರ್ಕಾರ ತನ್ನದೇ ಆದಂಥ ಯಾವುದಾದರೊಂದು ಪಾಲಿಸಿಯನ್ನು ಇಟ್ಟುಕೊಳ್ಳಬೇಕು. ಗೊಬ್ಬರದ ಬೆಲೆ ಜಾಸ್ತಿಯಾದಾಗ ನಾವೂ ಸಹ 10 ಕೋಟಿ ರೂಪಾಯಿಗಳನ್ನು ಸೇರಿಸಿಕೊಡುತ್ತೇವೆಂದು ಹೇಳಿದ್ದೀರಿ? ಕೇಂದ್ರ ಸರ್ಕಾರ ಕೊಟ್ಟ ಹಣವನ್ನು ನೀವು ಖರ್ಚು ಮಾಡಲಿಲ್ಲ, ನಿಮ್ಮ ಸರ್ಕಾರ ಕೊಡಲೂ ಇಲ್ಲ, ನಿಮಗೆ ಪುರುಸೊತ್ತು ಸಹ ಇಲ್ಲ. ಏಕೆಂದರೆ, ಕಾಂಗ್ರೆಸ್ ಸರ್ಕಾರ ಮೂರು ವರ್ಷ ಮುಖ್ಯಮಂತ್ರಿ ಮಾಡುವುದು, ಅನಂತರ ಮಂತ್ರಿಗಳನ್ನು ಮಾಡುವುದು, ನಂತರ ಮಂತ್ರಿಮಂಡಲ ವಿಸ್ತರಣೆ ಅದು ಮುಗಿದ ನಂತರ ಭಿನ್ನಮತೀಯರು.

ಅನಂತರ ಮುಖ್ಯಮಂತ್ರಿಗಳು ಬರುತ್ತಾರೆ, ಮುಖ್ಯಮಂತ್ರಿ ಬದಲಾವಣೆ ಮಾಡಿ ಮಂತ್ರಿಮಂಡಲದ ವಿಸ್ತರಣೆ, ಮತ್ತೆ ಭಿನ್ನಮತೀಯರು ಮತ್ತೆ ಮುಖ್ಯಮಂತ್ರಿಗಳ ಬದಲಾವಣೆ. ಹೀಗಾಗಿ ಒಂದು ಗಟ್ಟಿ ನೆಲದ ಮೇಲೆ ನಿಂತಂಥ ಸರ್ಕಾರ ಇಲ್ಲ. ದುರ್ದೈವವೆಂದರೆ ನಿಮಗೆ ಸಮಯ ಇದೆ. ಆದುದರಿಂದ, ನಾನು ನಿಮ್ಮನ್ನು ಬ್ಲೇಮ್ ಮಾಡುವುದಿಲ್ಲ. ಆ ಕಾರಣ ಯಾವುದೋ ಒಂದು ಬ್ಯಾಷ್ ಮಾಡಿ, ಯಾವುದೇ ಕಾಲಕ್ಕೂ ಕಾಣದಿರತಕ್ಕಂಥ ಕನ್ಸಾಲಿಡೇಟ್ ಫಂಡ್‌ಗೆ 500 ಕೋಟಿ ರೂಪಾಯಿಗಳನ್ನು ಛಾರ್ಜ್ ಮಾಡಿದಂಥ ಸರ್ಕಾರ ತನ್ನದೇ ವ್ಯಾಪ್ತಿಯಲ್ಲಿಟ್ಟುಕೊಂಡು ರಾಜ್ಯದಲ್ಲಿ ದೊಡ್ಡ ಪ್ರಮಾಣದ ಬ್ಯಾಷ್ ನಡೆಯುತ್ತದೆಂದು ಅದಕ್ಕಾಗಿ ಈ ದುಡ್ಡು ಕೊಡುತ್ತೇವೆಂದು ಇದ್ದೀರಿ. ನಿಮ್ಮ ಸರ್ಕಾರದಿಂದ ರೈತರಿಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ನಾನು ನಿಮಗೆ ಸಲಾಮು ಹಾಕುತ್ತೇನೆ. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಕೊಟ್ಟಂಥ ದುಡ್ಡನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. ''ನಾವು ರೈತರ ಪರವಾಗಿದ್ದೇವೆ, ನಾವು ರೈತರ ಪರವಾಗಿದ್ದೇವೆ'' ಎಂದು ಹೇಳುತ್ತಿದ್ದೀರಿ. ಮಳೆ ಬಂದಾಗ ಕರಸೇವೆ ಮಾಡುವುದಕ್ಕೆ ನಾವು ಆಯೋಧ್ಯೆಗೆ ಹೋಗಬೇಕು. ಇಲ್ಲಿ ಸೇವೆ ಮಾಡುವವರು ಯಾರೂ ಇಲ್ಲ. ಈ ದೃಷ್ಟಿಯಿಂದ ಮಾನ್ಯ ಹಿರಿಯ ಸಚಿವರು ಬಹಳ ಅನುಭವಿಗಳಿದ್ದೀರಿ, ನಾನು ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದುದರಿಂದ, ಕೇಂದ್ರ ಸರ್ಕಾರದ ಒಂದು ನೀತಿ ಏನಿದೆ, ಈ ನೀತಿಯನ್ನು ಪ್ರತಿಭಟಿಸಲೇಬೇಕು. ರೈತರ ಪರ ಪ್ರತಿಭಟಿಸೋಣ, ಅನಂತರ ಕಾಂಗ್ರೆಸ್, ಬಿಜೆಪಿ ಅನಂತರ ಜನತಾ ದಳವನ್ನು ಪ್ರತಿಭಟಿಸೋಣ. ರೈತರಾಗಿ ನಾವು ಪ್ರತಿಭಟನೆ ಮಾಡೋಣ. ಮೊನ್ನೆ ರಾಜ್ಯದಲ್ಲಿ ನಡೆದಂಥ ಭೀಕರ ಚಂಡಮಾರುತದಿಂದ ಆದಂಥ ಲುಕ್ಸಾನು ಒಂದು ಕಡೆ. ಅದು ಪ್ರಕೃತಿಯ ಕೊಡುಗೆ. ಗೊಬ್ಬರದ ಬೆಲೆ ಏರಿಸಿ ರೈತನ ಸೊಂಟ ಮುರಿದದ್ದು ನಿಮ್ಮ ಸರ್ಕಾರದ ಕೊಡುಗೆ. ಈ ಕೊಡುಗೆಗಳ ಹೊರೆಯನ್ನು ಹೊತ್ತು ನಾವು ಯಾವ ದೇಶದಲ್ಲಿದ್ದೇವೆ ಎನ್ನತಕ್ಕಂಥಾದ್ದನ್ನು ಈಗ ನಾವು ನೆನಪಿಸಿಕೊಳ್ಳಬೇಕಾಗಿದೆ. ಈಗಿರುವ ಪರಿಸ್ಥಿತಿಯಲ್ಲಿ ನೆಮ್ಮದಿ, ಶಾಂತಿಯಿಂದ ಬದುಕುತ್ತೇವೆ ಎನ್ನುವಂಥ ಸ್ಥಿತಿ ಇಲ್ಲ. ಆ ವ್ಯಾಖ್ಯಾನಗಳಿಗೆ ನಾನು ಹೋಗುವುದಿಲ್ಲ. ಆದುದರಿಂದ, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವ ಬ್ಯಾಂಕಿನ ಕಪಿಮುಷ್ಟಿಗೆ ಸಿಕ್ಕಿ ಕೇಂದ್ರ ಸರ್ಕಾರ ಯಾವ ಕೆಲಸವನ್ನು ಮಾಡಿದೆಯೋ, ಇದು ಅಪರಾಧವೆಂದು ಹೇಳಬೇಕಾಗಿದೆ. ನಾವು ಹೋಗಿ ಹೇಳಿದ್ದೇವೆ. ಎಲ್ಲಾ ಪಕ್ಷಗಳ ನಿಯೋಗ ದೆಹಲಿಗೆ ಹೋದಾಗ ಮಾನ್ಯ ಮನಮೋಹನ್ ಸಿಂಗ್‌ರವರನ್ನು ಭೇಟಿಮಾಡಿ ಇರತಕ್ಕ ವಾಸ್ತವ ಸ್ಥಿತಿಯನ್ನು ಹೇಳಿದ್ದೇವೆ. 3500 ಕೋಟಿ ರೂಪಾಯಿಗಳ ಬ್ಯಾಂಕ್ ಸ್ಕ್ಯಾಂಗೆ ನಿಮ್ಮಲ್ಲಿ ದುಡ್ಡಿದೆ, 1400 ಕೋಟಿ ರೂ. ಬೋಫಾರ್ಸ್ ಸ್ಕ್ಯಾಂಡ್ಲಿಂಗ್‌ನಲ್ಲಿ ಅವ್ಯವಹಾರಕ್ಕೆ ದುಡ್ಡಿದೆ. ಇಲ್ಲಿ ಯಾರ ಸಲುವಾಗಿ ಮಾಡಿದ್ದುದು 100 ಕ್ಕೆ 72 ಪರ್ಸೆಂಟ್ ಇರತಕ್ಕ ರೈತರಿಗೆ, ದಿನನಿತ್ಯ ನಿಮಗೆ ಬೆಳೆಯನ್ನು ಬೆಳೆದು ಕೊಡುವವನಿಗೆ, ಮಾರ್ಕೆಟ್ ಏನಾದರೂ ಇದೆಯೆ? ಎಂದರೆ ಅದು ಬೈಯರ್ಸ್ ಮಾರ್ಕೆಟ್, ಗೊಬ್ಬರ ಸೆಲ್ಲರ್ಸ್ ಮಾರ್ಕೆಟ್. ಅವನಿಗೆ ಸಿಕ್ಕತಕ್ಕ ಇನ್‌ಪುಟ್ಸ್‌ನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುವವನು ಬೆಲೆ ನಿಗದಿಮಾಡುತ್ತಾನೆ, ಇಲ್ಲಿ ಕೊಂಡುಕೊಳ್ಳುವವನು ರೈತನಿಗೆ ಬೆಲೆಯನ್ನು ನಿಗದಿ ಮಾಡುತ್ತಾನೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅವರ ಕುತ್ತಿಗೆಯನ್ನು ಹಿಸುಕುತ್ತಿವೆ. ಕೇಂದ್ರ ಸರ್ಕಾರ ಇವನಿಗೆ ಬೆಲೆಯನ್ನು ನಿಗದಿ ಮಾಡುತ್ತದೆ. ರಾಜ್ಯ ಸರ್ಕಾರ ವಸೂಲಿ ಮಾಡುತ್ತದೆ. ಈ ದೇಶದಲ್ಲಿ ಇಂಥ ವಿಪರ್ಯಾಸ ನಡೆಯಬಹುದು ಅಷ್ಟೇ ಹೊರತು ಬೇರೆ ಯಾವ ದೇಶಗಳಲ್ಲೂ ಇಂಥಾದ್ದು ನಡೆಯುವುದಕ್ಕೆ ಸಾಧ್ಯವಿಲ್ಲ. ನಾನು ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಇಲ್ಲಿ ನನ್ನ ಬೇಳೆ ಬೇಯಿಸಿಕೊಳ್ಳುವ ಇಚ್ಛೆ ನನಗೆ ಇಲ್ಲ. ನೀವು ಗ್ರಾಮ ಜೀವನದಿಂದ ಬಂದಿರುವುದರಿಂದ ನೀವು ಆತ್ಮವಂಚನೆ ಮಾಡಿಕೊಳ್ಳಬೇಡಿ. ಕೇಂದ್ರ ಸರ್ಕಾರಕ್ಕೆ ಎಲ್ಲರೂ ಹೇಳೋಣ. ಈ ಸ್ಥಿತಿಯಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ಅಧೋಗತಿಗೆ ಹೋಗುತ್ತದೆ, ಯಾವುದು ಅಗ್ರಿಕಲ್ಚರಲ್ ಡಾಮಿನೇಟ್ ಎಕಾನಮಿ ಇದೆ ಮತ್ತು ಅದರಮೇಲೆ

ಬೀಳತಕ್ಕ ಪ್ರೆಷರ್, ನಾವು ಪುನಃ ಹೊರದೇಶಗಳಿಗೆ ಭಿಕ್ಷುಕರಾಗಿ ಆಹಾರ ಧಾನ್ಯಗಳನ್ನು ಕೇಳುವ ಸ್ಥಿತಿಗೆ ಹೋಗಬಾರದು, ಅದು ಈ ಸಾರಿ ಗೊತ್ತಾಗುತ್ತದೆಂಬ ಮಾತನ್ನು ಹೇಳಬಯಸುತ್ತೇನೆ. ನೀವು ಈ ಸದನದಲ್ಲಿ ಒಂದು ರೆಸಲ್ಯೂಷನ್ ಮಾಡಿ, ಗೊಬ್ಬರದ ಸಬ್ಸಿಡಿಯನ್ನು ನೀವು ಏನು ವಾಪಸು ತೆಗೆದುಕೊಂಡಿದ್ದೀರಿ ಅದನ್ನು ರೀಇಂಟ್ರಡ್ಯೂಸ್ ಮಾಡಿ ಎನ್ನತಕ್ಕ ಒಂದು ರೆಸಲ್ಯೂಷನ್‌ನ್ನು ಮಾಡಿ. ಅದನ್ನು ನಾವು ಕೇಂದ್ರಕ್ಕೆ ಕಳುಹಿಸಿ ನೋಡೋಣ. ಅದರ ಪರಿಣಾಮ ಏನಾಗುತ್ತದೆಂದು ನೋಡೋಣ. ಈ ಕೆಲಸವನ್ನು ತಾವು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೆ, ಕಳೆದ 1 ವರ್ಷದಿಂದ ಈ ದೇಶದ ರೈತರ ಸಮಾಧಿಯನ್ನು ಮಾಡತಕ್ಕ ಪ್ರಯತ್ನವನ್ನು ಕೇಂದ್ರ ಸರ್ಕಾರ, ಅದರ ಜೊತೆಗೆ ನಮ್ಮ ರಾಜ್ಯ ಸರ್ಕಾರ ಬಹಳ ಪರಿಣಾಮಕಾರಿಯಾಗಿ ಯಶಸ್ವಿಯಾಗಿ ಮಾಡುತ್ತಾ ಬಂದಿದೆ. ಇದಕ್ಕಾಗಿ ಅವರಿಗೆ ಮತ್ತು ನಿಮಗೆ, ಕರ್ನಾಟಕ ರಾಜ್ಯದ ರೈತರು ಮತ್ತು ಇಡೀ ದೇಶದ ರೈತರು ಬಹಳ ಕೃತಜ್ಞರಾಗಿರಬೇಕು. ನಿಮಗೆ ಅಧಿಕಾರವನ್ನು ಕೊಟ್ಟು ಇಲ್ಲಿ ಸುಮಾರು 180-190 ಜನರನ್ನು ಕೂಡಿಸಿದ್ದಕ್ಕೆ ಹಾಗೂ ಕೇಂದ್ರದಲ್ಲಿ ನಮ್ಮ ಶ್ಯಾನುಭೋಗರನ್ನು ಅಧಿಕಾರಕ್ಕೆ ತಂದಿದ್ದಕ್ಕೆ ನೀವು ಏನು ಮಾಡಬೇಕೋ ಅದನ್ನೇ ಮಾಡಿದ್ದೀರಿ. ಸಂತೋಷಕರವಾದ ಕೆಲಸವನ್ನು ನೀವು ಮಾಡಿದ್ದಕ್ಕಾಗಿ ಈ ದೇಶದ ಜನರು ನಿಮಗೆ ಕೃತಜ್ಞರಾಗಿರಬೇಕು. ಇವತ್ತು ಉತ್ಪತ್ತಿ ಕಡಿಮೆಯಾಗುವುದಕ್ಕೆ ಗೊಬ್ಬರದ ಬಳಕೆ ಕಡಿಮೆಯಾಗುತ್ತಿರುವುದೇ ಕಾರಣವೆಂದು ಸರಕಾರದ ಅಂಕಿಅಂಶಗಳೇ ಹೇಳುತ್ತಿದೆ. ಒಂದು ಕಾಲದಲ್ಲಿ ನಾವು ತಿನ್ನತಕ್ಕ ಆಹಾರವನ್ನು ಹೊರದೇಶದಿಂದ ತರಿಸಲಾಗುತ್ತಿತ್ತು. ಆಗ ಹ್ಯಾಂಡ್ ಟು ಮೌತ್ ಎಂದು ಹೇಳುತ್ತಿದ್ದರು. ಆ ಹಾಂಡ್ ಟು ಮೌತ್ ಎನ್ನತಕ್ಕ ಪಾಲಿಸಿ ಹೋಗಿ, ನಮ್ಮಲ್ಲಿ ಈಗ ಆಹಾರ ಉತ್ಪಾದನೆ ಜಾಸ್ತಿಯಾಗಿ ಫುಡ್ ಫಾರ್ ವರ್ಕ್ ಎನ್ನತಕ್ಕ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಅಂದರೆ ಈ ದೇಶದ ರೈತ ಅನ್ನ ಇಲ್ಲದ ಜನರಿಗೆ ಅನ್ನವನ್ನು ಕೊಟ್ಟು, ಹೊರದೇಶದಿಂದ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳುತ್ತಿದ್ದ ಅಪಮಾನಕರವಾದ ಪರಿಸ್ಥಿತಿ ಏನಿತ್ತು ಅದನ್ನು ಈ ದೇಶದ ರೈತ ಹೋಗಲಾಡಿಸಿ ರಾಷ್ಟ್ರೀಯ ಅಪಮಾನವನ್ನು ತಪ್ಪಿಸುವ ಕೆಲಸವನ್ನು ಮಾಡಿದ, ಅದಕ್ಕೆ ನೀವು ಕೊಟ್ಟಿರತಕ್ಕ ಬಳುವಳಿ ಏನೆಂದರೆ ಸುಮಾರು 200 ರಿಂದ 240 ಪಟ್ಟು ಗೊಬ್ಬರದ ಬೆಲೆಯನ್ನು ಜಾಸ್ತಿ ಮಾಡಿರತಕ್ಕದ್ದು. ನಿಮಗೆ ಯಜಮಾನರು ಈ ದೇಶದಲ್ಲಿರತಕ್ಕ ಜನತೆಯೋ ಮತದಾರರೋ ಅಥವಾ ವಾಷಿಂಗ್‌ಟನ್‌ನಲ್ಲಿರತಕ್ಕ ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್ ಎಂದು ನಾನು ಪ್ರಶ್ನೆಯನ್ನು ಕೇಳಬೇಕಾಗಿದೆ. ಈ ದೇಶದ ಆಗುಹೋಗುಗಳು ಈ ದೇಶದ ಜನತೆಯ ಕೈಲಿ ಇರಬೇಕಾಗಿತ್ತು ಅದು ಇಲ್ಲ. ಶಾನುಭೋಗರ ಜುಟ್ಟು ಹಿಡಿದುಕೊಂಡು ಅಲ್ಲಾಡಿಸತಕ್ಕಂಥವರು ವಾಷಿಂಗ್‌ಟನ್‌ನಲ್ಲಿದ್ದಾರೆ. ಅವರು ಹೇಳಿದ ಹಾಗೆ ಇಲ್ಲಿ ಕುಣಿಯಬೇಕು. ಇಲ್ಲಿ ಇದಕ್ಕೆ ಸಬ್ಸಿಡಿ ಬೇಡ, ಕೊಡುವುದು ಬೇಡ. ಮಳೆ ಇಲ್ಲದಿದ್ದರೂ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿಯಬೇಕು ಅಂದರೆ ನಿಮ್ಮ ಸರಕಾರಗಳು ಅದಕ್ಕೆ ತಯಾರಿವೆ. ವಾಷಿಂಗ್‌ಟನ್‌ನಲ್ಲಿ ಹೇಳಿದರೆ ಕೊಡೆ ಹಿಡಿಯುವುದಕ್ಕೆ ಕೂಡ ತಯಾರಿದ್ದೀರಿ. ನಿಮ್ಮ ನೀತಿಯಿಂದ ನೀವು ಪ್ರಾರಂಭ ಮಾಡಿದ್ದು ಏನು ಮೊದಲು ಎಣ್ಣೆ ಉತ್ಪಾದನೆ ಕಡಿಮೆ ಇದೆ ಎಂದು ಹೊರದೇಶದಿಂದ ಎಣ್ಣೆಯನ್ನು ತರಿಸಿದಿರಿ ಪಾಮೊಲಿನ್ ಎಣ್ಣೆಯನ್ನು ತರಿಸಿದಿರಿ ಎಣ್ಣೆಗೇ ಅದು ನಿಲ್ಲಿತೇ? ಇಲ್ಲ ಆಮೇಲೆ ಏನು ಹೇಳಿದಿರಿ ನಮಗೆ ಗೋಧಿ ಉತ್ಪಾದನೆ ಕಡಿಮೆಯಾಗಿದೆ ಬಳಕೆ ಜಾಸ್ತಿಯಾಗಿದೆ ಎಂದು ಹೇಳಿ ಪುನಃ ಅಮೇರಿಕಾ ಮತ್ತಿತರ ಹೊರದೇಶಗಳಿಂದ ಗೋಧಿಯನ್ನು ತರಿಸಿದಿರಿ ಅದೂ ಆಯಿತು. ಈಗ ಯಾವುದಕ್ಕೆ ಬಂದಿದ್ದೀರಿ ಅಕ್ಕಿಗೆ ಬಂದಿದ್ದೀರಿ. ಅಕ್ಕಿಯನ್ನು ತರಿಸುವಂತಹ ಪರಿಸ್ಥಿತಿ ಉಂಟಾಗಿದೆ. ಅದು ಬರೀ ಅಷ್ಟಕ್ಕೇ ನಿಂತಿಲ್ಲ. ಇವತ್ತು ನಮ್ಮ ಭಾಗದಲ್ಲಿ ನಾವು ಅನೇಕ ಜಿಲ್ಲೆಗಳಲ್ಲಿ ನಾವು ರೇಷ್ಮೆ ಬೆಳೆಯುತ್ತಿದ್ದೇವೆ. ರೇಷ್ಮೆ ಬೆಲೆ ಹೋದ ವರ್ಷ ಈ ತಿಂಗಳಲ್ಲಿ ಸುಮಾರು 200 ಕ್ಕಿಂತ

ಹೆಚ್ಚು 1 ಕೆ.ಜಿ. ಗೂಡಿನ ಬೆಲೆ ಇತ್ತು. ಇವತ್ತು ಇದು 70-80-90ರ ಮೇಲೆ ಕೇಳುವವರು ಇಲ್ಲ. ಅಂದರೆ ಗೊಬ್ಬರದ ಬೆಲೆ 200 ಪಟ್ಟು ಜಾಸ್ತಿ ಮಾಡಿ, ರೈತನು ಉತ್ಪಾದನೆ ಮಾಡುತ್ತಿರತಕ್ಕಂತಹದ್ದಕ್ಕೆ ನೂರಕ್ಕೆ ನೂರರಷ್ಟು ಬೆಲೆ ಕಡಿಮೆಯಾಗಿದೆ. ಈ ರೀತಿ ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ದಿನಪತ್ರಿಕೆಯಲ್ಲಿ ನೋಡಿದರೆ ಕಣ್ಣಲ್ಲಿ ನೀರು ಬರುತ್ತದೆ. ಆ ರೇಷ್ಮೆಗೂಡಿನ ಬೆಲೆ ನೋಡಿದರೆ ಬಹಳ ಬೇಸರವಾಗುತ್ತದೆ. 70-80ಕ್ಕೆ ಮಾರಾಟ ಮಾಡುತ್ತಿದ್ದಾರೆ ಎಂದರೆ ಕಣ್ಣಲ್ಲಿ ನೀರು ಬರುತ್ತದೆ. ಏನು ಮಾಡುವುದು ನಮ್ಮ ದೇಶದ ದುರಾದೃಷ್ಟ. ಯಾರು ಈ ಪರಿಸ್ಥಿತಿಗೆ ತಂದು ದೂಡಿದ್ದಾರೋ ಅವರನ್ನು ಜೀವಸಹಿತ ಸುಡಬೇಕಾಗಿತ್ತು, ಆ ಪರಿಸ್ಥಿತಿ ಇಲ್ಲ. ಅದಕ್ಕೆ ಬದಲಾಗಿ ಈ ದೇಶದಲ್ಲಿ ದೇಶಕ್ಕೆ ಬೆಂಕಿ ಹಚ್ಚತಕ್ಕಂತಹ ಕಾರ್ಯ ನಡೆಯುತ್ತಿದೆ. ದೇಶ ಮಾರಾಟ ಮಾಡುವವರು ಒಂದು ಕಡೆ ಮತ್ತೊಂದು ಕಡೆ ದೇಶಕ್ಕೆ ಬೆಂಕಿ ಇಡುತ್ತಿರುವವರು ಇದ್ದಾರೆ. ಇವರಿಗೆ ಬೆಲೆ ಏರಿಕೆಯಾಗಿರತಕ್ಕಂಥಾದ್ದು ಸಮಸ್ಯೆಯಾಗಲಿಲ್ಲ. ದೇಶದಲ್ಲಿ ಯಾವುದೋ ಒಂದು ದೇವಸ್ಥಾನ ಕಟ್ಟುವುದು ಒಂದು ಸಮಸ್ಯೆಯಾಯಿತು ಇದನ್ನು ಬಹಳ ನೊಂದು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಆ ಚರ್ಚೆಗೆ ಮೊದಲನೇ ದಿನವೇ ಪ್ರಯಾರಿಟಿ ಸಿಕ್ಕಿದೆ. ಇದಕ್ಕೆ ಕೊನೆಯಲ್ಲಿ ಸಿಕ್ಕಿದೆ.

ಶ್ರೀ ಸಿ. ಬೈರೇಗೌಡ:- ಇದು ಸಮಸ್ಯೆಯಾಗಲಿಲ್ಲ. ಇದಕ್ಕೋಸ್ಕರ ಗಲಭೆಯಾಗಲಿಲ್ಲ, ಇದಕ್ಕೋಸ್ಕರ ಎಲ್ಲೂ ನೂರಾರು, ಸಾವಿರಾರು ಜನ ಸಾಯಲಿಲ್ಲ. ಅಲ್ಲಿ ಒಂದು ದೇವಸ್ಥಾನ ಕಟ್ಟುವುದು ಒಂದು ದೊಡ್ಡ ಸಮಸ್ಯೆಯಾಯಿತು. ಈ ದೇವಸ್ಥಾನ ಕಟ್ಟುವುದರಿಂದ ಹೊಟ್ಟೆಗೆ ಬರುವುದಿಲ್ಲ, ಬಟ್ಟೆಗೆ ಬರುವುದಿಲ್ಲ. ಅದು ಒಂದು ಸಮಸ್ಯೆಯಾಯಿತು. ಯಡಿಯೂರಪ್ಪನವರದ್ದನ್ನೂ ಹೇಳುತ್ತೇನೆ. ಹೋದ ಸಾರಿ ಮಾನ್ಯ ಯಡಿಯೂರಪ್ಪನವರು ಈ ಸದನದಲ್ಲಿ ಹೇಳಿದ್ದಾರೆ, ಇದು ಕಟ್ ಮೋಷನ್‌ನನ್ನು ಲೋಕ ಸಭೆಯಲ್ಲಿ ಮೂವ್ ಮಾಡಿದರು 3 ಕಂಡೀಷನ್ ಹಾಕಿದರು ಒಂದು ಗೊಬ್ಬರದ ಬೆಲೆಯನ್ನು ಕಡಿಮೆ ಮಾಡಬೇಕು ಸಬ್ಸಿಡಿಯನ್ನು ಪುನಃ ಕೊಡಬೇಕು ಎರಡನೆಯದು ರಾಜೀವ್‌ಗಾಂಧಿಯವರ ಫೌಂಡೇಷನ್‌ಗೆ 100 ಕೋಟಿ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಳ್ಳಬೇಕು ಮೂರನೆಯದು ಇನ್‌ಕಮ್ ಟ್ಯಾಕ್ಸ್ ಲಿಮಿಟ್ ಅನ್ನು 48,000ಕ್ಕೆ ಏರಿಸಬೇಕು. ಇದರ ಬಗ್ಗೆ ಬಹಳ ದೀರ್ಘವಾಗಿ ಚರ್ಚೆ ನಡೆಯಿತು. ನಾನು ಅಂದುಕೊಂಡಿದ್ದೆ ರೈತರ ಸಹಾಯಕ್ಕೆ ಯಾರ್‍ಯಾರೋ ಬರುತ್ತಿದ್ದಾರೆ ಅವರಿಗೆ ಅನುಕೂಲವಾಗುತ್ತದೆಂದು ಸಂತೋಷವಾಯಿತು. ಸ್ವಾಮಿ 100 ಕೋಟಿ ರೂಪಾಯಿಗಳನ್ನು ಕೊಡುವುದಿಲ್ಲವೆಂದು ಈ ರೀತಿ ಹೇಳಿದ ಜನ ಮಾನ್ಯ ರಾಜೀವ್‌ಗಾಂಧಿಯವರ ಫೌಂಡೇಷನ್‌ಗೆ ಕೊಡುವುದಿಲ್ಲವೆಂದು ಹೇಳಿದಮೇಲೆ, ಇನ್‌ಕಮ್ ಟ್ಯಾಕ್ಸ್ ಮೊತ್ತವನ್ನು ಏರಿಸುತ್ತೇವೆಂದು ಹೇಳಿದಮೇಲೆ ಅಲ್ಲಿ ಹೋಗಿ ಕಟ್‌ಮೋಷನ್ ಮೂವ್ ಮಾಡಲಿಲ್ಲ, ಇದು ದಾಖಲೆಯಲ್ಲಿದೆ. ಯಾರ ಕೈಗೆ ಈ ದೇಶವನ್ನು ಕೊಡಬೇಕೆಂದು ಹೊರಟಿರತಕ್ಕಂಥದ್ದು, ಈ ರೀತಿ ರೈತರನ್ನು ಸಮಾಧಿ ಮಾಡಿರತಕ್ಕಂಥ ನೀವು ಮತ್ತೆ ದೇಶಕ್ಕೆ ಬೆಂಕಿ ಇಟ್ಟು ಬೂದಿ ಮಾಡುತ್ತಿರತಕ್ಕಂಥ ಬಿ.ಜೆ.ಪಿ. ಅಂಥವರ ಕೈಗೆ ಈ ದೇಶ ಸಿಕ್ಕಿದೆ. ಅಲ್ಲಿ ಅವರು ಅಧಿಕೃತವಾದ ವಿರೋಧಪಕ್ಷ ಅಧಿಕೃತವಿರೋಧಪಕ್ಷವಾಗಿರುವ ಇವರಿಗೆ ಇದು ಸಮಸ್ಯೆಯಾಗಲಿಲ್ಲ. ಈ ದೇಶದ ರೈತರ ಸಮಸ್ಯೆ ಸಮಸ್ಯೆಯಾಗಲಿಲ್ಲ. ಇದು ಆಗಿರತಕ್ಕಂಥದ್ದು ದೇಶವನ್ನು ಬೂದಿ ಮಾಡತಕ್ಕಂಥ ಸಮಸ್ಯೆಯಾಗಿದೆ. ಮಾನ್ಯ ಯಡಿಯೂರಪ್ಪನವರನ್ನು ಕೇಳಿದೆ. ಸ್ವಾಮಿ ಲೋಕಸಭೆಯಲ್ಲಿ ನಿಮ್ಮವರು ಕಟ್‌ಮೋಷನ್ ಮೂವ್ ಮಾಡಿದ್ದಾರೆ, ಅದರ ಪರವಾಗಿ ನಿಮ್ಮವರು ನಿಲ್ಲುವುದಿಲ್ಲ. ಆವಾಗ ನೀವು ಏನು ಮಾಡುತ್ತಿದ್ದೀರಿ ಎಂದು ಕೇಳಿದೆ. ಮಾನ್ಯ ಯಡಿಯೂರಪ್ಪನವರನ್ನು ರಾಜೀನಾಮೆ ಕೊಡುತ್ತೀರಾ ಎಂದು ಕೇಳಿದೆ. ನಾನು ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದರು. ಆದರೆ ಯಡಿಯೂರಪ್ಪನವರು ರಾಜೀನಾಮೆ ಕೊಟ್ಟರೋ ಬಿಟ್ಟರೋ ಗೊತ್ತಿಲ್ಲ. ನಾನು ಬಹುಶಃ

ಅಧಿವೇಶನ ಇವತ್ತೇ ಕೊನೆಯದಿವಸ, ನಾಳೆಗೆ ಹೋಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ರೈತರ ಸಮಸ್ಯೆ ಎಂದರೆ ಅಲ್ಲೂ ಕೂಡ ಅಷ್ಟೇ ಇಲ್ಲೂ ಕೂಡ ಅಷ್ಟೇ. ಕೊನೆ ಕೊನೆಗೆ ಚರ್ಚೆಗೆ ಬರುವುದು. ಮಾನ್ಯ ಯಡಿಯೂರಪ್ಪನವರು ಈ ಬಗ್ಗೆ ಎದೆ ತಟ್ಟಿದ್ದೆ ತಟ್ಟಿದ್ದುದು, ಕಣ್ಣೀರು ಬಿಟ್ಟಿದ್ದೇ ಬಿಟ್ಟಿದ್ದುದು ಕಣ್ಣೀರನ್ನು ಸುರಿಸಿ ಸುರಿಸಿ ಕಣ್ಣೀರ ಪ್ರವಾಹವಾಗಿ 7–8 ಜಿಲ್ಲೆಗಳಲ್ಲಿ ದೊಡ್ಡ ಪ್ರವಾಹವಾಗಿ ಹರಿಯಿತು. ಇವತ್ತು ಇಲ್ಲಿ ಚರ್ಚೆಯಾಗುತ್ತಿದೆ, ಗೊಬ್ಬರದ ವಿಷಯದಲ್ಲಿ ಚರ್ಚೆಯಾಗುತ್ತಿದ್ದರೆ ನನಗನಿಸುತ್ತದೆ ಅವರು ಇದ್ದಿದ್ದರೆ ನಮಗೆ ಒಂದು ರೀತಿ ಸ್ಫೂರ್ತಿ ಬರುತ್ತಿತ್ತು. ಇಂಥ ಒಂದು ಪ್ರಮುಖವಾದಂಥ ವಿಷಯ ಚರ್ಚೆಯಾಗುತ್ತಿರತಕ್ಕಂಥ ಸಂದರ್ಭದಲ್ಲಿ ಅವರು ಇಲ್ಲ. ಇದು ಏನು ತೋರಿಸುತ್ತದೆಂಬುದು ಗೊತ್ತಿಲ್ಲ. ಯಾವ ಮಟ್ಟದಲ್ಲಿ ರೈತರ ವಿಚಾರದಲ್ಲಿ ಯಾರು ಯಾರು ಎಷ್ಟರಮಟ್ಟಿಗೆ, ಶ್ರದ್ಧೆ ವಹಿಸುತ್ತಿದ್ದಾರೆ, ಏನಾಗುತ್ತಿದೆ ಎನ್ನುವುದನ್ನು ತೋರಿಸುತ್ತದೆ. ರೈತರ ಸಮಸ್ಯೆ ಅಧಃಪತನಕ್ಕೆ ಇಳಿಯುತ್ತಿದೆ. ಇದು ರೈತರನ್ನು ಮುಗಿಸತಕ್ಕಂಥ ಗೊಬ್ಬರದ ನೀತಿಯಾಗಿದೆ. ನಿಮ್ಮ ಅಂಕಿಅಂಶಗಳ ಪ್ರಕಾರವೇ ನಮ್ಮ ರಾಜ್ಯದಲ್ಲಿ ಗೊಬ್ಬರದ ಬಳಕೆ ಕಡಿಮೆಯಾಗಿದೆ. ನಮ್ಮಲ್ಲಿ ಗೊಬ್ಬರವನ್ನು ಸಮತೋಲನ ರೀತಿಯಲ್ಲಿ ಹಾಕಬೇಕಾಗುತ್ತದೆ. ಇದಕ್ಕೆ ಎನ್.ಟಿ.ಕೆ. ಎಂದು ಹೇಳುತ್ತಾರೆ. ಒಂದೊಂದು ಬೆಳೆಗೆ ಒಂದೊಂದು ಪ್ರಮಾಣದ ಗೊಬ್ಬರವನ್ನು ಹಾಕಬೇಕಾಗುತ್ತದೆ ಇಲ್ಲದಿದ್ದರೆ ಭೂಮಿ ಕೆಟ್ಟು ಹೋಗುತ್ತದೆ. ಬೆಳೆ ಬರುವುದಿಲ್ಲ. ಇವತ್ತು ಏನಾಗಿದೆ ಎಂದರೆ ಸಂಯುಕ್ತ ಗೊಬ್ಬರದ ಬೆಲೆ 200 ಇದ್ದುದು 240 ಪಟ್ಟು ಜಾಸ್ತಿಯಾಗಿದೆ. ಇವತ್ತು ರೈತರು ಅದನ್ನು ಉಪಯೋಗಿಸುವುದನ್ನೇ ಬಿಟ್ಟಿದ್ದಾರೆ. ಬರೀ ಯೂರಿಯಾ ಉಪಯೋಗಿಸಿ ಬೆಳೆದರೆ ಬೆಳೆ ಕಪ್ಪಗೆ ಒಳ್ಳೆಯ ಹಸಿರುಬಣ್ಣಕ್ಕೆ ತಿರುಗುತ್ತದೆ, ರೈತ ಖುಷಿಪಡುತ್ತಾರೆ. ಆದರೆ ಅದರಿಂದ ಇಳುವರಿ ಬರುವುದಿಲ್ಲ. ಇಳುವರಿ ಬರುವುದಕ್ಕೆ ಬಹಳ ಮುಖ್ಯವಾಗಿರತಕ್ಕಂಥದ್ದು ಆ ಭೂಮಿಯ ಗುಣ, ಅದು ಹಾಳಾಗುತ್ತದೆ. ಅದನ್ನು ಉಪಯೋಗಿಸುವುದರಿಂದ ಭೂಮಿ ಉಪ್ಪಾಗುತ್ತದೆ, ಇಲ್ಲ ಹುಳಿಯಾಗುತ್ತದೆ. ಇದೇ ರೀತಿ ಮುಂದುವರಿದರೆ ಬರೀ ಯೂರಿಯಾ ಉಪಯೋಗಿಸಿ ಬೆಳೆಯನ್ನು ಬೆಳೆಯಬೇಕಾಗುತ್ತದೆ. ಬರೆ ಯೂರಿಯಾ ಉಪಯೋಗಿಸುವುದಕ್ಕೆ ವಿಧಿಯಿಲ್ಲದೆ ನೀವೇ ರೈತರನ್ನು ತಳ್ಳುತ್ತಿದ್ದೀರಿ, ಇದರಿಂದ ಆ ಭೂಮಿ ಸ್ಟ್ರಕ್ಚರ್ ಬದಲಾವಣೆಯಾಗುತ್ತದೆ, ಸಾವಿರಾರು ವರ್ಷಗಳಿಂದ, ಲಕ್ಷಾಂತರ ವರ್ಷಗಳಿಂದ ಬೆಳೆಯುತ್ತಿದ್ದ ಆ ಭೂಮಿ ಬೆಳೆ ಬೆಳೆಯುವುದಕ್ಕಾಗದಂಥ ಪರಿಸ್ಥಿತಿಗೆ ಬರುತ್ತಿದೆ.

4-10 P.M.

ಅದು ಪುನಃ ಯಥಾಸ್ಥಿತಿಗೆ ಬರಬೇಕಾದರೆ ನೂರಾರು ವರ್ಷ ಬೇಕಾಗುತ್ತದೆ. ಇದು ನೀವು ಈ ದೇಶಕ್ಕೆ ಕೊಟ್ಟಿರತಕ್ಕ ಬಳುವಳಿ. ನಮ್ಮ ದೇಶದ ವ್ಯವಸಾಯವನ್ನು ಈ ದೇಶದ ರೈತರನ್ನು ಹಾಳು ಮಾಡತಕ್ಕ ರೀತಿ ವ್ಯವಸ್ಥಿತವಾದ ಒಂದು ಅಂತರಾಷ್ಟ್ರೀಯ ಸಂಚು ಇದರಲ್ಲಿ ಅಡಗಿದೆ. ಅದರಿಂದಾಗಿಯೇ ವರ್ಲ್ಡ್ ಬ್ಯಾಂಕ್ ಮಾತು ಕೇಳಿ, ಗೊಬ್ಬರದ ಬೆಲೆಯನ್ನು ಜಾಸ್ತಿ ಮಾಡಿರತಕ್ಕದ್ದು. ಅದರ ಪರಿಣಾಮ ನೋಡುವುದಕ್ಕೆ ನೂರಾರು ವರ್ಷವೇನು ಕಾಯಬೇಕಾಗಿಲ್ಲ, ಒಂದೇ ವರ್ಷದಲ್ಲಿ ಕಾಣಿಸುತ್ತಿದೆ.

ಶ್ರೀ ಜಿ.ಎಸ್. ಶಿವನಂಜಪ್ಪ:– ಹುಚ್ಚಮಾಸ್ತಿಗೌಡರೇ ಜಾಸ್ತಿ ಮಾಡಿದ್ದಾರೆಂಬ ರೀತಿಯಲ್ಲಿ ಚುಚ್ಚಿ ಚುಚ್ಚಿ ಅನ್ನುತ್ತಿದ್ದೀರಲ್ಲ. ಇದರ ಬಗ್ಗೆ ನಾವು ಪಕ್ಷಾತೀತವಾಗಿ ಮಾತನಾಡಬೇಕೆಂದು ಇದ್ದೆವು.

ಶ್ರೀ ಸಿ. ಬೈರೇಗೌಡ:– ನಾವು ಅಲ್ಲಿ ಕುಳಿತಿದ್ದರೆ ಏನು ಬೇಕೋ ಹೇಳುತ್ತಿದ್ದೆವು. ದೆಹಲಿಗೆ ನೀವು ಬಂದಿದ್ದಿರೋ ಇಲ್ಲವೋ ಗೊತ್ತಿಲ್ಲ. ಇದೆಲ್ಲವನ್ನು ಹೋಗಿ ಹೇಳಿ ಎಂದು ಹೇಳುತ್ತಿದ್ದೇನೆ. ಹೇಳುವುದಿಲ್ಲವೆಂದರೆ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ:– ರಸಗೊಬ್ಬರಗಳ ಬಗ್ಗೆ ಬೆಲೆ ಏರಿಸತಕ್ಕದ್ದು ಮತ್ತು

ನಿಯಂತ್ರಣದ ಬಗ್ಗೆ ಪಾರ್ಲಿಮೆಂಟಿನಲ್ಲಿ ಒಂದು ಕಮಿಟಿ ಮಾಡಿದ್ದಾರೆ. ಆ ಕಮಿಟಿಯವರು ಎಲ್ಲಾ ಪಾರ್ಟಿ ಮುಖಂಡರನ್ನು ಆಹ್ವಾನ ಮಾಡಿದ್ದಾರೆ. ಅವರೆಲ್ಲರೂ ಅಮೂಲಾಗ್ರವಾಗಿ ಪರಿಶೀಲನೆ ಪಾರ್ಲಿಮೆಂಟಿಗೆ ವರದಿಯನ್ನು ಕೊಟ್ಟಿದ್ದಾರೆ. ವರದಿ ಕೊಟ್ಟಿರುವುದರಲ್ಲಿ ಬೈರೇಗೌಡ ಪಾರ್ಟಿಯವರು ಇದ್ದಾರೆ. ನಮ್ಮ ರಾಜ್ಯದ ಪಾರ್ಲಿಮೆಂಟ್ ಸದಸ್ಯರು, ಬಿಜೆಪಿ ಮುಖಂಡರು ಇದ್ದಾರೆಂದು ಅವರ ಗಮನಕ್ಕೆ ತರಬಯಸುತ್ತೇನೆ....

ಶ್ರೀ ಸಿ. ಬೈರೇಗೌಡ:- ನೀವು ಆ ವರದಿಯನ್ನು ಓದದಿದ್ದರೆ ಏನು ಮಾಡುವುದಕ್ಕಾಗುತ್ತದೆ? ಅಲ್ಲಿ ದೇವೇಗೌಡರು ಸದಸ್ಯರಾಗಿದ್ದುದು ನಿಜ. ಅವರು ಏನು ವರದಿ ಕೊಟ್ಟಿದ್ದಾರೆ ಅದನ್ನು ಓದತಕ್ಕದ್ದು ಮುಖ್ಯ. ಏನು ಇದೆ ಎಂದು ಓದದಿದ್ದರೆ ಅದಕ್ಕೆ ನಾನು ನಿಮಗೆ ಸಹಾಯ ಮಾಡಲಿಕ್ಕೆ ತಯಾರಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಗೌಡರ ಗದ್ದಲ ಹಾಸನದಲ್ಲೇ ಇರಲಿ, ರಾಜ್ಯಕ್ಕೆ ಬೇಡ....

ಶ್ರೀ ಸಿ. ಬೈರೇಗೌಡ:- ಇದರಿಂದ ಇವತ್ತಿನ ದಿವಸ ಏನಾಗುತ್ತಿದೆ ಎಂದರೆ ನಮ್ಮ ರಾಜ್ಯದಲ್ಲಿಯೂ ಸಹ ಗೊಬ್ಬರದ ಬಳಕೆ ಕಡಿಮೆಯಾಗುತ್ತಿದೆ ಇಳುವರಿ ಕಡಿಮೆಯಾಗುತ್ತಿದೆ. 1957 ರಿಂದ 60ಕ್ಕೆ ಮೊದಲು ಏನು ಒಂದು ಪರಿಸ್ಥಿತಿ ಇತ್ತು Shift to mouth ಎಂದು ಏನಿತ್ತು ಅದು ಈಗಲೇ ಪ್ರಾರಂಭವಾಗಿದೆ. ನಮ್ಮ ರಾಜ್ಯದಲ್ಲಿ ಮಾರ್ಕೆಟಿಂಗ್ ಫೆಡರೇಷನ್, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಏನಿದೆ ಅದನ್ನು ಸಾಯಿಸಿದ್ದೀರಿ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಗೊಬ್ಬರಕ್ಕೆ ಷೇರು 10 ಪರ್ಸೆಂಟ್ ಇತ್ತು; ಮಾರ್ಕೆಟಿಂಗ್ ಫೆಡರೇಷನ್ನಿನದು ಶೇಕಡ 30ರಷ್ಟು ಇತ್ತು. ಅವರು ಗೊಬ್ಬರ ತರತಕ್ಕ ಮತ್ತು ವ್ಯಾಪಾರ ಮಾಡತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಅವರ ಹತ್ತಿರ ಹಣ ಇಲ್ಲ. ಏತಕ್ಕೆ ಇಲ್ಲವೆಂದರೆ, ಗೊಬ್ಬರದ ಬೆಲೆ ಜಾಸ್ತಿಯಾಗಿರುವುದರಿಂದ. ಮೊದಲು ಒಂದೆರಡು ಕೋಟಿ ರೂಪಾಯಿಗಳನ್ನು ಹಾಕಬೇಕಾದ ಪರಿಸ್ಥಿತಿ ಇತ್ತು, ಈಗ ಅದೇ ಗೊಬ್ಬರಕ್ಕೆ 3-4 ಕೋಟಿ ರೂಪಾಯಿಗಳ ಬಂಡವಾಳ ಹೂಡಬೇಕು. ಆ ಬಂಡವಾಳವನ್ನು ನೀವು ಕೊಡುತ್ತೀರಾ? ಆ ಬಂಡವಾಳ ಕೊಡುವುದಕ್ಕೆ ನೀವು ತಯಾರಿಲ್ಲ. ಅದರಿಂದ ಏನಾಗುತ್ತದೆಂದರೆ ವ್ಯಾಪಾರಸ್ಥರೇನಿದ್ದಾರೆ ಅವರು ಮನಸಾಇಚ್ಛೆ ಬೆಲೆ ನಿಗದಿ ಮಾಡುತ್ತಿದ್ದಾರೆ. ಅವರು ಮುಕ್ತ ಮಾರುಕಟ್ಟೆಯಲ್ಲಿ ಎಷ್ಟಕ್ಕೆ ಬೇಕಾದರೂ ಮಾರಾಟ ಮಾಡಬಹುದು. ಆ ಮುಕ್ತ ಮಾರುಕಟ್ಟೆಯಲ್ಲಿ ಖುಷಿ ಬಂತು ಅಂದರೆ ಏನು ಬೇಕಾದರೂ ಮಾಡಬಹುದು. ಮೊನ್ನೆ ಕಾಫಿ ಬೆಳೆಗೆ ಗೊಬ್ಬರ ಹಾಕುವುದಕ್ಕಾಗಲಿಲ್ಲವೆಂದು ಈಗಾಗಲೇ ಚಂದ್ರೇಗೌಡರು ಹೇಳಿದರು. ಏನು ಗೊಬ್ಬರ ಇದೆ, ಅದು ಸಿಗದೇ ಕಾಫಿಗೆ ಹಾಕುವುದಕ್ಕೆ ಆಗಲಿಲ್ಲವೆಂದರು. ಕಾರಣ ಏನು? ಗೊಬ್ಬರವನ್ನು hoard ಮಾಡುತ್ತಾರೆ. ಯಾವಾಗ ರೈತರಿಗೆ ಬೇಕೋ ಆಗ ಅವರ ಕುತ್ತಿಗೆ ಹಿಸುಕುತ್ತಾರೆ. ರೈತರಿಗೆ ಗಾಳ ಹಾಕಿ, ಅವರು ಕೇಳುವಷ್ಟು ಹಣ ಕೊಟ್ಟರೆ ಗೊಬ್ಬರವನ್ನು ಹೊರಗಡೆ ಬಿಡುತ್ತಾರೆ, ಇಲ್ಲದಿದ್ದರೆ ಇಲ್ಲ. ಈಗಾಗಲೇ ಇದು ನಮ್ಮ ರಾಜ್ಯದಲ್ಲಿಯೂ ಕೂಡ ಆಗಿದೆ. ಪ್ಲಾಂಟೇಷನ್ ಬೆಳೆಗೆ ಗೊಬ್ಬರ ಹಾಕುವುದಕ್ಕೆ ಆಗಿಲ್ಲವೆಂದು ಗುರುದೇವ ಅವರು ಹೇಳಿದ್ದಾರೆ. ಸಾಯುವವರೆಗೂ ಎಳೆದು ಸಾಯಿಸಬೇಕೆಂದು ರೈತರ ಕುತ್ತಿಗೆಗೆ ಗಾಳ ಹಾಕಿದ್ದಾರೆ. ಅದಕ್ಕೆ ತಾವು ಏನು ಮಾಡಿದ್ದೀರಿ? ಏನೂ ಮಾಡಿಲ್ಲ. ಒಂದು ಹೇಳಿಕೆ; ಚಂದ್ರೇಗೌಡರು ಹೇಳಿರತಕ್ಕ ಒಂದು ಹೇಳಿಕೆ, ನಮ್ಮ ಮಾಜಿ ಮಂತ್ರಿಗಳು ಕೊಟ್ಟು ಸುಮ್ಮನಾದರು ಅಷ್ಟೇ. ರೈತರ ನೆರವಿಗೆ ಬಂದಿರಾ? ಕೇಂದ್ರದಿಂದ 17.53 ಕೋಟಿ ರೂಪಾಯಿ ನೆರವು ಬಂದಿದೆಯೆಂದು ಹೇಳುತ್ತಿದ್ದೀರಿ. ಅದರಲ್ಲಿ ಎಷ್ಟು ಬಳಕೆಯಾಯಿತು? ನನಗೆ ಗೊತ್ತಿರುವ ಹಾಗೆ 2 ಅಥವಾ 3 ಕೋಟಿ ಬಳಕೆಯಾಗಿರಬಹುದು. ಅಥವಾ ಜಾಸ್ತಿಯೆಂದರೆ 5 ಕೋಟಿ ಆಗಿರಬಹುದು. ಉಳಿದಿರತಕ್ಕ ಕೇಂದ್ರ ಸರ್ಕಾರದ ಹಣ ಬಳಕೆಯಾಗಿಲ್ಲ. ಕಾರಣ ಎಂದರೆ, ಕೊಂಡುಕೊಳ್ಳುವ ಆ ಒಂದು ಶಕ್ತಿ ನಮ್ಮ ರೈತರಲ್ಲಿ ಇಲ್ಲವಾಗಿದೆ. ಅವರು ನಿಃಶಕ್ತರಾಗಿದ್ದಾರೆ. ನೀವು ರಿಯಾಯಿತಿ ಕೊಡುತ್ತೇವೆಂದರೂ ಕೂಡ ಇವತ್ತಿನ ದಿವಸ

ಬಳಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಈ ರಿಯಾಯಿತಿಯನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಇವತ್ತು ಆಹಾರದ ಮಾರುಕಟ್ಟೆಗಳಿಗೆ ಸರ್‌ಪ್ಲಸ್ ಯಾರಿಂದ ಬರುತ್ತಿದೆ? ಮಾರ್ಕೆಟ್‌ಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಬರುತ್ತಿದೆಯೇ? ಮಾರ್ಕೆಟಬಲ್ ಸರ್‌ಪ್ಲಸ್ ಅವರ ಹತ್ತಿರ ಇದೆಯೇ? ಏಕೆ ಇವತ್ತು ರೈತರನ್ನು ದೊಡ್ಡ ರೈತ, ಸಣ್ಣ ರೈತ, ಈ ರೈತ ಎಂದು ಹೇಳಿ ರೈತರ ಒಗ್ಗಟ್ಟನ್ನು ಒಡೆಯತಕ್ಕದ್ದು? ರೈತರನ್ನು ವಿಭಾಗ ಮಾಡಿ ಒಡೆಯತಕ್ಕ ಪ್ರಯತ್ನ ಏಕೆ ಮಾಡುತ್ತಿದ್ದೀರಿ? ಇವತ್ತು ತಾವು ದೊಡ್ಡ ರೈತರಿಗೆ ಕೊಡುವ ಬಳುವಳಿಯ ಈ ಮಾರ್ಕೆಟಬಲ್ ಸರ್‌ಪ್ಲಸ್ ಇರತಕ್ಕದ್ದು. ಅದನ್ನು ಬೆಳೆಯತಕ್ಕವರು ದೊಡ್ಡ ರೈತರೇ. ಅವರಿಗೆ ಬೆಲೆ ಜಾಸ್ತಿ ಇತ್ತು. ಏಕೆ ಈ ನೀತಿ? ಅರ್ಥ ಇಲ್ಲದ ನೀತಿ. ಇದನ್ನು ಮೊದಲು ತೆಗೆದುಹಾಕಿ. ರೈತರನ್ನು ವಿಧವಿಧವಾಗಿ ವರ್ಗೀಕರಣ ಮಾಡುವುದಕ್ಕೆ ಹೋಗಬೇಡಿ. ಇವತ್ತು ನಮ್ಮದು ಟ್ಯಾಕ್ಸ್ ಇದೆ. ಅದಕ್ಕೆ ಟರ್ನ್ ಓವರ್ ಟ್ಯಾಕ್ಸ್ ಹಾಕಿದ್ದೀರಿ. ಒಂದು ಟನ್‌ಗೆ ಸುಮಾರು 200 ರೂಪಾಯಿ ಆಗುತ್ತದೆ. 2 ಪರ್ಸೆಂಟ್ ಟರ್ನ್ ಓವರ್ ಟ್ಯಾಕ್ಸ್ ಹಾಕಿದ್ದೀರಿ. ಬೇರೆ ರಾಜ್ಯಗಳಲ್ಲಿ ಟರ್ನ್ ಓವರ್ ಟ್ಯಾಕ್ಸ್ ಇಲ್ಲ. ಸೇಲ್ಸ್ ಟ್ಯಾಕ್ಸ್ ಕೂಡ ಅಲ್ಲಿ ಕಡಿಮೆ ಇದೆ. ನೀವು ರೈತರ ಉದ್ಧಾರ ಮಾಡುವವರು ಏನು ಮಾಡಿದ್ದೀರಿ? ಕೇಂದ್ರ ಸರ್ಕಾರದವರು ಏನೋ ಮಾಡುತ್ತಾರೆ, ನಾವು ಏನು ಮಾಡುವುದು, ದೇಶಕ್ಕೇ ಒಂದು ನೀತಿ ಮಾಡುತ್ತಾರೆ, ಅದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ನೀವು ಸುಲಭದಲ್ಲಿ ಹೇಳುತ್ತೀರಿ. ಆದರೆ ನೀವೇ ಟರ್ನ್ ಓವರ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ ಹಾಕಿದ್ದೀರಿ. ಇದನ್ನು ಏಕೆ ಕಡಿಮೆ ಮಾಡಬಾರದು? ಆ ದಿಕ್ಕಿನಲ್ಲಾದರೂ ಯೋಚನೆ ಮಾಡಿ. ತಾವು ಆ ದಿಕ್ಕಿನಲ್ಲಿ ಯೋಚನೆ ಮಾಡಿಲ್ಲ. ಇನ್ನು ಲೆವಿಯನ್ನು ವಸೂಲಿ ಮಾಡುತ್ತಿದ್ದೀರಿ. ನಾವು ರೈತರಿಂದ ಲೆವಿ ತೆಗೆದುಕೊಳ್ಳುತ್ತಿಲ್ಲ, ಮಿಲ್ ಪಾಯಿಂಟ್‌ನಲ್ಲಿ ತೆಗೆದುಕೊಳ್ಳುತ್ತಿದ್ದೇವೆಂದು ತಾವು ಸುಲಭವಾಗಿ ಹೇಳುತ್ತೀರಿ. ಮಿಲ್ ಮಾಲೀಕರು ಧರ್ಮ ಸಂಸ್ಥೆ ನಡೆಸುತ್ತಿದ್ದಾರೆಯೇ ಅವರು ಏನು ಮಠಾಧೀಶರೇ? ಅವರೂ ಕೊಂಡುಕೊಳ್ಳಬೇಕಾದರೆ ನಿಮ್ಮ ಲೆವಿ ಏನಿದೆ ಅದನ್ನು ಕೊಟ್ಟರೆ ಎಷ್ಟು ನಷ್ಟವಾಗುತ್ತದೆಯೋ ಅದನ್ನು ಅನುಸರಿಸಿ ಕೊಂಡುಕೊಳ್ಳುತ್ತಾರೆ. ಅದರಿಂದ ಮಿಲ್ ಮಾಲೀಕನಿಗೆ ನಷ್ಟ ಇಲ್ಲ. ನಷ್ಟ ಆಗುತ್ತಿರುವುದು ರೈತರಿಗೇ. ನೀವು ಯಾವಾಗ ರೈತರಿಗೆ ಕೊಡಬೇಕಾದುದನ್ನು ಈ ಸಬ್ಸಿಡಿ ವಜಾ ಮಾಡಿದ್ದೀರೋ, ನೀವು ಇತರೆಯವರಿಗೆ ಕಡಿಮೆ ದರದಲ್ಲಿ ಆಹಾರಧಾನ್ಯ ಕೊಡತಕ್ಕ ನೀತಿ ಯಾವುದು? ಸರಿಯಾದ ನೀತಿಯೇ? ಯಾರಿಗೂ ನೀವು ಕೊಡಬೇಡಿ. ರೈತನಿಗೆ ಯಾವಾಗ ಇಲ್ಲವೋ ಇತರರಿಗೂ ಕಡಿಮೆ ದರದಲ್ಲಿ ಏಕೆ ಆಹಾರಧಾನ್ಯ ಕೊಡುತ್ತೀರಿ? ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಏಕೆ? ಇವತ್ತು ಲೆವಿ ಕೊಡುವುದಕ್ಕಾಗುವುದಿಲ್ಲವೆಂದು ತಾವು ರಾಜ್ಯ ಸರ್ಕಾರದವರು ಹೇಳಿ. ಏಕೆ ಕೊಡಬೇಕು ಲೆವಿ? ಏನು ನೀವು ರೈತರನ್ನು ಉದ್ಧಾರ ಮಾಡಿರುವುದು? ಯಾವ ಕಾರಣಕ್ಕೋಸ್ಕರ ನೀವು ಲೆವಿ ವಸೂಲಿ ಮಾಡುತ್ತೀರಿ? ಮಿಲ್ ಪಾಯಿಂಟ್ ಇರಬಹುದು, ಮತ್ತೊಂದು ಇರಬಹುದು, ಏನಿದೆ ನಿಮಗೆ ಆಧಾರ? ಮಿಲ್ ಪಾಯಿಂಟ್‌ನಲ್ಲೇ ಆಗಲಿ ಲೆವಿ ಕೇಳುವುದಕ್ಕೆ ಏನು ಅಧಿಕಾರ ಇದೆ? ಯಾವ ನೈತಿಕ ಆಧಾರದ ಮೇಲೆ ನೀವು ಕೇಳುತ್ತಿದ್ದೀರಿ ಲೆವಿಯನ್ನು? ಏಕೆ ಇದನ್ನು ಹೇಳಿ ನೀವು. ಲೆವಿ ವಸೂಲಿ ಮಾಡುವುದಿಲ್ಲವೆಂದು ಹೇಳಿ. ರೈತನಿಗೆ ಕೊನೆಯ ಪಕ್ಷ ಕ್ವಿಂಟಾಲ್ ಮೇಲೆ 10 ರೂಪಾಯಿ 20 ರೂಪಾಯಿ ಜಾಸ್ತಿ ಸಿಗುತ್ತದೆ. ದಯವಿಟ್ಟು ಆ ಕೆಲಸ ಮಾಡಿ. ನಾನು ಆಗಲೇ ಹೇಳಿದ್ದೇನೆ. ವರ್ತಕರು ಮೊನಾಪಲಿ ಮಾಡಿಕೊಂಡು ರೈತರ ಕುತ್ತಿಗೆಗೆ ಗಾಳ ಹಾಕುತ್ತಾರೆ. ಅದನ್ನು ತಪ್ಪಿಸಬೇಕಾದರೆ ಸಹಕಾರ ಸಂಸ್ಥೆಗಳನ್ನು ಬಲಪಡಿಸಿ. ಮಾರ್ಕೆಟಿಂಗ್ ಫೆಡರೇಷನ್, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅದರ ಮೂಲಕ ಅವರು ಬೇರೆ ಕೆಲಸ ಮಾಡದಿದ್ದರೂ ಚಿಂತೆಯಿಲ್ಲ ಅವುಗಳ ಮೂಲಕ ನೀವು ಗೊಬ್ಬರ ಕೊಡುವುದಕ್ಕೆ ವ್ಯವಸ್ಥೆ ಮಾಡಿ. ಇವತ್ತು 17.53 ಕೋಟಿ ರೂಪಾಯಿಗಳ ಜೊತೆಗೆ ಸುಮಾರು 30 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರುತ್ತದೆಂದು ನಿಮ್ಮ ನಿರೀಕ್ಷೆಯಿದೆ. ಅದನ್ನು ಬೇರೆಯದಕ್ಕೆ ಉಪಯೋಗಿಸದೆ

ರೈತರಿಗೆ ಕಡಿಮೆ ದರದಲ್ಲಿ ಗೊಬ್ಬರವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿ. ಕೇಂದ್ರದಿಂದ ಏನೇ ಮಾಡಲಿ, ನೀವು ಸಹ ರೈತರ ನೆರವಿಗೆ ಬರತಕ್ಕ ಅವಕಾಶಗಳು ಇವೆ. ಅದನ್ನು ತಾವು ದಯವಿಟ್ಟು ಮಾಡಿ. ಏನೂ ಇಲ್ಲದೆ ಅವರು ಹೇಳುತ್ತಾರೆ ನಾವು ಕೇಳುತ್ತೇವೆಂದರೆ ಏನು ಹೇಳಬೇಕಾಗುತ್ತದೆಂದರೆ ಇದು ಅರ್ಥವಿಲ್ಲದ ತರ್ಕ. ಈ ಅರ್ಥವಿಲ್ಲದ ತರ್ಕವನ್ನು ಬಿಟ್ಟು ವಾಸ್ತವಾಂಶವನ್ನು ಗಮನಿಸಿ ರಾಜ್ಯಸರ್ಕಾರ ಅತಿ ಶೀಘ್ರವಾಗಿ ಮಾಡತಕ್ಕದ್ದನ್ನು ನಾನು ಹೇಳಿದ್ದೇನೆ. ಟರ್ನ್ ಓವರ್ ಟ್ಯಾಕ್ಸನ್ನು ತೆಗೆಯಿರಿ, ಮತ್ತೆ ಸೇಲ್ಸ್ ಟ್ಯಾಕ್ಸ್ ತೆಗೆಯಿರಿ. ವರ್ತಕರು ಮಾನಪಲೀಸ್ ಏನು ಹೋಲ್ಡಿಂಗ್ ಮಾಡುತ್ತಾರೆ ಅವರಿಗೆ ಅವಕಾಶವಿಲ್ಲದ ಹಾಗೆ ನಿಮ್ಮ ಸಂಸ್ಥೆಗಳನ್ನು ಬಲಪಡಿಸಿ, ಅವುಗಳ ಮೂಲಕ ಗೊಬ್ಬರವನ್ನು ನೀವು ರೈತರಿಗೆ ಹಂಚುವ ಕೆಲಸವನ್ನು ಮಾಡಿ. ಏನು ಮಾಡದೆ ನಾವು ಸುಮ್ಮನೆ ಕುಳಿತಿರುತ್ತೇವೆಂದರೆ ಅದು ನಿಮ್ಮ ಇಷ್ಟ ನಾವೇನು ಹೇಳುವುದಕ್ಕಾಗುವುದಿಲ್ಲ. ನಾನು ಹೇಳಬೇಕಾಗಿರುವುದನ್ನು ಹೇಳಿದ್ದೇನೆ. ಇಷ್ಟನ್ನು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಅಧ್ಯಕ್ಷರೆ, ನಾನು ಈ ವಿಧಾನ ಸಭೆಯ ಒಳಗೆ ಬಂದಾಗಿನಿಂದಲೂ ವಿಶೇಷವಾಗಿ ಈ ರಾಜ್ಯದ ರೈತನ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿರುವುದನ್ನು ನಾನು ಕಾಣುತ್ತಿದ್ದೇನೆ. ಆದರೆ ಚರ್ಚೆ ಅಷ್ಟಕ್ಕೆ ಮಾತ್ರ ಸೀಮಿತವಾಗಿದೆಯೇ ವಿನಹ ಅದರಿಂದ ಉಪಯೋಗ ಎಷ್ಟರಮಟ್ಟಿಗೆ ರೈತನಿಗೆ ಆಗುತ್ತಿದೆಯೆನ್ನುವುದನ್ನು ಗಮನಿಸಿದರೆ ತುಂಬಾ ನಿರಾಸೆಯಾಗುತ್ತದೆ. ಯಾವುದೇ ಒಂದು ಸಮಸ್ಯೆ ಬಂದರೂ ಕೂಡ ಅದರ ಹೊಡೆತ ಬೀಳುವುದು ಅದರಿಂದ ಕಷ್ಟ ಅನುಭವಿಸುವವನು ಸ್ವಾಭಾವಿಕವಾಗಿ ಈ ರಾಜ್ಯದ ರೈತ ಎನ್ನುವುದನ್ನು ನಾವೆಲ್ಲ ಗಮನಿಸಿದ್ದೇವೆ. ಅತಿವೃಷ್ಟಿಯಾದರೆ ರೈತನಿಗೆ ತೊಂದರೆ, ಮಳೆ ಬರಲಿಲ್ಲವೆಂದರೆ ರೈತನಿಗೆ ತೊಂದರೆ, ಯಾವುದೇ ಒಂದು ಸಂಘ ಸಂಸ್ಥೆಗಳು ಬಂದ್ ಮಾಡಿದರೆ ಅಥವಾ ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ರೈತರು ತೊಂದರೆ ಅನುಭವಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಗೊಬ್ಬರದ ಸಬ್ಸಿಡಿಯನ್ನು ವಿತ್‌ಡ್ರಾ ಮಾಡಿದ್ದನ್ನು ಗಮನಿಸಿದರೆ ರೈತ ಬದುಕುತ್ತಾನೆಯೇ? ಹೀಗೆ ಮಾಡಿದರೆ ರೈತ ನಿರ್ಜೀವಿಯಾಗಿರಬೇಕೇ ಎನ್ನುವ ಪ್ರಶ್ನೆ ಬರುತ್ತಾ ಇದೆ. ಈವೊಂದು ಗೊಬ್ಬರದ ಸಬ್ಸಿಡಿಯನ್ನು ವಾಪಸ್ಸು ತೆಗೆದುಕೊಂಡ ನಂತರ ಆಗಿರುವಂತಹ ವ್ಯತ್ಯಾಸವನ್ನು ಗಮನಿಸಿದರೆ ಅರ್ಥವಾಗುತ್ತದೆ. ಪೊಟ್ಯಾಶಿಯಂ ಫರ್ಟಿಲೈಸರ್ ಬೆಲೆ ಮುಂಚೆ ಇದ್ದದ್ದು ಡೀ ಕಂಟ್ರೋಲ್ ಆಗುವುದಕ್ಕೆ ಮುಂಚೆ ಇದ್ದದ್ದು 1700 ರೂಪಾಯಿ ಪರ್ ಟನ್. ಸಬ್ಸಿಡಿ ವಾಪಸ್ಸು ತೆಗೆದುಕೊಂಡ ನಂತರ ರೇಟು 6200 ರೂಪಾಯಿ. ಅಂದರೆ 264 ಪರ್ಸೆಂಟ್‌ನಷ್ಟು ಇದರ ಬೆಲೆ ಜಾಸ್ತಿಯಾಗಿದೆ. ಜಾಸ್ತಿಯಾಗುವುದಕ್ಕೆ ಯಾರು ಕಾರಣ? ಇದನ್ನು ನಾವು ಸ್ವಲ್ಪ ಗಮನಿಸಬೇಕಾಗಿದೆ. ನಮ್ಮ ಕೇಂದ್ರ ಸರ್ಕಾರ ಸ್ವತಹ ತಾನೇ ಉದ್ದೇಶ ಪಟ್ಟು ಇದನ್ನು ಮಾಡಿತು ಎಂದು ಹೇಳಬೇಕೇ ಅಥವಾ ಬೇರೆ ಯಾರೋ ತಾಳ ಹಾಕಿದಾಗ ಅದಕ್ಕೆ ತಕ್ಕಂತೆ ನಮ್ಮ ಸರ್ಕಾರ ಕುಣಿಯುತ್ತಿದೆಯೇ ಎನ್ನುವ ಪ್ರಶ್ನೆ ಬರುತ್ತಿದೆ. ಒಂದು ಕಡೆ ಐಎಂಎಫ್‌ನವರು ಹೇಳುತ್ತಿದ್ದಾರೆ ಈವೊಂದು ಸಬ್ಸಿಡಿಯನ್ನು ವಿತ್‌ಡ್ರಾ ಮಾಡಬೇಕೆಂದು. ತಕ್ಷಣ ಎಲ್ಲಾ ಪಕ್ಷದವರೂ ಕೂಡ ವಿರೋಧ ಮಾಡಿದ್ದಾರೆ. ಆದರೂ ಕೂಡ ಕೇಂದ್ರಸರ್ಕಾರ ಅದನ್ನು ಮಾಡಲಿಲ್ಲ. ಈ ಒಂದು ವಿಶೇಷವಾದಂಥ ಪರಿಸ್ಥಿತಿ ಬರುವುದಕ್ಕೆ ಕಾರಣ ಮತ್ತು ಈ ಹೊಣೆಯನ್ನು ಕೇಂದ್ರ ಸರ್ಕಾರದ ಮೇಲೆ ಹಾಕದೆ ವಿಧಿ ಇಲ್ಲ. ನಮ್ಮ ಕೇಂದ್ರ ಸರ್ಕಾರದ ನೀತಿ ಕೂಡ ಇದಕ್ಕೆ ಕಾರಣವಾಗಿದೆ. ಸರ್ಕಾರದ ನೀತಿ ನಿಯಮವೇ ಒಂದು ರೀತಿಯ ವಿಚಿತ್ರವಾಗಿದೆ. ರೈತ ಬೆಳೆದಂಥ ಯಾವುದೇ ಬೆಳೆಗಳಿಗೆ ಕೂಡ ಸರಿಯಾದ ಬೆಲೆ ಸಿಗುತ್ತಿಲ್ಲ. ಉದಾಹರಣೆಗೆ ಪೊಟೆಟೊ ಚಿಪ್ಸ್. ರೈತ ಬೆಳೆದ ಆಲೂಗಡ್ಡೆಗೆ ಒಂದು ಕೆ.ಜಿ.ಗೆ ಎರಡು-ಮೂರು ರೂಪಾಯಿ ಸಿಗುತ್ತದೆ. ಆದರೆ ಆಲೂಗಡ್ಡೆ ಚಿಪ್ಸ್‌ಗೆ 50 ಗ್ರಾಮ್‌ಗೆ ಎಂಟು ರೂಪಾಯಿ. ಅಂದರೆ ಒಂದು ಕೆ.ಜಿ.ಗೆ 180 ರೂಪಾಯಿ ಆ ಕಂಪನಿಯವರಿಗೆ ಸಿಗುತ್ತದೆ. ಆದರೆ ರೈತನಿಗೆ ಸಿಗುವುದು ತುಂಬಾ

ಕಡಿಮೆಯಾದರೆ ಕೈಗಾರಿಕೋದ್ಯಮಿ ಯಾರು ಇರುತ್ತಾರೆ ಅವನಿಗೆ ಪೂರ್ಣ ಹಣ ಹೋಗುತ್ತದೆ. ಅದೇ ರೀತಿ ಜೋಳ, ಕೆ.ಜಿ.ಗೆ ನಾಲ್ಕು ರೂಪಾಯಿ ಇದ್ದರೆ, ಅದರಿಂದ ಪಾಪ್‌ಕಾರ್ನ್ ಮಾಡುವಂಥ ಕಂಪನಿಗೆ ಸಿಕ್ಕಾಪಟ್ಟೆ ಹಣ ಸಿಗುತ್ತದೆ. ರೈತ ಬೆಳೆದು ಟೊಮ್ಯಾಟೋಗೆ ಕಡಿಮೆ ಇದ್ದರೆ, ಅವರಿಂದ ತಯಾರು ಮಾಡತಕ್ಕಂಥ ಕಿಚ್‌ಪ್‌ಗೆ ಜಾಸ್ತಿ ಸಿಗುತ್ತದೆ. ನಿಂಬೆಹಣ್ಣಿಗೆ ಕಡಿಮೆ ಬೆಲೆ ಇದ್ದರೆ, ನಿಂಬೆಹಣ್ಣಿನ ಸ್ಕ್ವಾಷ್‌ಗೆ ಸಿಕ್ಕಾಪಟ್ಟೆ ಸಿಗುತ್ತದೆ. ಇನ್ನೊಂದು ಉದಾಹರಣೆ ಕೊಡಬೇಕೆಂದರೆ ಒಂದು ಬುಟ್ಟಿ ಮಾವಿನ ಕಾಯಿಗೆ ಒಂದು ರೂಪಾಯಿ ಇದ್ದರೆ ಬೇಡೇಕರ್ ಉಪ್ಪಿನಕಾಯಿ ಅಂತ ಕೇಳಿದ್ದೇವೆ. ಅವರು ತಯಾರಿಸುವ ಉಪ್ಪಿನಕಾಯಿಗೆ ನೂರು ಪಟ್ಟು ಜಾಸ್ತಿ ಸಿಗುತ್ತದೆ. ಆದ್ದರಿಂದ ಇದು ಇಂಬ್ಯಾಲೆನ್ಸ್ ವ್ಯವಸ್ಥೆ ಇದೆ.

ಅಧ್ಯಕ್ಷರು:- ಉಪ್ಪಿನಕಾಯಿ ಬಗ್ಗೆ ಏನು ಹೇಳಿದಿರಿ?

ಶ್ರೀ ಕೆ.ಎಸ್. ಈಶ್ವರಪ್ಪ:- ಮಾವಿನ ಕಾಯಿ ಏನು ಬೆಳೆಯುತ್ತಾರೆ.....

ಅಧ್ಯಕ್ಷರು:- ಮಾವಿನಕಾಯಿ ಉಪ್ಪಿನಕಾಯಿಯಾಗಿ ಕನ್ವರ್ಟ್ ಆದರೆ ಅದರ ಬೆಲೆ ನೂರು ಪಟ್ಟು ಜಾಸ್ತಿಯಾಗುತ್ತದೆ ಅಲ್ವೆ?

ಶ್ರೀ ಕೆ.ಎಸ್. ಈಶ್ವರಪ್ಪ:- ಅದೇ ರೈತ ಪಾಪ, ರಸ್ತೆಮೇಲೆ ಹೊತ್ತುಕೊಂಡು ಬರುತ್ತಾನೆ. ಅವರ ಬುಟ್ಟಿ ತುಂಬಾ ಮಾವಿನಕಾಯಿಗಳನ್ನು ಕೇಳುವವರೇ ಇಲ್ಲ. ಅವನು ವರ್ಷವಿಡೀ ಗೊಬ್ಬರ ಎಲ್ಲಾ ಹಾಕಿ ಕಷ್ಟಪಟ್ಟು ಬೆಳೆಸುತ್ತಾನೆ. ಆದರೆ ಅವನಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಆಗ ಅವನು ಅದನ್ನು ಇಂಡಸ್ಟ್ರಿಗೆ ಹಾಕುತ್ತಾನೆ. ಇಂಡಸ್ಟ್ರೀಯವರು ಉಪ್ಪಿನಕಾಯಿ ಮಾಡುತ್ತಾರೆ, ಮತ್ತು ಇಂಡಸ್ಟ್ರಿಯ ಮಾಲೀಕನಿಗೆ ಹಣ ಸಿಗುತ್ತದೆಯೇ ವಿನಹ ರೈತ ಬೆಳೆದ ಬೆಳೆಗೆ ಸಿಗುವುದಿಲ್ಲ.

ಅಧ್ಯಕ್ಷರು:- ಅದಕ್ಕೆ ವಿಶ್ವ ಪ್ರೋಗ್ರಾಮ್‌ನಲ್ಲಿ ಅವರೇ ಉಪ್ಪಿನಕಾಯಿ ಮಾಡಬಹುದಲ್ಲ?

ಶ್ರೀ ವಾಟಾಳ್ ನಾಗರಾಜ್:- ಎಲ್ಲಾ ಉಪ್ಪಿನಕಾಯಿ ಹಳಸಿಹೋಗಿದೆ.

ಅಧ್ಯಕ್ಷರು:- ನಾನು ಲಘುವಾಗಿ ಈ ವಿಚಾರ ಮಾತನಾಡುತ್ತಾ ಇಲ್ಲ. ಏಕೆಂದರೆ ವಿಶ್ವ ಗೃಹ ಕೈಗಾರಿಕೆಯಲ್ಲಿ ಸಣ್ಣಪುಟ್ಟ ಉಪ್ಪಿನಕಾಯಿ, ಹಪ್ಪಳ ಇವುಗಳನ್ನು ನಮ್ಮ ಹಳ್ಳಿಗಳಲ್ಲಿ ಮಾಡಿದರೆ ಬಾರ್ಟರ್ ವ್ಯವಸ್ಥೆ ಜಾರಿಗೆ ಬರುತ್ತದಲ್ಲ? ನೀವು ಪೇಟೆಗೆ ಏಕೆ ಮಾವಿನಕಾಯಿಯನ್ನು ತೆಗೆದುಕೊಂಡು ಬರಬೇಕು?

ಶ್ರೀ ಕೆ.ಎಸ್. ಈಶ್ವರಪ್ಪ:- ಸರ್ಕಾರದ ನೀತಿ ಏನು? ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಆ ರೈತನಿಗೆ ಸರಿಯಾದ ಬೆಲೆಕೊಟ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಸಾಲ ಕೊಟ್ಟರೆ, ಅವರು ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡುತ್ತಾರೆ. ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಅವನಿಗೆ ಬೆಂಬಲ ಕೊಟ್ಟರೆ ಅವನು ಮುಂದೆ ಬರುತ್ತಾನೆ. ಆದರೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಣ್ಣಸಣ್ಣವರನ್ನು ಹುಡುಕದೆ, ಕೋಟ್ಯಾಧಿಪತಿಗಳನ್ನು ಹುಡುಕುತ್ತಾರೆ. ಅಂತಹವರಿಗೆ ಮಾತ್ರ ಬೆಂಬಲ ಕೊಡುತ್ತಾರೆ. ದೊಡ್ಡ ದೊಡ್ಡ ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡಿದರೆ ಅವರಿಗೆ ಕೊಡುತ್ತಾರೆ. ಸಣ್ಣ ಇಂಡಸ್ಟ್ರಿಗಳಿಗೆ ಅವಕಾಶ ಇಲ್ಲ. 'ವಿಶ್ವ' ದಲ್ಲಿ ತಾವು ಕೊಟ್ಟಿದ್ದರಲ್ಲಿ 70 ರಿಂದ 75 ಪರ್ಸೆಂಟ್‌ನಷ್ಟು ಹಣ ದುರುಪಯೋಗ ಆಗುತ್ತಿದೆ. ಅದಕ್ಕೋಸ್ಕರ....

ಅಧ್ಯಕ್ಷರು:- ದುರುಪಯೋಗದ ಪ್ರಶ್ನೆಗೆ ನಾನು ಬರಲಿಲ್ಲ. 'ವಿಶ್ವ' ಕಾರ್ಯಕ್ರಮದ ಹಿನ್ನಲೆಯಲ್ಲಿ ಇರತಕ್ಕಂಥ ಅಂಶವನ್ನು ನಾನು ಹೇಳಿದೆ ಆ ಟ್ರಸ್ಟ್ ಏನಿದೆ, ನೀವು ಹೇಳುತ್ತಾ ಇರುವುದಕ್ಕೆ ಅದು ಅನ್ವಯವಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ತಾವು ಹೇಳುತ್ತಾ ಇರುವಂಥ ಅಂಶವನ್ನು ಕೂಡ ನಾನು ಒಪ್ಪುತ್ತೇನೆ. ಆದರೆ 'ವಿಶ್ವ' ಯೋಜನೆ ಏನಿದೆ, ಅದರ ಬಗ್ಗೆ ನಂಬಿಕೆ ಹೊರಟುಹೋಗಿದೆ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೇ, ಈ ವಿಶ್ವ ಕಾರ್ಯಕ್ರಮ ನನ್ನ ಕ್ಷೇತ್ರವಾದ ಬೆಂಗಳೂರಿನಲ್ಲಿ ಎರಡು ಜಾಗಗಳಲ್ಲಿ ನಡೆಯುತ್ತಿದೆ. ಒಂದು ಜಾಗದಲ್ಲಿ ಗಾರ್ಮೆಂಟ್ಸ್ ಮಾಡುತ್ತಿದ್ದಾರೆ ಮತ್ತು ಇನ್ನೊಂದು ಜಾಗದಲ್ಲಿ ಚಾಕ್ ಮಾಡುತ್ತಿದ್ದಾರೆ. ಹತ್ತಿರದಲ್ಲಿರತಕ್ಕಂಥ ಸುಮಾರು ಮಹಿಳೆಯರು ಅಲ್ಲಿ ಬಂದು ಕೆಲಸ ಮಾಡುತ್ತಿದ್ದಾರೆ. ನಿನ್ನೆ ಸಹ ನಾನು ಹೋಗಿದ್ದೆ. ಸೀಡ್ ಕಾರ್ಪೊರೇಷನ್‌ಗೆ ಬೇಕಾದ ಬ್ಯಾಗ್‌ಗಳನ್ನು ಅಲ್ಲಿ ಸ್ಟಿಚ್ ಮಾಡುತ್ತಿದ್ದಾರೆ. ಅವರಿಗೆ ಒಂದು ದಿವಸಕ್ಕೆ 10-15 ರೂಪಾಯಿ ಸಿಗುತ್ತದೆ. ಇಂತಹ ಒಂದು ಒಳ್ಳೆಯ ಕಾರ್ಯಕ್ರಮ ನನ್ನ ಕ್ಷೇತ್ರದಲ್ಲಿ ನಡೆಯುತ್ತಿದೆ. ಇಂತಹ ಬಹುಶಃ ಎಂಟು-ಹತ್ತು ಸೆಂಟರ್‌ಗಳಲ್ಲಿ ಈ ತರಹ ಮಾಡಿದರೆ ಏನಾಗಬಹುದು? ತಮಗೆ ಗೊತ್ತಿದೆ ಇವತ್ತು ಬೆಂಗಳೂರು ನಗರದಲ್ಲಿ ಬಡ ಮಹಿಳೆಯರು ಮನೆಕೆಲಸಕ್ಕೆ ಹೋಗಬೇಕಾಗುತ್ತದೆ. ಅಲ್ಲಿ ಅವರಿಗೆ ಒಂದು ತಿಂಗಳಿಗೆ 80-100 ರೂಪಾಯಿ ಮಾತ್ರ ಸಿಗುತ್ತದೆ. ಅದೇ ಇಲ್ಲಿ ಅವರಿಗೆ ತಿಂಗಳಿಗೆ 250 ರಿಂದ 300 ರೂಪಾಯಿ ಸಿಗುತ್ತದೆ. ಮಾನ್ಯ ಈಶ್ವರಪ್ಪನವರು ನನ್ನ ಜೊತೆಗೆ ಬಂದರೆ ತೋರಿಸಿಕೊಡುತ್ತೇನೆ. ಎಲ್ಲಿಯಾದರೂ ದುರುಪಯೋಗವಾಗುತ್ತಾ ಇದ್ದರೆ, ಅಲ್ಲಿ ಕ್ರಮ ತೆಗೆದುಕೊಳ್ಳಲಿ. ಆದರೆ, ಇಡೀ ಪ್ರೋಗ್ರಾಂ ವಿಚಾರ ಹೇಳುವುದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:- ವಿಶ್ವ ಸ್ಕೀಮಿನಲ್ಲಿ, ಖಂಡಿತ ಅನ್ಯಾಯ ಆಗಿದೆ, ಮೋಸ ಆಗಿದೆ....

ಶ್ರೀ ಸಿ. ಬೈರೇಗೌಡ:- ತಮ್ಮ ಆಲೋಚನೆ ಏನಿದೆ, ಅದು ನೂರಕ್ಕೆ ನೂರರಷ್ಟು ಸತ್ಯವಾಗಿರತಕ್ಕಂಥಾದ್ದು. ಆ ಕೆಲಸ ಆಗಲೇಬೇಕಾಗಿರತಕ್ಕಂಥಾದ್ದು ನಿಜ. ಆದರೆ, ಮುಂದುವರೆದ ದೇಶಗಳು ಏನಿವೆ, ಅಭಿವೃದ್ಧಿ ಹೊಂದುವಂಥ ರಾಷ್ಟ್ರಗಳು ಏನಿವೆ, ಅವು ಸ್ವಾವಲಂಬನೆ ಪಡೆಯುವುದಕ್ಕೆ ವಿಶ್ವ ಬ್ಯಾಂಕಿನ ನೆರವು ಬರುವುದಿಲ್ಲ. ವಿಶ್ವ ಕಾರ್ಯಕ್ರಮಕ್ಕೆ ವಿಶ್ವ ಬ್ಯಾಂಕಿನ ನೆರವು ಇಲ್ಲ. ಆದರೆ, ವಿಶ್ವ ಬ್ಯಾಂಕಿನ ನೆರವು ಎಂದು ಹೇಳತಕ್ಕಂಥಾದ್ದು ಎಂದರೆ, ಗೊಬ್ಬರದ ಸಬ್ಸಿಡಿಯನ್ನು ತೆಗೆದುಹಾಕಿ ಎಂದು ಹೇಳತಕ್ಕಂಥಾದ್ದು. ಇದು ದುರಾದೃಷ್ಟ.

ಶ್ರೀ ಕೆ.ಎಸ್. ಈಶ್ವರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ತಾವು ಹೇಳುವಂಥ ಅಂಶವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಏಕೆಂದರೆ, ನಾನೂ ಕೂಡ ಸಣ್ಣ ಕೈಗಾರಿಕೆಯನ್ನು ನಡೆಸುತ್ತಿದ್ದೇನೆ. ಸಣ್ಣ ಕೈಗಾರಿಕೆ ಪ್ರಾರಂಭ ಮಾಡುವುದಕ್ಕೆ, 'ವಿಶ್ವ' ಯೋಜನೆಯಲ್ಲಿ ಎಷ್ಟು ಕಷ್ಟಪಡಬೇಕೆಂಬುದನ್ನು ನಾನು ಸ್ವತಃ ಅನುಭವಿಸಿದ್ದೇನೆ. ನಾನು ಈ ಯೋಜನೆಯನ್ನು ಸಂಪೂರ್ಣವಾಗಿ ಖಂಡಂ ಮಾಡುತ್ತಾ ಇಲ್ಲ. ಈ ಯೋಜನೆ ಕಾರ್ಯಗತವಾಗಬೇಕಾದರೆ, ಒಬ್ಬ ಯುವಕ ತನ್ನ ಬೆವರು ಸುರಿಸಬೇಕಾಗುತ್ತದೆ. ಯಾರು ಯಾರಿಗೆ ಹಣ ಕೊಡಬೇಕು, ಎಷ್ಟು ದುರುಪಯೋಗವಾಗುತ್ತಿದೆ ಎಂದು, ವಿಶ್ವ ಬಗ್ಗೆಯೇ ಪೂರ್ಣವಾಗಿ ಚರ್ಚೆ ಮಾಡೋಣ. ಏತಕ್ಕೆಂದರೆ, ನಾನು ಈ ಯೋಜನೆಯನ್ನು ಸಂಪೂರ್ಣವಾಗಿ, ಖಂಡಿತ ತಪ್ಪು ಎಂದು ಹೇಳಲಿಲ್ಲ. ನಾನು ಹೇಳುತ್ತಿರುವುದು, ಸರ್ಕಾರದ ನೀತಿ ಒಂದು ವಿಚಿತ್ರವಾಗಿದೆ ಎಂದು ಹೇಳುತ್ತಿದ್ದೇನೆ. ತಾವು ಮಾವಿನಕಾಯಿ ಬಗ್ಗೆ ಹೇಳಿದಿರಿ, ಅದೊಂದೇ ಅಲ್ಲ. ಶ್ಯಾವಿಗೆ ತೆಗೆದುಕೊಳ್ಳಿ, ಇದನ್ನು ತಯಾರು ಮಾಡುವಂಥ ಗೋಧಿಗೆ ರೇಟ್ ಇದೆ. ಇವತ್ತು ದೊಡ್ಡ ದೊಡ್ಡ ಕಂಪನಿಗಳಿಂದ ಈ ಶ್ಯಾವಿಗೆ ಬರುತ್ತಿದೆ, ಈ ಕಂಪನಿಗಳವರು ಮಾಡಿದಂಥ ಶ್ಯಾವಿಗೆಗೆ ಏನು ರೇಟ್ ಇದೆ. ಮತ್ತೆ ನಾನು ಚಿಪ್ಸ್ ವಿಚಾರ ಹೇಳಿದೆ.

ಅಧ್ಯಕ್ಷರು:- ಗೊಬ್ಬರಕ್ಕೂ, ಶ್ಯಾವಿಗೆಗೂ ಏನು ಸಂಬಂಧ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ:- ನಾನು ರೈತರ ಬಗ್ಗೆ ಹೇಳುತ್ತಿದ್ದೇನೆ. ರೈತ ಬೆಳೆದಂಥ ಬೆಳೆಗಳಿಗೆ ಸರಿಯಾದ ಬೆಲೆ ಇಲ್ಲ. ರೈತ ಬೆಳೆ ಬೆಳೆಯಬೇಕಾದರೆ ಏನೇನು ಗೊಬ್ಬರ ಹಾಕುತ್ತಾನೆ ಏನೇನು

ಶ್ರಮ ಪಡುತ್ತಾನೆ, ಅಷ್ಟು ಹಣ ಅವನಿಗೆ ಬರುತ್ತಾ ಇಲ್ಲ. ರೈತನಿಗೆ ಲಾಭ ಇರಲಿ, ಅವನಿಗೆ ಎಷ್ಟು ಖರ್ಚು ಬರುತ್ತದೆ, ಅಷ್ಟು ದುಡ್ಡು ವಾಪಸ್ಸು ಬರುತ್ತಾ ಇಲ್ಲ. ಲಾಭದ ಸಮೇತ ಬಂದಿದ್ದರೆ, ನೀವು ಹೇಳಿದಹಾಗೆ ನಾನು ಒಪ್ಪುತ್ತಿದ್ದೆ. ಇದು ನಮ್ಮ ದೇಶದ ದುರ್ದೈವ. ಇವತ್ತು ವ್ಯಕ್ತಿಗೆ ಶಕ್ತಿ ಕಡಿಮೆ ಇಲ್ಲ. ದುಡಿಮೆಗೆ ಕೈಗಳು ತಯಾರಿವೆ, ಮನಸ್ಸಿದೆ. ಇಡೀ ವಿಶ್ವದಲ್ಲಿ ನಮ್ಮಷ್ಟು ಜನಸಂಖ್ಯೆ ಎಲ್ಲೂ ಇಲ್ಲ. ಆಸಕ್ತಿ ಇರುವಂಥ ಯುವಕರು ಈ ದೇಶದಲ್ಲಿ ಇದ್ದಾರೆ. ಅವರ ಕೈಗೆ ಕೆಲಸ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಯುವಕ ವಿದ್ಯಾವಂತರು, ಗ್ರಾಮಕ್ಕೆ ಹೋದರೆ, ಅವರ ಅಪ್ಪ ಅಮ್ಮ ಹೇಳುತ್ತಾರೆ, ತಮ್ಮ ವಶದಲ್ಲಿರುವಂಥ 1-2 ಎಕರೆ ಜಮೀನನ್ನು ಯಾರಿಗಾದರೂ ಮಾರಿ ಅಥವಾ ಅಡವಿಟ್ಟು ನೀವು ನೌಕರಿಗೆ ಸೇರಿಕೊಳ್ಳಿ. ಈ ಬೇಸಾಯದಲ್ಲಿ ನಾನು ಇಷ್ಟು ದಿವಸ ಒದ್ದಾಡಿದ್ದೇನೆ, ನೀನು ಮಾತ್ರ ಈ ಕೆಲಸ ಮಾಡಬೇಡ ಎಂದು ಹೇಳಿ, ಯುವಕರನ್ನು ಪಟ್ಟಣಕ್ಕೆ ಕಳುಹಿಸತಕ್ಕ ಸ್ಥಿತಿ ಬಂದಿದೆ. ಕೊನೆಯದಾಗಿ, ಈ ವಿಚಾರದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಸಭಾಧ್ಯಕ್ಷಿಯವರೇ,

ಅಧ್ಯಕ್ಷರು:- ಎಷ್ಟು ಸಾರಿ ಸಭಾಧ್ಯಕ್ಷಿಣಿಯರೇ ಎಂದು ಹೇಳುತ್ತೀರಿ. ನಾನು ಒಂದುಸಾರಿ ರೀಕನ್ಸೈಲ್ ಆದೆ. ಆದರೆ ಎಷ್ಟು ಸಾರಿ.......

ಶ್ರೀ ವಾಟಾಳ್ ನಾಗರಾಜ್:- ನಾನೂ ಇದನ್ನು ಗಮನಿಸುತ್ತಿದ್ದೇನೆ. ಅಧ್ಯಕ್ಷರ ಸ್ಥಾನದಲ್ಲಿ ಕೃಷ್ಣರವರು ಕುಳಿತಿದ್ದಾರೆಯೋ ಅಥವಾ ನಾವೇ ಏನಾದರೂ ತಬ್ಬಿಬ್ಬಾದೆವೋ ಅಥವಾ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಕುಳಿತಿದ್ದಾರೆಯೋ ಎಂದು ಅನುಮಾನ ಬರುತ್ತಿದೆ.

ಅಧ್ಯಕ್ಷರು:- ಬಹುಶಃ ನಿಮಗೆ progressive morphia ಏನಾದರೂ ಪ್ರಾರಂಭವಾಯಿತೋ ಏನೋ ಎಂದು ನನಗನಿಸುತ್ತಿದೆ....

ಶ್ರೀ ವಾಟಾಳ್ ನಾಗರಾಜ್:- ನಾನು ಆ ಭಾವನೆಯಿಂದ ಹೇಳುತ್ತಾ ಇಲ್ಲ. ನಿಮ್ಮ ಬಗ್ಗೆ ನಮಗೆ ಅನುಕಂಪ ಇದೆ, ನಿಮ್ಮನ್ನು ನೋಡಿದ ತಕ್ಷಣ ಮಹಿಳೆಯರು ಎಂದು ತಿಳಿದುಕೊಳ್ಳುತ್ತಿದ್ದಾರಲ್ಲ, ಏನು ಪರಿಸ್ಥಿತಿ ಎಂದು ಅಷ್ಟೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಹಿಂದಿನ ಅಧಿವೇಶನದಲ್ಲಿ ತಾವು ಇದ್ದರೂ ಕೂಡ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರೇ ಕುಳಿತಿದ್ದರು. ಆಗ ಸನ್ಮಾನ್ಯ ಸಭಾಧ್ಯಕ್ಷಣಿಯವರೇ ಎಂದು ಹೇಳುವುದು ಅಭ್ಯಾಸವಾಗಿತ್ತು. ಈ ಅಧಿವೇಶನದಲ್ಲಿ ತಾವು ಇಲ್ಲದೇ, ಅವರೇ ಇದ್ದುದರಿಂದ, ಇದೇ ಅಭ್ಯಾಸವಾಗಿ, ತಾವು ಬಂದು ಕುಳಿತಿದ್ದರೂ ಕೂಡ ಸಭಾಧ್ಯಕ್ಷಿಣಿಯವರೇ ಎನ್ನುವಂತಾಗಿದೆ. ಮತ್ತೆ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಹೆಸರು ಪ್ರಸ್ತಾವಕ್ಕೆ ತಂದಿದ್ದಾರೆ. ಅಯೋಧ್ಯೆಯ ರಾಮಮಂದಿರ ವಿಷಯ ಹೇಳಿದರು.

ಅಧ್ಯಕ್ಷರು:- ದಯಮಾಡಿ, ತಾವು ಅಯೋಧ್ಯೆಗೆ ಹೋಗಬೇಡಿ. ಈಗಾಗಲೇ ನಾಲ್ಕುವರೆ ಗಂಟೆಯಾಯಿತು. ಅಯೋಧ್ಯೆಗೂ, ಗೊಬ್ಬರಕ್ಕೂ ಸಂಬಂಧ ಇಲ್ಲ. ''ಇಮಾಮ್ ಸಾಹೇಬರಿಗೂ, ಗೋಕುಲಾಷ್ಠಮಿಗೂ ಸಂಬಂಧ ತಂದು ಗಂಟು ಹಾಕಬೇಡಿ.''

ಶ್ರೀ ಕೆ.ಎಸ್. ಈಶ್ವರಪ್ಪ:- ನನ್ನ ಅಭಿಪ್ರಾಯದಲ್ಲಿ ಅಯೋಧ್ಯೆಗೂ, ಗೊಬ್ಬರಕ್ಕೂ ಸಂಬಂಧ ಇದೆ. ನಾನು ಒಂದೇ ಒಂದು ವಿಷಯವನ್ನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು:- ಬೇಡ. ಅಯೋಧ್ಯೆ ಹತ್ತಿರವೇ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್:- ಅವರು ಯಾವುದೇ ವಿಚಾರ ಮಾಡಿದರೂ ಕೂಡ, ಅಯೋಧ್ಯೆ ವಿಚಾರ ಮಾಡದೇ ಮುಂದಕ್ಕೆ ಹೋಗುವುದೇ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ನಾನು ಅಯೋಧ್ಯೆ ವಿಚಾರಕ್ಕೆ ಹೋಗಲಿಲ್ಲ. ತಮಗೂ ಗೊತ್ತಿದೆ. ನಾನು ಪ್ರಾರಂಭ ಮಾಡಿದಾಗ, ಅಯೋಧ್ಯೆ ವಿಚಾರಕ್ಕೆ ಹೋಗಲಿಲ್ಲ.

ಅಧ್ಯಕ್ಷರು:- ನೀವು ಯಾವಾಗಲೂ ಪೂರ್ಣ ಮಾಡುವುದು ಅಯೋಧ್ಯೆ ವಿಚಾರವಾಗಿಯೇ ಎಂದು ಅವರು ಹೇಳಿದ್ದುದು.

ಶ್ರೀ ಕೆ.ಎಸ್. ಈಶ್ವರಪ್ಪ:- ಪ್ರೋಗ್ರಾಂ ನಡೆಯುತ್ತಲೇ ಇದೆ. ಅದು ಕೊನೆಯವರೆಗೂ ನಡೆಯುತ್ತಲೇ ಇರುತ್ತದೆ. ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಗೊಬ್ಬರದ ಬೆಲೆ ಜಾಸ್ತಿಯಾಗಿದೆ, ಇದರ ಬಗ್ಗೆ ಮಾತನಾಡಿರಿ ಎಂದು ಹೇಳಿದರೆ, ಚಂದ್ರೇಗೌಡರು ಇರಬಹುದು, ಅವರು ಅಯೋಧ್ಯೆ ಬಗ್ಗೆ ಯಡಿಯೂರಪ್ಪನವರ ಬಗ್ಗೆ ಹಗಲೂ ರಾತ್ರಿ ಕನಸು ಕಾಣುತ್ತಿದ್ದಾರೆ. ಏತಕ್ಕೆ ಎಂದು ನನಗೆ ಗೊತ್ತಿಲ್ಲ. ಈ ಮಾತನ್ನು ನಾನು ಏತಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ ಎಂದರೆ, ಸದನ ಪ್ರಾರಂಭವಾದಾಗ ನಾವು ಪ್ರಾರಂಭ ಮಾಡಿದ್ದುದು ಇದನ್ನೇ, ರಸಗೊಬ್ಬರದ ಬಗ್ಗೆ, ನೆರೆಹಾವಳಿ ಬಗ್ಗೆ ಮೊದಲನೆಯದಾಗಿ ಚರ್ಚೆ ಆಗಬೇಕೆಂದು ಹೇಳಿದೆವು. ಆಗ ಯಾರೂ ಕೇಳಲಿಲ್ಲ. ಅಯೋಧ್ಯೆ, ರಾಮ, ರಾಮ ಎಂದು ಕೂಗಿದರು. ಇವತ್ತು ಕೊನೆಯ ದಿನಕ್ಕೆ ಬಂದಿದೆ ಎಂದು ಹೇಳುತ್ತಿದ್ದಾರೆ, ಇವತ್ತು ರಸಗೊಬ್ಬರದ ಬಗ್ಗೆ ಚರ್ಚೆ ಆಗುತ್ತಿದೆ, ಇದು ತುಂಬಾ ದುರಾದೃಷ್ಟ ಎಂದು ಹೇಳಿದರು, ಇದಕ್ಕೆ ಯಾರು ಕಾರಣರು?

ಶ್ರೀ ಸಿ. ಬೈರೇಗೌಡ:- ಕೊನೆಯ ದಿವಸವಾದರೂ ನಾವು ತೆಗೆದುಕೊಂಡಿದ್ದೇವೆ, ಇಲ್ಲಿ ನೋಡಿ ಕುರ್ಚಿ ಖಾಲಿ ಇವೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಇದರ ಬಗ್ಗೆ ಚರ್ಚೆಮಾಡುವುದಕ್ಕೆ ನಾನು ಹಿಂದೆ ಮುಂದೆ ನೋಡುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಗೊಬ್ಬರದ ಬಗ್ಗೆ ನೀವು ನೋಟೀಸ್ ಕೊಡಲಿಲ್ಲ. ಆದರೂ ಮಾತನಾಡುವುದಕ್ಕೆ ಅವಕಾಶವಾಗಿದೆ. ಗೊಬ್ಬರದ ಬಗ್ಗೆ ನೀವು ನೋಟೀಸ್ ಕೊಟ್ಟಿಲ್ಲ ನಾವು ಕೊಟ್ಟಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:- ನಾವು ನೆರೆಹಾವಳಿ ಬಗ್ಗೆ, ಗೊಬ್ಬರದ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ಎಷ್ಟೆಷ್ಟು ನೋಟೀಸ್ ಕೊಟ್ಟಿದ್ದೇವೆ ಎಂಬುದನ್ನು ಅಧ್ಯಕ್ಷರ ಆಫೀಸ್‌ನಲ್ಲಿ ತೆಗೆದು ನೋಡಿದರೆ ಗೊತ್ತಾಗುತ್ತದೆ. ನಾನು ಇದರ ಬಗ್ಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ನಾನು ಏತಕ್ಕೆ ಈ ಅಂಶ ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ನಾವು ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಬೇಕೆಂದು ಯೋಚನೆ ಮಾಡಿ ಆ ದಿಕ್ಕಿನಲ್ಲಿ ಸಾಕಷ್ಟು ಪ್ರಗತಿ ಸಾಧಿಸುತ್ತಿದ್ದೇವೆ. ಆದರೆ ನಾವು ಅದನ್ನು ಮರೆತರೂ ಇವರು ಮರೆಯುವ ಹಾಗೆ ಇಲ್ಲ. ಹಗಲೂರಾತ್ರಿ ಇದನ್ನೇ ಜಪ ಮಾಡುತ್ತಿದ್ದಾರೆ. ರಾಜ್ಯದ ರೈತನ ಬಗ್ಗೆ ನಾವು ವಿಧಾನಸಭೆಗೆ ಕಾಲಿಟ್ಟಾಗಿನಿಂದಲೂ ಕೂಡ ಈ ನಿಮಿಷದವರೆಗೆ, ಸಾಕಷ್ಟು ಚರ್ಚೆಯಾಗುತ್ತಿದೆ. ಇದು ಸಂತೋಷದ ವಿಚಾರ. ಚರ್ಚೆ ಮಾತ್ರ ಆಗುತ್ತಿದೆ, ಇದರ ಲಾಭ ಮಾತ್ರ ರೈತರಿಗೆ ಆಗುತ್ತಿಲ್ಲ, ಇದರ ಬಗ್ಗೆ ಸರಕಾರ ಗಮನಿಸಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತಾ, ಸನ್ಮಾನ್ಯ ಯಡಿಯೂರಪ್ಪನವರ ಬಗ್ಗೆ ಹೇಳಿದರು, ತಮಗೆ ಗೊತ್ತಿದೆಯೋ, ಗೊತ್ತಿಲ್ಲವೋ, ಒಂದು ವಿಚಾರ ಬೈರೇಗೌಡರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ, ನಾವು ನಮ್ಮ ಶಾಸಕಾಂಗ ಸಭೆಯಲ್ಲಿ ಯಾವುದೇ ಚರ್ಚೆಯನ್ನಾದರೂ ಮಾಡಬೇಕಾದರೆ ರೈತರ ಬಗ್ಗೆ ಮುಂಚೆ ಪ್ರಸ್ತಾಪ ಮಾಡುವುದಕ್ಕೆ ನಮ್ಮ ನಾಯಕರು ಹೇಳುತ್ತಾರೆ. ವಿಧಾನಸಭೆಯಲ್ಲಿ ಚರ್ಚೆ ಮಾಡಿ ಮಾಡಿ ಬೇಸತ್ತು, ಇಲ್ಲಿ ಎಷ್ಟು ಚರ್ಚೆ ಮಾಡಿದರೂ ಇಷ್ಟೇ ಎಂದು ಇಲ್ಲಿ ಏನೂ ಸಾಧ್ಯ ಇಲ್ಲ ಎಂದು ಜನಗಳ ಹತ್ತಿರ ಹೋಗಬೇಕೆಂದು ಹೊರಟಿದ್ದಾರೆ. ಎಲ್ಲಾ ಜನಗಳನ್ನೂ

ಕರೆದುಕೊಂಡು ಬರುತ್ತೇನೆ ಎಂದು ಹೇಳಿದ್ದಾರೆ ಅದನ್ನು ಸ್ಪಷ್ಟ ಮಾಡಿ ಹೋಗಿದ್ದಾರೆ. ಆದಕ್ಕೋಸ್ಕರ ಕೊನೆಯದಾಗಿ ಒಂದು ಅಂಶ ಸರಕಾರದ ಮುಂದೆ ಹೇಳುವುದು ಇಷ್ಟೇ, ಅಯೋಧ್ಯೆ ಬಗ್ಗೆ ಚರ್ಚೆ ಮಾಡುತ್ತೇವೆ, ಜನ ಇದ್ದಾರೆ, ನಮ್ಮ ಸಂಘಟನೆ ಇದೆ, ಅದರ ಬಗ್ಗೆ ಪ್ರಯತ್ನ ಮಾಡುತ್ತೇವೆ, ಕೇಂದ್ರ ಸರಕಾರ ಮೈಮರೆತು ಈ ದೇಶದ ರಾಜ್ಯದ ರೈತನ ಬಗ್ಗೆ ದ್ರೋಹ ಮಾಡುತ್ತಿದೆ. ಸಬ್ಸಿಡಿ ಕೊಡುತ್ತೇವೆ ಎಂದು ಹೇಳಿ ಕೊಟ್ಟಿರತಕ್ಕಂಥ ಸಬ್ಸಿಡಿಯನ್ನು ವಾಪಸ್ ತೆಗೆದು ಇಡೀ ದೇಶದ ರೈತರನ್ನು ನಿರ್ನಾಮ ಮಾಡುವ ದಿಕ್ಕಿನಲ್ಲಿ ಹೊರಟಿದೆ. ಆದಕ್ಕೋಸ್ಕರ ಕೇಂದ್ರ ಸರಕಾರವನ್ನು ಒತ್ತಾಯ ಮಾಡುತ್ತೇನೆ. ತಾವೆಲ್ಲಾ ಸೇರಿಕೊಂಡು ಗೊಬ್ಬರದ ಬೆಲೆ ಇಳಿಸುವ ದೃಷ್ಟಿಯಿಂದ ಪ್ರಯತ್ನ ಮಾಡಬೇಕು. ರಾಜ್ಯದ ರೈತರ ಹಿತದೃಷ್ಟಿಯಿಂದ ರೈತರ ಸಾಲವನ್ನು ಮನ್ನಾ ಮಾಡಬೇಕು, ಸುಸ್ತಿ ಬಡ್ಡಿ ಮನ್ನಾ ಮಾಡಬೇಕು, ರಾಜ್ಯದ ರೈತ ಬದುಕುವುದಕ್ಕೆ ಅನುಕೂಲ ಮಾಡಿಕೊಡುವ ದಿಕ್ಕಿನಲ್ಲಿ ಸರಕಾರ ಪ್ರಯತ್ನ ಮಾಡಬೇಕೆಂದು ಆಶಿಸುತ್ತಾ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಯಡಿಯೂರಪ್ಪನವರ ಹೆಸರನ್ನು ಪ್ರಸ್ತಾಪ ಮಾಡಲಿಲ್ಲ. ಅವರು ಚಂದ್ರೇಗೌಡರು, ಬೈರೇಗೌಡರು ಎಂದು ಹೇಳಿದರು.

ಅಧ್ಯಕ್ಷರು:- ಅವರು ಎಲ್ಲಾ ಗೌಡರನ್ನೂ ಒಟ್ಟಿಗೆ ಸೇರಿಸಿ ಹೇಳಿದರು.

ಶ್ರೀ ಡಿ.ಬಿ. ಚಂದ್ರೇಗೌಡ:- ಅವರು ನಿರ್ನಾಮ ಮಾಡಿದರು, ಇವರು ನಿರ್ಮಾಣ ಮಾಡುತ್ತಾರೆ. ರಾಜ್ಯದಲ್ಲಿ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಭೀಕರವಾದ ದುರಂತ ಸಂಭವಿಸಿದಾಗ ಬಿರುಗಾಳಿ ಬಂದು ದುರಂತ ಸಂಭವಿಸಿದಾಗ ಇಲ್ಲಿ ಕರಸೇವೆಗೆ ಯಾರೂ ಬರಲಿಲ್ಲ, ಅಲ್ಲಿಗೆ ಹೋಗಿದ್ದರು ಎಂದು ಹೇಳಿದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಅಯೋಧ್ಯೆ ಬಗ್ಗೆ ಏನು ಮಾಡಬೇಕೆಂದು ಸಾಧುಸಂತರು ಏನು ದಾರಿ ತೋರಿಸುತ್ತಾರೆ, ಆ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ. ಭಕ್ತಿ ಮಂದಿರ ಕಟ್ಟಿದ್ದೇವೆ, ಭವ್ಯ ಮಂದಿರ ಕಟ್ಟುವ ದಿಕ್ಕಿನಲ್ಲಿ ಹೋಗುತ್ತೇವೆ, ಕಟ್ಟುತ್ತೇವೆ. ಇಲ್ಲಿ ರಸಗೊಬ್ಬರಕ್ಕೂ ಅದೇ ನೆರೆಹಾವಳಿಗೂ ಅದೇ, ಹಗಲೂ ರಾತ್ರಿ ಕನವರಿಸುತ್ತಿದ್ದಾರೆ, ಅದರ ಬಗ್ಗೆ ಏನು ಹೇಳಬೇಕು.....

ಶ್ರೀ ಬಿ.ಹೆಚ್. ಬನ್ನಿಕೋಡ್:- ಸಾಧುಸಂತರ ಮಾತು ಕೇಳಿ ಈ ಪರಿಸ್ಥಿತಿ ಬಂದಿರುವುದು.

ಶ್ರೀ ಸಿ. ಬೈರೇಗೌಡ:- ರೈತ ಸಮಾಧಿಯಾಗುತ್ತಿದ್ದಾನೆ, ಅದು ನಿಮಗೆ ಸಮಸ್ಯೆ ಆಗಲಿಲ್ಲ. ನೀವು ಪಾರ್ಲಿಮೆಂಟ್‌ನಲ್ಲಿ ಕಟ್ ಮೋಷನ್ ಮೂವ್ ಮಾಡಿದ್ದೀರಿ.

† ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಅಯೋಧ್ಯೆ ಸಮಸ್ಯೆ ವಿಚಾರ ಚರ್ಚೆ ನಡೆದಿದೆ, ಈ ಕಡೆ ಬೈರೇಗೌಡರು, ಚಂದ್ರೇಗೌಡರು, ಅಲ್ಲಿ ಪುಟ್ಟಸ್ವಾಮಿಗೌಡರು ಇದ್ದಾರೆ, ನಮಗೆ ಅನುಮಾನಗಳು ಬರುತ್ತಿವೆ, ನಿಮ್ಮನ್ನು ಅಧ್ಯಕ್ಷರೇ ಎನ್ನುವ ಬದಲು ಅಧ್ಯಕ್ಷಣಿಯರೇ ಎಂದು ಕರೆಯುತ್ತಿದ್ದಾರೆ, ಇದರಿಂದ ನಮಗೆ ದಿಗ್ಭ್ರಮೆ ಆಯಿತು, ಈ ಪರಿಸ್ಥಿತಿಯಾದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು:- ದಿಗ್ಭ್ರಮೆ ಆಗಿರುವುದರಿಂದ ನೀವು ಮಾತನಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್:- ನಾವು ಮಾನ್ಯ ಕೃಷ್ಣರವರೇ ಎಂಬುದನ್ನು ಖಚಿತ ಪಡಿಸಿಕೊಂಡಿದ್ದೇವೆ, ಅನುಮಾನ ಇಲ್ಲ.

4-40 P.M.

ಮಾನ್ಯ ಅಧ್ಯಕ್ಷರೇ ಈ ರಸಗೊಬ್ಬರಗದ ಬಗ್ಗೆ ನಾವು ಅನೇಕ ಸಲ ಈ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಇದು ಚರ್ಚೆಯಾಯಿತೇ ಹೊರತು ಪರಿಣಾಮ ಏನೂ ಆಗಿಲ್ಲ. ಈ ಬಗ್ಗೆ ಮಾನ್ಯ ಹಿಂದಿನ ಮುಖ್ಯಮಂತ್ರಿಗಳು ಅವರ ನಾಯಕತ್ವದಲ್ಲಿ ಕೇಂದ್ರ ಸರ್ಕಾರಕ್ಕೆ ಮುಖಂಡರುಗಳನ್ನು ಕರೆದುಕೊಂಡು ಹೋದರು. ಅಲ್ಲಿ ಹಣಕಾಸಿನ ಸಚಿವರನ್ನು ಭೇಟಿ ಮಾಡಿದ್ದು ಆಯಿತು. ಅವರಿಂದ ಅಂತ ಉತ್ತರವೇನೂ ಸಿಗಲಿಲ್ಲ. ಇವತ್ತು ಸುಮ್ಮನೆ ಹೇಗೋ ಒಂದು ಪ್ರಸ್ತಾವನೆ ತಂದಿದ್ದಾರೆ. ಚರ್ಚೆ ಆಗುತ್ತದೆ. ಅದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ನಾವು ಯಾವುದೇ ಚರ್ಚೆಗಳನ್ನು ಮಾಡಿದರೂ ಸಹ ಅದರಿಂದ ರೈತನಿಗೆ ಅನುಕೂಲ ಮಾತ್ರ ಆಗಿಲ್ಲ ಎನ್ನತಕ್ಕ ಮಾತನ್ನು ನಾನು ಅತ್ಯಂತ ವಿಷಾದದಿಂದ ಹೇಳುತ್ತೇನೆ. ರಸಗೊಬ್ಬರ ಹಾಕುವುದು ಬಿಟ್ಟರೆ ಬೆಳೆ ಇಲ್ಲವೇನೋ ಎನ್ನತಕ್ಕ ಒಂದು ನಿರ್ಧಾರಕ್ಕೆ ರೈತ ಬಂದಿದ್ದಾನೆ. ಇದಕ್ಕೆ ಇಲಾಖೆಯವರು ಕಾರಣ ರಸಗೊಬ್ಬರದಿಂದ ಬಹಳ ಇಳುವರಿ ಕೊಡುತ್ತದೆ, ಬಹಳ ಚೆನ್ನಾಗಿ ಬೆಳೆ ಆಗುತ್ತದೆಂದು ಹೇಳಿದ್ದಾರೆ. ಒಂದು ಕಾಲದಲ್ಲಿ ದನದ ಗೊಬ್ಬರ ಮತ್ತು ದನಗಳಿಂದ ಉಳುಮೆಯನ್ನು ನಂಬಿದ್ದಂತಹ ರೈತ ಇವತ್ತು ರಸಗೊಬ್ಬರ ಬಿಟ್ಟರೆ ಬೇರೆ ಏನೂ ಇಲ್ಲ ಎನ್ನತಕ್ಕಂಥ ಪರಿಸ್ಥಿತಿಗೆ ಬಂದಿದ್ದಾನೆ. ರಸಗೊಬ್ಬರ ಹೋಗಿ ಇವತ್ತು ವಿಷಗೊಬ್ಬರವಾಗಿದೆ. ನಾನು ನಮ್ಮ ಜಮೀನುಗಳಲ್ಲಿ ನೋಡಿದ್ದೇವೆ. ರಸಗೊಬ್ಬರ ತಂದು ಹಾಕದಿದ್ದರೆ ನಮಗೆ ವಿಧಿಯೇ ಇಲ್ಲ. ಅನೇಕ ಕಡೆ ಈ ಭಾವನೆ ಇದೆ. ಮತ್ತೊಂದು ಕಡೆ ಬೆಳೆ ಬೆಳೆದಾಗ ತೀವ್ರವಾದ ಕ್ರಿಮಿಕೀಟಗಳು ಬಂದರೆ, ಅವುಗಳನ್ನು ತಡೆಯಲು ಅನೇಕ ವಿಧದ ಔಷಧಿಗಳು, ಈ ಔಷಧಿಗಳನ್ನು ಹಾಕಿ ಹಾಕಿ, ಇವತ್ತು ಪರಿಸ್ಥಿತಿ ಏನಾಗಿದೆ ಅಂದರೆ ನಮಗೆ ಕ್ರಿಮಿಕೀಟಗಳ ಹಾವಳಿ ಒಂದು ಕಡೆ, ಮತ್ತೊಂದು ಕಡೆ ರಸಗೊಬ್ಬರ ತೊಂದರೆಯಿಂದ ಬಹಳ ಕಷ್ಟವಾಗಿದೆ. ಹಿಂದೆ ನಮ್ಮ ಪುರಾತನ ಕಾಲದಲ್ಲಿ ದನದ ಗೊಬ್ಬರವೇ ಸರಿ. ಎತ್ತುಗಳಿಂದ ಉಳುಮೆ ಸರಿ ಎನ್ನತಕ್ಕಂಥಾದ್ದನ್ನು ರೈತ ನಂಬಿದ್ದ. ಇವತ್ತು ದಿಕ್ಕು ತಪ್ಪಿ ನಿಜವಾಗಿ ಅವನ ಪರಿಸ್ಥಿತಿ ಹದಗೆಟ್ಟಿದೆ. ಇನ್ನು ಬ್ಯಾಂಕ್ ಸಾಲ ತಂದು ಬೆಳೆ ಸರಿಯಾಗಿ ಬರದಿದ್ದರೆ, ಬ್ಯಾಂಕ್ ಸಾಲ ತೀರಿಸುವುದಕ್ಕಾಗುವುದಿಲ್ಲ. ಸಾಲ ಹಿಂತಿರುಗಿಸುವುದಕ್ಕಾಗುವುದಿಲ್ಲ ಬಡ್ಡಿ ಜಾಸ್ತಿಯಾಗುತ್ತದೆ. ನಮ್ಮಲ್ಲಿ ಒಂದು ನಾಣ್ಣುಡಿ ಇದೆ. ದೇಶದ ರಾಜ್ಯದಲ್ಲಿ ಬಹುತೇಕ ರೈತರು ಇವತ್ತು ಬಡ್ಡಿ ಮಕ್ಕಳು ಆಗಿದ್ದಾರೆ. ರೈತ ಸಂಪೂರ್ಣವಾಗಿ ಬ್ಯಾಂಕ್ ಸಾಲ ಕೊಡುವುದಕ್ಕೆ ಆಗಿಲ್ಲ. ಬಡ್ಡಿ ತೀರಿಸುವುದಕ್ಕಾಗಿಲ್ಲ ಬಡ್ಡಿ ಮಕ್ಕಳು ಎನ್ನತಕ್ಕಂಥ ಹೆಸರು ಅವನಿಗೆ ಅನ್ವರ್ಥವಾಗಿದೆ ಎನ್ನುವ ಮಾತನ್ನು ನಾನು ಅತ್ಯಂತ ವಿಷಾದದಿಂದ ಹೇಳುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ:- ಬಡ್ಡಿ ಮಕ್ಕಳು ಎನ್ನುವುದು ಯಾವ ಕನ್ನಡದ ಶಬ್ಧ?

ಶ್ರೀ ವಾಟಾಳ್ ನಾಗರಾಜ್:- ಬಡ್ಡಿಯನ್ನು ಕೊಡದವರು ಬಡ್ಡಿ ಮಕ್ಕಳು. ಅದಕ್ಕೆ ಬೇರೆ ಪದ ಇಲ್ಲ. ಈ ಸಭೆಯಲ್ಲಿ ಅನೇಕ ಸಲ ರೇಷ್ಮೆ ಬೆಳೆ ಬಗ್ಗೆ ಚರ್ಚೆ ಮಾಡಿದ್ದು ಆಯಿತು. ಎಷ್ಟೋ ತರಹ ರೋಗಗಳು ಬರುತ್ತವೆ. ಈ ರೇಷ್ಮೆಗೆ ಬರುವ ರೋಗಗಳನ್ನು ತಡೆಗಟ್ಟುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇದರ ಬಗ್ಗೆ ತಾವು ವ್ಯವಸ್ಥಿತವಾಗಿ ಚಿಂತನೆ ಮಾಡಿಲ್ಲ. ಇವತ್ತು ರೈತ ನಾನಾ ರೂಪದಲ್ಲಿ ಒಂದು ಕಡೆ ಗೊಬ್ಬರದ ಬೆಲೆ ಜಾಸ್ತಿ, ಮತ್ತೊಂದು ಕಡೆ ಕ್ರಿಮಿಕೀಟಗಳ ತೊಂದರೆಯಿಂದ ಬೆಳೆ ಹಾಳಾಗಿ ಅನೇಕ ವಿಧದಲ್ಲಿ ಅವನು ಬಡ್ಡಿ ಕಟ್ಟಲಾರದೆ ಬ್ಯಾಂಕ್ ಸಾಲ ತೀರಿಸದೆ, ರೈತನಿಗೆ ಸಹಕಾರ ಸಹಾಯ ಸಿಗದೆ ಅವನ ಬೆನ್ನುಮೂಳೆ ಮುರಿದಿದೆ. ಕಾರ್ಖಾನೆಗಳ ಮಾಲೀಕರು ಸಂಪೂರ್ಣವಾಗಿ ಕಾರ್ಖಾನೆ ನಷ್ಟವಾದ ಕಾರಣ ಮುಚ್ಚಿದರೂ ಸಹ ಅವನಿಗೆ ಬೇರೆ ಹೆಸರಿನಲ್ಲಿ ಬೇರೆ ಬೋರ್ಡ್ ಹಾಕಿಕೊಂಡರೆ ಸಾಲ ತೆಗೆದುಕೊಳ್ಳಬಹುದು. ಮತ್ತೆ ಬೆಳೆಸಬಹುದು, ಮತ್ತೆ ಒಂದು ಕೈಗಾರಿಕೆ ಮಾಡಬಹುದು. ರೈತನಿಗೆ ಈ ವ್ಯವಸ್ಥೆ ಇಲ್ಲ. ರೈತರಿಗೆ ಒಂದೇ ಒಂದು ದೃಷ್ಟಿ. ಆ ದೃಷ್ಟಿ ಅತ್ಯಂತ ಶೋಚನಿಯವಾಗಿದೆ. ಆದ್ದರಿಂದ ರೈತರಿಗೆ ವಿಶೇಷವಾಗಿ ಸಬ್ಸಿಡಿ ಸೌಲಭ್ಯ ಕೊಡತಕ್ಕಂಥ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಮಾಡಬೇಕು. ರಾಜ್ಯ ಸರ್ಕಾರ ಇದು

ಬರೀ ಕೇಂದ್ರ ಸರ್ಕಾರದ ದೃಷ್ಟಿ ಎನ್ನತಕ್ಕಂಥಾದ್ದನ್ನು ತೋರಿಸದೆ, ಕೇಂದ್ರ ಸರ್ಕಾರದಿಂದ ಸಬ್ಸಿಡಿ ತರಿಸುವುದು ನಮ್ಮ ಸರ್ಕಾರದ ಜವಾಬ್ದಾರಿಯಾಗಿದೆ. ಎಷ್ಟು ಸಬ್ಸಿಡಿ ಕೊಡಬೇಕು ಎನ್ನತಕ್ಕಂಥ ನಿರ್ಧಾರಕ್ಕೆ ಬಂದು ಗರಿಷ್ಟ ಸಬ್ಸಿಡಿ ಸಹಾಯಧನ ನಮ್ಮ ಸರ್ಕಾರ ಕೊಡಬೇಕಾಗಿತ್ತು. ಆದರಲ್ಲಿ ಸರಕಾರ ಸಂಪೂರ್ಣವಾಗಿ ವಿಫಲವಾಗಿದೆ. ಈಗಲೂ ತಮಗೆ ನಾನು ಹೇಳುತ್ತೇನೆ ಚರ್ಚೆಯಿಂದ ರೈತನಿಗೆ ಯಾವುದೇ ವಿಧವಾದ ಅನುಕೂಲವಾಗುತ್ತದೆಂದು ನಾನು ನಂಬಿಲ್ಲ. ಇದು ಬರೀ ಭ್ರಮೆ ಆಗುತ್ತದೆ. ಮತ್ತೊಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕೇಂದ್ರ ಸರ್ಕಾರದ ಮೇಲೂ ಒತ್ತಡ ತರುವುದಾದರೆ ಮತ್ತೊಂದು ಸಾರಿ ನಾವೆಲ್ಲರೂ ಬರುತ್ತೇವೆ. ನಾವೆಲ್ಲರೂ ಬೆಂಬಲ ಕೊಡುತ್ತೇವೆನ್ನುವ ಮಾತನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ವಿಚಾರದಲ್ಲಿ ನಮ್ಮ ಸದಸ್ಯರು ಮಾತನಾಡುತ್ತಾ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೇಂದ್ರ ಸರ್ಕಾರದವರು ರೈತರ ಬಗ್ಗೆ ಏಕೆ ಈ ಒಂದು ರೈತ ವಿರೋಧಿ ಧೋರಣೆ ತೆಗೆದುಕೊಂಡಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ನಾವು ಪತ್ರಿಕೆಗಳ ಮೂಲಕ ತಿಳಿದುಕೊಂಡಿದ್ದೇವೆ, ಇನ್ನು ಮೇಲೆ ರೈತರಿಗೆ ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸನ್ನು ಸಹಿತಾ ಹಾಕಬೇಕು, ಎನ್ನುವುದನ್ನು ನಾವು ಕೇಳಿದ್ದೇವೆ. ಮತ್ತೆ ನಿನ್ನೆ ನಡೆದಂಥ ದೆಹಲಿಯಲ್ಲಿ ನಡೆದಂಥ ಪವರ್ ಮಿನಿಸ್ಟರ್ ಕಾನ್‌ಫರೆನ್ಸ್‌ನಲ್ಲಿ ಸಮ್ಮೇಳನದಲ್ಲಿ, ಒಂದು ಯೂನಿಟ್‌ಗೆ 50 ಪೈಸೆ ಹಾಕಬೇಕೆಂದು ತೀರ್ಮಾನ ಮಾಡಿದ್ದಾರೆ. ಸ್ಟೇಟ್ ಗೌರ್ನಮೆಂಟ್ಸ್ ಇದನ್ನು ರೆಕಮೆಂಡ್ ಮಾಡಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಆ ಸಭೆಯಲ್ಲಿ ಭಾಗವಹಿಸಲಿಕ್ಕೆ ಆಗದೆ ಮುಂಬಯಿಂದ ವಾಪಸ್ ಬಂದಿದ್ದಾರೆಂದು ಕೇಳಿದ್ದೇವೆ. ಆದರಿಂದ, ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಕೇಂದ್ರ ಸರ್ಕಾರದಲ್ಲಿ ಇದು ಸ್ಪಷ್ಟವಾಗಿ ಕಂಡು ಬರುತ್ತಿದೆ. ರೈತ ವಿರೋಧಿ ನೀತಿಯನ್ನು ಅವರು ತಾಳಿದ್ದಾರೆ. ಕೇಂದ್ರ ಸರ್ಕಾರದಲ್ಲಿ ನಿಮ್ಮದೇ ಪಕ್ಷದ ಆಡಳಿತ ಇರುವಾಗ ಇದನ್ನು ಖಂಡಿಸತಕ್ಕಂಥ ನಿರ್ಣಯ ತೆಗೆದುಕೊಳ್ಳುವುದಕ್ಕೆ ಆಗದೇ ಇರಬಹುದು. ಆದರೆ, ಈ ಸಭೆಯಲ್ಲಿ ಸಮಯದ ಅಭಾವದಿಂದ ಆ ಕಡೆಯ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡಲಿಕ್ಕೆ ಆಗದೇ ಇರಬಹುದು. ರೈತರ ವಿಚಾರದಲ್ಲಿ ನಾವು ಯಾರೂ ಏನೂ ಕಡಿಮೆ ಇಲ್ಲ. ಆದರಿಂದ ಸರ್ವಾನುಮತದಿಂದ ಒಂದು ನಿರ್ಣಯವನ್ನು ಈ ಸಭೆಯಲ್ಲಿ ಸರ್ಕಾರದವರು ಮಾನ್ಯ ಮಂತ್ರಿಗಳು ಮಂಡಿಸಬೇಕು. ರಸಗೊಬ್ಬರದ ಮೇಲಿನ ಸಬ್ಸಿಡಿಯನ್ನು ಇವತ್ತು ಏನು ರದ್ದುಮಾಡಿದ್ದಾರೆ ಅದನ್ನು ತೆಗೆದು ಸಬ್ಸಿಡಿಯನ್ನು ಮುಂದುವರಿಸಿಕೊಂಡು ಹೋಗಬೇಕು ಎನ್ನತಕ್ಕಂಥ ನಿರ್ಣಯವನ್ನು ಸರ್ಕಾರ ಮಂಡಿಸಬೇಕೆಂದು ಹೇಳುತ್ತೇನೆ. ರೈತ ವಿರೋಧಿ, ನೀತಿ ಏನಿದೆ ಇದರಿಂದ ನಿಜವಾಗಿಯೂ ಸಹಿತಾ ರಾಷ್ಟ್ರಕ್ಕೆ ತೊಂದರೆಯಾಗುತ್ತದೆ, ಆಹಾರದ ಉತ್ಪಾದನೆ ಕುಂಠಿತವಾಗುತ್ತದೆ, ಎಲ್ಲಾ ಹಂತದಲ್ಲೂ ಸಹಿತಾ ತೊಂದರೆಯಾಗುತ್ತದೆ ಎನ್ನತಕ್ಕಂಥ ಒಂದು ನಿರ್ಣಯವನ್ನು ಈ ಸಭೆಯಲ್ಲಿ ತಾವು ಮಂಡಿಸಿ ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕು. ಆಂಧ್ರ ಪ್ರದೇಶದ ಅಸೆಂಬ್ಲಿಯವರು ಆ ಕೆಲಸವನ್ನು ಮಾಡಿದ್ದಾರೆ. ಆದ್ದರಿಂದ ದಯವಿಟ್ಟು ಇದನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಬೈರೇಗೌಡರವರು, ಈ ಸರ್ಕಾರದ ಮೇಲೆ ಸಾಕಾದಷ್ಟು ಆಕ್ಷೇಪಣೆಗಳನ್ನು ಮಾಡಿ ಇನ್ನೂ ಅವರು ತೃಪ್ತರಾಗಿಲ್ಲ. ಆದೇ ಧಾಟಿಯಲ್ಲೇ ಪ್ರತಿಯೊಂದು ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು:- ಅದೇ ಧಾಟಿಯಲ್ಲಿ ನಿಮ್ಮ ಕಡೆ ನೋಡುತ್ತಾ ಇದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಇವರ ಆಡಳಿತವನ್ನೂ ಕೂಡ ನಾವು ನೋಡಿದ್ದೇವೆ. ಈ ರಾಜ್ಯದಲ್ಲಿ ಇವರು ಏನೇನು ಕಾರ್ಯಕ್ರಮಗಳನ್ನು ಕೈಗೊಂಡರು ಏನೇನು

ಪ್ರಯೋಜನವಾಯಿತು? ರೈತರಿಗೆ ಎಷ್ಟರಮಟ್ಟಿಗೆ ಫಲ ಸಿಕ್ಕಿತು? ಅಥವಾ ರೇಷ್ಮೆ ಬೆಳೆಯತಕ್ಕವರಿಗೆ ಎಳ್ಳಷ್ಟೂ ನಷ್ಟವಾಗದೆ, ರೇಷ್ಮೆ ಹುಳಕ್ಕೆ ರೋಗವೇ ಬರದೆ ಇವರು ಹೇಗೆ ಸಾಕಿದರು ಎಂಬುದು ನಮಗೆಲ್ಲರಿಗೂ ಗೊತ್ತಿದೆ. ನಾನೂ ಕೂಡ ರೇಷ್ಮೆ ಬೆಳೆಯತಕ್ಕಂಥ ಪ್ರದೇಶದಿಂದ ಬಂದವನು. 6 ತಿಂಗಳು ಬೆಲೆ ಜಾಸ್ತಿಯಾಗುತ್ತದೆ, ಇನ್ನು 6 ತಿಂಗಳು ಕಡಿಮೆಯಾಗುತ್ತದೆ. ಒಂದೊಂದು ಸಾರಿ 260–300 ರೂಪಾಯಿಗೆಲ್ಲಾ ಒಂದು ಕೆ.ಜಿ. ಗೂಡು, ಬೀಜದ ಗೂಡು ಆಗುತ್ತದೆ. ಇನ್ನೊಂದು ಕಾಲದಲ್ಲಿ 15 ರೂಪಾಯಿ ಆಗುತ್ತದೆ. 15 ರೂಪಾಯಿಗೆ 20 ರೂಪಾಯಿ ಬಂದಿರುವ ಕಾಲದಲ್ಲಿ ಬೈರೇಗೌಡರು ಟೀಕೆ ಮಾಡುತ್ತಾರೆ. ಅವರ ಕಾಲದಲ್ಲಿ 10 ರೂಪಾಯಿ ಆಗಿದ್ದಾಗ? ಇವರು ಏನು ಕೆಲಸ ಮಾಡಿದರು? ಅಂದರೆ, ಈಗ ಏನು ಹೇಳುತ್ತಿದ್ದರೋ ಅದೇ ಕೆಲಸವನ್ನು ಆಗ ಮಾಡಿದ್ದೂ ಅಷ್ಟೇ. ಆದ್ದರಿಂದ, ನಾವು ಸುಮ್ಮನೆ ಯಾವ ವಿಷಯದಲ್ಲಿ ನಿಜವಾದಂಥ ಪರಿಸ್ಥಿತಿ ಹದಗೆಟ್ಟು ಹೋಗಿದೆ? ಅದನ್ನು ಸರಿಪಡಿಸುವುದಕ್ಕೆ ಹೇಗೆ ಸಾಧ್ಯ? ಅದಕ್ಕೆ ಈ ಸರ್ಕಾರ ಯಾವ ಕಾರ್ಯಕ್ರಮವನ್ನು ಕೈಗೊಳ್ಳಲಿಲ್ಲವೆಂದು ನೇರವಾಗಿ ಹೇಳಿದರೆ ಆಗ ಒಪ್ಪಬಹುದು. ಸುಮ್ಮನೆ ರೇಷ್ಮೆ ಗೂಡಿಗೆ ಬೆಲೆ ತೀರಾ ಕಡಿಮೆ ಆಗಿಹೋಗಿದೆ ಎಂದು ಹೇಳಿದರೆ ಅದು ಎಲ್ಲರ ಕಾಲದಲ್ಲೂ ಇದ್ದಂಥ ಪರಿಸ್ಥಿತಿಯೇ.

ಶ್ರೀ ಸಿ. ಬೈರೇಗೌಡ:– ನಮ್ಮ ಕಾಲದಲ್ಲೂ ನಮ್ಮ ಸರ್ಕಾರ ಇದ್ದಾಗಲೂ ಕೂಡ ಈ ರೇಷ್ಮೆ ಗೂಡಿನ ಬೆಲೆ ಇಳಿಯುತ್ತಿದ್ದುದು, ಏರುತ್ತಿದ್ದದ್ದು ನಿಜ. ಆದರೆ, ನಿಮ್ಮ ಸರ್ಕಾರವೇ ಹೋದವರ್ಷವೂ ಇತ್ತಲ್ಲಾ! ಹೋದ ವರ್ಷ ಜನವರಿ ತಿಂಗಳಿನಲ್ಲಿ ರೇಷ್ಮೆ ಗೂಡಿನ ಬೆಲೆ ಎಷ್ಟಿತ್ತು? ಈ ಜನವರಿ ತಿಂಗಳಿನಲ್ಲಿ ರೇಷ್ಮೆ ಗೂಡಿನ ಬೆಲೆ ಎಷ್ಟಿದೆ? ಅದನ್ನು ತರಿಸಿ ನೋಡಬಹುದಲ್ಲ! ಆಮೇಲೆ ನಮ್ಮ ಕಾಲದ ಅವಧಿಯಲ್ಲಿ ಚೈನಾ ದೇಶದಿಂದ ಎಷ್ಟು ರೇಷ್ಮೆ ತರಿಸುತ್ತಿದ್ದೆವು? ಈಗ ಎಷ್ಟು ರೇಷ್ಮೆ ಬರುತ್ತಿದೆಯೆಂದು ಲೆಕ್ಕ ಇದೆಯಲ್ಲ! ಇವತ್ತು ನಮ್ಮ ರೇಷ್ಮೆ ಗೂಡಿಗೆ ಬೆಲೆ ಕಡಿಮೆಯಾಗಬೇಕಾಗಿದ್ದರೆ, ಇವರು ಮುಕ್ತ ಆರ್ಥಿಕ ವ್ಯವಸ್ಥೆಯೆಂದು ಹೇಳಿ ಮುಕ್ತವಾಗಿ ಚೈನಾ ದೇಶದಿಂದ ರೇಷ್ಮೆ ಬರುತ್ತಿದೆ. ಆಗ ಹೊರ ದೇಶದಿಂದ ಎಷ್ಟು ರೇಷ್ಮೆ ಬರುತ್ತಿತ್ತು? ಈಗ ಎಷ್ಟು ಬರುತ್ತಿದೆ ಎಂದು ಲೆಕ್ಕ ಹಿಡಿದು ಹೇಳಿದರೆ ಗೊತ್ತಾಗುತ್ತದೆ. ಅಂಕಿ ಅಂಶಗಳನ್ನು ಇಟ್ಟು ನೀವು ಸಮರ್ಥನೆ ಮಾಡಿ. ನಾನು ಸಂತೋಷಪಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಅದು ಒಂದು ಮಾತ್ರವಲ್ಲ. ಲೆವಿ ಹಾಕುವ ವಿಷಯವನ್ನು ಕೂಡ ಹೇಳಿದರು. ಈಗ ಮಿಲ್ಲಿನ ಮೇಲೆ ಲೆವಿ ಹಾಕುವುದು ಬಹಳ ದಿವಸ ಆಯಿತು. ರೈತರ ಮೇಲೆ ಲೆವಿ ಇದ್ದಾಗ, ರೈತರ ಮೇಲೆ ನೇರವಾಗಿ ಲೆವಿ ಹಾಕುವುದು ಸರಿಯಲ್ಲ ಎಂದು ರೈಸ್ ಮಿಲ್‌ಗಳ ಮೇಲೆ ಲೆವಿಯನ್ನು ಹಾಕೋಣ ಎಂದು ಸಭೆಯಲ್ಲಿ ಚರ್ಚೆಯಾಗಿ ತೀರ್ಮಾನವಾದ ಪ್ರಕಾರ ಇವೊತ್ತು ಲೆವಿ ಹಾಕುತ್ತಾ ಇದ್ದಾರೆ.

ಶ್ರೀ ಸಿ. ಬೈರೇಗೌಡ:– ಅವೊತ್ತು ಗೊಬ್ಬರಕ್ಕೆ ಸಬ್ಸಿಡಿ ಇತ್ತು.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಅಧ್ಯಕ್ಷರೇ, ನಾನು ಲೆವಿ ಕುರಿತು ಹೇಳುತ್ತಿದ್ದರೆ ಅವರು ಗೊಬ್ಬರಕ್ಕೆ ಹೋಗುತ್ತಾರೆ, ಗೊಬ್ಬರದ ವಿಚಾರ ಹೇಳಿದ್ದರೆ, ರೇಷ್ಮೆ ಹುಳುಗಳ ಬಗ್ಗೆ ಮಾತನಾಡುತ್ತಾರೆ. ಅವರ ಪ್ರಕಾರ ನಮ್ಮ ಸರಕಾರದವರು ಮಾಡಿರುವುದು ಎಲ್ಲವೂ ತಪ್ಪು, ಇವರು ಸರಕಾರ ಇದ್ದಾಗ ಮಾಡಿದ ಎಲ್ಲಾ ಕೆಲಸಕಾರ್ಯಗಳು ಸರಿಯಾಗಿದ್ದುವು ಎಲ್ಲ ತಪ್ಪುಗಳನ್ನು ಹೋಗಲಾಡಿಸಿ, ಈ ದೇಶದ ಜನಕ್ಕೆ ಕ್ಷೇಮ ಉಂಟುಮಾಡಿದ್ದರು ಎಂದು ನಾನು ಹೇಳಬೇಕಾಗಿಲ್ಲ, ಅದು ಎಲ್ಲರ ಅನುಭವದಲ್ಲಿದೆ. ಮಾನ್ಯ ಸದಸ್ಯರು ಕೇಂದ್ರದವರು ಕೊಟ್ಟಿರತಕ್ಕಂಥ 17 ಕೋಟಿ ರೂ.ಗಳಲ್ಲಿ ಏನೂ ಖರ್ಚು ಮಾಡಿಲ್ಲ ಎಂದು ಹೇಳಿದರು. ನಾವು ಈಗಾಗಲೇ 5 ಕೋಟಿ ಚಿಲ್ಲರೆ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದರ ಜೊತೆಗೆ ಈಗ ಮತ್ತೆ 36 ಕೋಟಿ ರೂಪಾಯಿಗಳು ನಮಗೆ ಬಂದಿದೆ. ಈ ಹಣವನ್ನು ಸಣ್ಣ ಮತ್ತು ಅತೀ ಸಣ್ಣ

ರೈತರ ಅಭಿವೃದ್ಧಿಗಾಗಿ ವಿನಿಯೋಗಿಸಬೇಕೆಂದು ಕೇಂದ್ರದವರು ತಿಳಿಸಿದ್ದಾರೆ. ಇದನ್ನು ಯಾವ ರೀತಿಯಾಗಿ ಉಪಯೋಗಿಸಬೇಕು, ಇವರು ಸ್ವಂತವಾಗಿ ಈ ದುಡ್ಡನ್ನು ಉಪಯೋಗಿಸಿಕೊಂಡು ಬೆಳೆ ಬೆಳೆಯಲು ಅನುಕೂಲ ಮಾಡಿಕೊಡಬೇಕು ಅಥವಾ ಏನಾದರೂ ಒಂದು ಕಸುಬನ್ನು ಮಾಡುವುದಕ್ಕೆ ಯಾವ ರೀತಿಯಾಗಿ ಕ್ರಮಗಳನ್ನು ಕೈಗೊಳ್ಳಬೇಕೆಂಬ ವಿಚಾರದಲ್ಲಿ ಆಲೋಚನೆಯನ್ನು ಮಾಡುತ್ತಿದ್ದೇವೆ. ಇಷ್ಟು ಮಾತ್ರವಲ್ಲ, ಈಗಾಗಲೇ ಗೊಬ್ಬರದ ಬೆಲೆ ಜಾಸ್ತಿಯಾಗಿದ್ದು ಸರಕಾರಕ್ಕೆ ಗೊತ್ತಾದ ಮೇಲೆ, ನಾವು ಅವರ ಜೊತೆಗೆ ವ್ಯವಹಾರ ಮಾಡಿ ತಿಳಿಸಿದ ಮೇಲೆ, ಥೈಮೋನಿಯಂ ಬೆಲೆ 4680 ರೂಪಾಯಿಗಳು ಇದ್ದುದು, 8 ಸಾವಿರ ರೂಪಾಯಿಗಳವರೆಗೆ ಆಗಿದೆ, ಇನ್ನು ಯೂರಿಯೇಟ್ ಆಫ್ ಪೊಟ್ಯಾಶ್ 1700 ರೂ.ಗಳು ಇದ್ದುದು 5500 ರೂ.ಗಳವರೆಗೆ ಆಗಿದೆ, ಹೀಗೆ ಉಳಿದ ರಸಗೊಬ್ಬರಗಳ ಬೆಲೆಯು ಕೂಡ ಹೆಚ್ಚಿದ್ದು ಅದರ ವಿವರಗಳನ್ನು ಕೊಡುತ್ತೇನೆ. ಇದರ ಜೊತೆಗೆ ಥೈಮೋನಿಯಂ ಪಾಸ್ಪೇಟ್‌ಗೆ ಒಂದು ಸಾವಿರ ರೂ.ಗಳವರೆಗೆ ಕಡಿಮೆ ಮಾಡಿದೆ. ಇದಲ್ಲದೆ ಬೇರೆ ಬೇರೆ ಗೊಬ್ಬರಗಳಿಗೆ ಕೂಡ 10 ಪರ್‌ಸೆಂಟ್‌ನಷ್ಟು ಕಡಿಮೆ ಮಾಡಿದ್ದೇವೆ. ಯೂರಿಯಾಕ್ಕೆ 10 ಪರ್‌ಸೆಂಟ್, ಅಮೋನಿಯಂ ಸಲ್ಫೇಟ್ ಮೇಲೆ 35 ಪರ್‌ಸೆಂಟ್, ಸಿಎಎಂ ಮೇಲೆ 33 ಪರ್‌ಸೆಂಟ್, ಹೀಗೆ ವಿವಿಧ ಗೊಬ್ಬರಗಳ ಮೇಲೆ ಒಟ್ಟಿನಲ್ಲಿ ಒಂದು ಟನ್‌ಗೆ 435 ರೂ.ಗಳಿಂದ 990ರೂ.ಗಳವರೆಗೆ ಕೆಲವು ಗೊಬ್ಬರಗಳ ಬೆಲೆಯನ್ನು ಕಡಿಮೆ ಮಾಡಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಎಷ್ಟು ಪ್ರಮಾಣದಲ್ಲಿ ಬೆಲೆ ಹೆಚ್ಚಿಗೆ ಆಗಿದೆ ಮತ್ತು ನೀವು ಕೊಟ್ಟ ಪರಿಹಾರದ ಪ್ರಮಾಣ ಎಷ್ಟು ಎಂದು ಹೇಳಿದರೆ ಒಳ್ಳೆಯದು.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಇನ್ನು ರಸಗೊಬ್ಬರಗಳ ಬೆಲೆಯು ಯಾವಾಗ ಜಾಸ್ತಿಯಾಯಿತು ಅದೇ ಕಾಲದಲ್ಲಿ ಬಳಕೆಯ ಪ್ರಮಾಣ ಕೂಡ ಕಡಿಮೆಯಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಬಳಕೆ ಎಷ್ಟು ಕಡಿಮೆಯಾಯಿತೋ ಅದರಿಂದ ಉತ್ಪತ್ತಿ ಕೂಡ ಕಡಿಮೆ ಆಗಿದೆ ಎನ್ನುವುದು ಸ್ಪಷ್ಟವಾಗಿ ಅರ್ಥವಾಗುತ್ತದೆ.

ಶ್ರೀ ಸಿ. ಬೈರೇಗೌಡ:- ತಾವುಗಳು ಯಾವುದ್ಯಾವುದರ ಬೆಲೆಗಳನ್ನು ಕಡಿಮೆ ಮಾಡಿದ್ದೀರಿ ಎಂಬುದನ್ನು ಹೇಳುತ್ತಿಲ್ಲ, ರಾಮಾಯಣವಾಯಿತಲ್ಲ!

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಅದನ್ನೇ ಹೇಳುತ್ತಾ ಇದ್ದೇನೆ. ಯೂರಿಯಾಕ್ಕೆ 10 ಪರ್‌ಸೆಂಟ್ ಕಡಿಮೆ ಮಾಡಿದ್ದೇವೆ.

ಶ್ರೀ ಸಿ. ಬೈರೇಗೌಡ:- ಬರೀ ಯೂರಿಯಾವನ್ನು ಬಳಸಿ ವ್ಯವಸಾಯವನ್ನು ಹಾಳು ಮಾಡಲು ಹೊರಟಿದ್ದೀರಾ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ:- ನಿಮಗೆ ಬೈಗುಳ ಒಂದೇ ಬರುವುದು ಎಂದು ಕಾಣುತ್ತದೆ. ಯೂರಿಯಾವನ್ನು ಮಾತ್ರ ಹಾಕಿ ಯಾವ ರೈತ ಬೆಳೆ ಬೆಳೆಯುತ್ತಾನೆ ಎಂಬುದು ಸಾಮಾನ್ಯ ವಿಚಾರ ಅಲ್ಲವೆ? ಅದು ಯಾರಿಗೆ ಗೊತ್ತಿಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಕೇಳಬಯಸುವುದೇನೆಂದರೆ, 31-12-91ಕ್ಕೆ ಕೇಂದ್ರ ಸರಕಾರದವರು ಕೊಟ್ಟಿದ್ದಂಥ ಸಹಾಯಧನ 17 ಕೋಟಿ ರೂ.ಗಳ ವಿತರಣೆಯಾಗಬೇಕಾಗಿತ್ತು. ಆದರಲ್ಲಿ ಐದು ಕೋಟಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ ಎಂದು ಹೇಳಿದ್ದೀರಿ. 12 ಕೋಟಿ ಹಣ ಹಾಗೆ ಇದೆ. ಈಗ ಅವರು ಎಕ್ಸ್‌ಟೆಂಡ್ ಮಾಡಿದ್ದಾರೋ ಬಿಟ್ಟಿದ್ದಾರೋ ನನಗೆ ಗೊತ್ತಿಲ್ಲ ಅವರು ಹೇಳಲಿಲ್ಲ, ಕಳೆದ ಸಲ ನಾವು ವಾಕೌಟ್ ಮಾಡಿದ್ದೇ ಇದೇ ಕಾರಣಕ್ಕಾಗಿ. ಕೊಟ್ಟ ಹಣವನ್ನೂ, ಖರ್ಚು ಮಾಡುವುದಕ್ಕಾಗುದಿಲ್ಲ. ಇವರೂ ಕೊಡುವುದಕ್ಕಾಗುವುದಿಲ್ಲ. This is the situation.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಈಗ ಕೊಟ್ಟಿದ್ದು 17 ಕೋಟಿ ರೂಪಾಯಿಗಳನ್ನು ಡಿಸೆಂಬರ್ ಆಖೈರ್‌ವರೆಗೆ ಖರ್ಚು ಮಾಡಲು ವಾಯಿದೆ ಕೊಟ್ಟಿದ್ದಾರೆ. ಈಗ ವಾಯಿದೆಯನ್ನು ಹೆಚ್ಚು ಮಾಡಿದ್ದಾರೆ ಏಕೆಂದರೆ 17 ಕೋಟಿ ರೂ ಕೊಟ್ಟಿರುವುದು ಎಲ್ಲಾ ರೈತರಿಗೂ, 36 ಕೋಟಿ ಕೊಟ್ಟಿರುವುದು ಸಣ್ಣ ಮತ್ತು ಅತಿಸಣ್ಣ ರೈತರಿಗಾಗಿ, ಅದನ್ನು ಆಖೈರ್‌ವರೆಗೆ ಇದನ್ನು ಉಪಯೋಗಿಸಬಹುದು ಎಂದು ತಿಳಿಸಿದ್ದಾರೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಮಾನ್ಯ ಚಂದ್ರೇಗೌಡರು ಹೇಳಿದರು ಡಿಸೆಂಬರ್‌ವಳಗೆ ವಿನಿಯೋಗ ಆಗಬೇಕಾಗಿತ್ತು ಅಂತ. ಡಿಸೆಂಬರ್ ಹೊತ್ತಿಗೆ ಗದ್ದೆ ಅಥವಾ ಹೊಲ ಎಲ್ಲ ಕೊಯ್ದಿದ್ದಾಗಿರುತ್ತದೆ ಯಾರೋ ನಾಲೆ ನೀರು ಇರುವವರು ಬಳಸಬಹುದೇ ಹೊರತು ಬೇರೆಯವರು ಆ ಗೊಬ್ಬರ ಬಳಸುವುದಕ್ಕೆ ಆಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಸಚಿವರೇ ನಿಮಗೆ ಅರ್ಥವಾಗಿಲ್ಲ, 31-12-1992ರ ಒಳಗೆ ಕೊಟ್ಟ ಪೂರ್ತಿ ಸಬ್ಸಿಡಿ ಬಳಕೆ ಮಾಡಿಕೊಳ್ಳಬೇಕಾಗಿತ್ತು. ಆ ಬಳಕೆ ಆಗಲಿಲ್ಲ ಎನ್ನುವುದು ನಮ್ಮ ದೂರು. ಡಿಸೆಂಬರ್‌ಗೆ ಮುಗಿಯುತ್ತದಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಇಲ್ಲ ಇಲ್ಲ, ಅವರು ಹೇಳ್ತಿರೋದು ಮೊದಲು ಡಿಸೆಂಬರ್ ಆಖೈರಿಗೆ ಖರ್ಚು ಮಾಡಬೇಕು ಎಂದು. ಇದ್ದುದನ್ನು ಮಾರ್ಚಿ 93ರ ಆಖೈರ್‌ವರೆಗೆ ಖರ್ಚು ಮಾಡಬೇಕು ಎಂದು ಆದೇಶ ಕೊಟ್ಟರು, ಆಮೇಲೆ ಈಗ ಆ ದುಡ್ಡನ್ನೂ ಕೂಡ 93ನೇ ಇಸವಿ ಡಿಸೆಂಬರ್ ಆಖೈರ್‌ವರೆಗೆ ಖರ್ಚು ಮಾಡಬಹುದು ಎಂದು ತಿಳಿಸಿದ್ದಾರೆ. ಈಗಾಗಲೇ 5 ಕೋಟಿ ರೂ ಖರ್ಚಾಗಿದೆ, ನಮಗೆ ಬಂದದ್ದು ಹೋದ ತಿಂಗಳಿನಲ್ಲಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಅಲ್ಲಲ್ಲ, 31-12-92 ರವರೆಗೆ ಸಮಯ ಕೊಟ್ಟಿದ್ದರೋ ಇಲ್ಲವೋ ತಮಗೆ ಅಷ್ಟರವರೆಗೆ ಏಕೆ ಖರ್ಚಾಗಲಿಲ್ಲ, ಒಂದು ವೇಳೆ ಅವರು ಎಕ್ಸ್‌ಟೆಂಡ್ ಮಾಡದೇ ಇದ್ದರೆ ಈ ಹಣ ಕೇಂದ್ರಕ್ಕೆ ವಾಪಸ್ ಹೋಗ್ತಿತ್ತೋ ಇಲ್ಲವೊ?

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಇಲ್ಲ, ಏಕೆ ಹೋಗ್ತದೆ? ನಮಗೆ ಇಷ್ಟರೊಳಗಾಗಿ ಖರ್ಚು ಮಾಡಲೇಬೇಕು ಎಂದು ತಿಳಿಸಿದ್ದರೂ ಕೂಡ.

ಶ್ರೀ ಡಿ.ಬಿ. ಚಂದ್ರೇಗೌಡ:- ಏಕಾಗಲಿಲ್ಲ, ನಾನು ನಿಮ್ಮ ಮೇಲೆ ದೂರು ಹೇಳುತ್ತಾ ಇಲ್ಲ ಖರ್ಚಾಗದೇ ಇರುವುದಕ್ಕೆ ನನ್ನದೇ ಆದ ವಿವರಣೆ ಕೊಟ್ಟಿದ್ದೇನೆ. ಏಕೆ ಖರ್ಚಾಗಲಿಲ್ಲ? Administrative inefficiency or the technical difficulties came in the way. ಅಥವಾ ನಿಮಗೆ ಮನಸ್ಸಿರಲಿಲ್ಲವೋ ಯಾವುದಾದರೂ ಒಂದು ಬೇಕಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಯಾವ್ಯಾವ ಬಾಬಿಗೆ ಖರ್ಚು ಮಾಡಬೇಕು ಎಂದು ಹೇಳಿದ್ದರೋ ಹಾಗೇ ಖರ್ಚು ಮಾಡುತ್ತಾ ಹೋಗ್ತಿದ್ದೇವೆ. ಇನ್ನೂ ಟೈಮ್ ಕೊಟ್ಟಿದ್ದಾರೆ, ಖರ್ಚು ಮಾಡ್ತೇವಿ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಸನ್ಮಾನ್ಯ ಚಿಕ್ಕೇಗೌಡರು ಮಂತ್ರಿಗಿರಿಯಿಂದ ಇಳಿದ ಮೇಲೆ ಹೇಳಿದ್ದಾರೆ ನಾನೊಂದು ಹೋರಾಟ ಆರಂಭ ಮಾಡ್ತೇನಿ ಗೊಬ್ಬರ ಬೆಲೆ ಕಡಿಮೆ ಮಾಡುವುದಕ್ಕೆಂದು, ತಾವೂ ಏನಾದರೂ ಹೋರಾಟ ಆರಂಭ ಮಾಡಲಿಕ್ಕೆ ಮಂತ್ರಿ ಸ್ಥಾನ ಹೋಗಬೇಕೇ?

ಶ್ರೀ ಎನ್. ಚಿಕ್ಕೇಗೌಡ:- ಒಂದು ನಿಮಿಷ, ನಮ್ಮ ಮಾಧುಸ್ವಾಮಿಯವರು, ನನ್ನ ಮಂತ್ರಿ ಸ್ಥಾನ ಹೋಗಿದ್ದೇ ಅದಕ್ಕೆ ಅಂತ, ಹೋರಾಟ ಮಾಡುವ ಬಗ್ಗೆ, ನಾವು ಸರ್ಕಾರದ ಪರವಾಗಿಯೇ ಪ್ರತಿಭಟನೆ ಮಾಡಿ ಬೆಲೆಯೇರಿಕೆ ರೈತರಿಗೆ ತಕ್ಕದ್ದಲ್ಲ ಅಂತ ಒಂದು ಪತ್ರವನ್ನು ಕೇಂದ್ರ

ಸರ್ಕಾರಕ್ಕೆ ಬರೆದಿದ್ದೇವೆ. ಆದ್ದರಿಂದ ಮಂತ್ರಿ ಸ್ಥಾನ ಹೋದ ಮೇಲೆ ಹೋರಾಟ ಮಾಡ್ತೀನಿ ಅಂತ ಹೇಳಲಿಲ್ಲ. ಮಂತ್ರಿಯಾಗಿದ್ದಾಗಲೂ ಹೋರಾಟ ಮಾಡುತ್ತೇವೆ ಅಂತ ಹೇಳಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ದಯಮಾಡಿ ಈಗಿರುವ ಮಂತ್ರಿಗಳಿಗೆ ಹೇಳಿ ಒಂದು ನಿರ್ಣಯ ತಂದುಬಿಡಿ ಅಂತ ಗೋಗರೆದಿದ್ದೇವೆ ಅಷ್ಟು ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಎನ್. ಚಿಕ್ಕೇಗೌಡ:- ಅದು ಸದನಕ್ಕೆ ಸಂಬಂಧಪಟ್ಟದ್ದುದು ನಾನು ಒಬ್ಬನೇ ಹೇಳುವುದಿಲ್ಲ. ಮಾನ್ಯ ಕೃಷಿ ಸಚಿವರು ಹೇಳಿದರು, ಇದರಲ್ಲಿ ಎರಡು ಇದೆ, ಈಗ ರೈತರಿಗೆ ಬೆಲೆ ಏರಿದ ಮೇಲೆ 17 ಕೋಟಿ ಕೊಟ್ಟಿರುವದು. 31-3-1993ವರೆಗೆ ಅಂತ ನಾನು ತಿಳಿದಿರೋದು ಮತ್ತೆ ಸಣ್ಣ ರೈತರು ಮತ್ತು ಮಧ್ಯಮ ವರ್ಗದ ರೈತರಿಗೆಂದು ಕೊಟ್ಟಿರುವ 36 ಕೋಟಿ ಸಬ್ಸಿಡಿ 31-12-1993 ವರೆಗೆ ಅಂತ ನನಗೆ ತಿಳಿದಿರುವ ಮಾಹಿತಿ ಈಗ ನಮ್ಮ ಮಂತ್ರಿಗಳು ಕನ್‌ಫ್ಯೂಸ್ ಮಾಡಿ ಹೇಳುತ್ತಾ ಇದ್ದಾರೆ. ಆದರೂ ಗೊಬ್ಬರ ಹೆಚ್ಚು ಬಳಕೆಯಾಗಿಲ್ಲ. ಸಬ್ಸಿಡಿ ಕೊಟ್ಟಿರುವುದು ಮಾತ್ರ ಖರ್ಚಾಗಿದೆ. ಯಾವಾಗ ಬಳಕೆ ಹೆಚ್ಚಾಗಿಲ್ಲ, ಉತ್ಪನ್ನ ಕಡಿಮೆಯಾಗುತ್ತದೆ ಎನ್ನುವಂಥಾದ್ದು ಸ್ಪಷ್ಟವಾದಂಥದ್ದು. ಹಿಂದೆ ನಮ್ಮ ಶ್ರೀಯುತ ಬಂಗಾರಪ್ಪನವರ ಸರ್ಕಾರ ಇದ್ದಾಗ ಶೇಕಡ 25ರಷ್ಟು ಉತ್ಪನ್ನ ಖೋತಾ ಆಗುತ್ತದೆ ಎಂದು ಸ್ಪಷ್ಟವಾಗಿ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಮಾನ್ಯ ಕೃಷಿ ಮಂತ್ರಿಗಳು ಅದರ ಬಗ್ಗೆ ಏನು ಮಾಹಿತಿಯನ್ನು ಕೊಡುತ್ತಾರೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಮಾನ್ಯ ಅಧ್ಯಕ್ಷರೇ, ನಾನಾ ವಿಧವಾಗಿ ಕಾರ್ಯಕ್ರಮಗಳನ್ನು ಕೈಗೊಂಡಾಗ ಆಗದೇ ಇರಬಹುದು. ಏಕೆಂದರೆ ಖರ್ಚು ಮಾಡುವುದಕ್ಕೆ ಅನೇಕ ಕಾರಣಗಳು ಸಹಾಯಕವಾಗಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ ಖರ್ಚಾಗಬೇಕಾಗುತ್ತದೆ. ಆದ್ದರಿಂದಲೇ ಡಿಸೆಂಬರ್ 92 ರವರೆಗೂ ವಾಯಿದೆಯನ್ನು ಕೊಟ್ಟಿದ್ದರೂ ಖರ್ಚಾಗದೇ ಇದ್ದುದರಿಂದ 92ನೇ ಇಸವಿ ಏಪ್ರಿಲ್ ಆಖೈರ್‌ವರೆಗೂ ಮತ್ತೆ ಟೈಮ್ ಕೊಟ್ಟರು. ಕೊಟ್ಟ ಹಣ ಖರ್ಚಾಗಲಿಲ್ಲ, ಮತ್ತೆ ನಮಗೆ ಟೈಮ್ ಕೊಡಿ ಎಂದು ನಾವು ಕೇಳಲಿಲ್ಲ. ನಮಗೆ ಆ ಬಾಬಿನಲ್ಲಿ ದುಡ್ಡು ಇನ್ನು ಹೆಚ್ಚಿಗೆ ಕೊಡುವ ಸಂದರ್ಭ ಇರಬಹುದು ಈ ಹಣ ಖರ್ಚು ಮಾಡುವುದಕ್ಕೆ ಡಿಸೆಂಬರ್ ಆಖೈರ್‌ವರೆಗೂ ಟೈಮ್ ಕೊಟ್ಟಿದ್ದಾರೆ ಎನ್ನುವ ಸ್ಪಷ್ಟ ನಿಲುವನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ನಮ್ಮದು ಕೃಷಿ ಪ್ರದಾನವಾದಂಥ ದೇಶ. 72 ಪರ್‌ಸೆಂಟ್ ರೈತರಿದ್ದಾಗ ಕೇಂದ್ರಸರ್ಕಾರ, ವಿಶ್ವ ಬ್ಯಾಂಕು ಮತ್ತು ಐ.ಎಂ.ಎಫ್. ಒತ್ತಡಕ್ಕೆ ಮಣಿದು ಇಂಥ ಒಂದು ರೈತ ವಿರೋಧಿ ಗೊಬ್ಬರದ ನೀತಿಯನ್ನು ತಂದಿದ್ದಾರೆ. ಸರ್ಕಾರ ಸಬ್ಸಿಡಿ ಹಣವನ್ನು ರೈತರಿಗೆ ಮುಟ್ಟಿಸಿಲ್ಲ. ಇದರ ಮುಂದೆ ಏನು ಕಾರ್ಯಕ್ರಮ ಹಾಕುತ್ತೀರಿ ಎನ್ನುವುದನ್ನು ಹೇಳುವುದಿಲ್ಲ. ರೈತರ ಪರವಾಗಿ ಕೇಂದ್ರ ಸರ್ಕಾರದ ನೀತಿಯನ್ನು ಖಂಡನೆ ಮಾಡಿ ಒಂದು ರೆಸಲ್ಯೂಷನ್ ಮಾಡಿರಿ ಎಂದು ಹೇಳಿದರೂ ಮಾಡುವುದಕ್ಕೆ ತಯಾರಾಗಿಲ್ಲ. ಹಾಗಾಗಿ ನಮಗೆ ಬೇರೆ ಆಲ್‌ಟರ್‌ನೇಟಿವ್ ಇಲ್ಲ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಯನ್ನು ನಾವು ಪ್ರೊಟೆಸ್ಟ್ ಮಾಡಿ ನಾವು ವಾಕ್ ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಕೇಳಿರತಕ್ಕಂಥದ್ದು ಏನೆಂದರೆ ರಾಜ್ಯ ಸರ್ಕಾರ ಶೇಕಡ 2ರಷ್ಟು ಟರ್ನ್ ಓವರ್ ಟ್ಯಾಕ್ಸ್ ಹಾಕಿದ್ದಾರೆ, ಸೇಲ್ಸ್ ಟ್ಯಾಕ್ಸ್ ಇದೆ, ಕೊನೆಯ ಪಕ್ಷ ಕೇಂದ್ರ ಸರ್ಕಾರದವರ ಕಡೆಗೆ ಕೈ ತೋರಿಸುವ ಬದಲಾಗಿ ತಾವೇ ಯೋಚನೆ ಮಾಡಬಹುದಲ್ಲ! ಇದನ್ನು ನಿರ್ಣಯ ಮಾಡಿದರೆ ಕನಿಷ್ಟ ಸುಮಾರು 200 ರೂಪಾಯಿಯಾದರೂ ಕಡಿಮೆಯಾಗುತ್ತದೆ. ಇದರಲ್ಲಿ ನಿಮಗೆ 10-15 ಲಕ್ಷ ರೂಪಾಯಿ ಟರ್ನ್ ಓವರ್ ಟ್ಯಾಕ್ಸ್ ಗೊಬ್ಬರದ ಮೇಲೆ

ಬರಬಹುದು, ಅದನ್ನಾದರೂ ವಜಾ ಮಾಡಿ. ಟರ್ನ್ ಓವರ್ ಟ್ಯಾಕ್ಸನ್ನು, ಸೇಲ್ಸ್ ಟ್ಯಾಕ್ಸನ್ನು ವಜಾ ಮಾಡುತ್ತೇವೆ ಅಥವಾ ಇಲ್ಲವೇ ಎಂದು ಹೇಳಿ. ಲೆವಿ ಬಗ್ಗೆ ಕೂಡ ಅಷ್ಟೆ. ಏಕೆಂದರೆ ಅವತ್ತು ನೀವು ಹೇಳಿದಿರಿ, ಈ ಸದನದಲ್ಲಿ ಚರ್ಚೆಯಾಗಿ ಮಿಡ್ಲ್‌ಪಾಯಿಂಟ್‌ನಲ್ಲಿ ಲೆವಿ ಹಾಕುವುದೆಂದು ತೀರ್ಮಾನವಾಯಿತು ಸ್ವಾಮಿ ಅವತ್ತು ಸಬ್ಸಿಡಿ ಇತ್ತು. ಸಬ್ಸಿಡಿ ಇರುವಾಗ ಒಪ್ಪಿರಬಹುದು, ಆ ರೀತಿ ಅವತ್ತು ತೀರ್ಮಾನವಾಗಿರಬಹುದು. ಇವತ್ತು ಸಬ್ಸಿಡಿ ಇದೆಯೇ? ಏತಕ್ಕೆ ನೀವು ಲೆವಿಯನ್ನು ವಸೂಲು ಮಾಡುವುದಿಲ್ಲ ಎಂದು ಹೇಳಿ. ನೀವು ರಾಜ್ಯ ಸರ್ಕಾರ ಮಾಡಬೇಕಾಗಿರತಕ್ಕಂಥದ್ದು ಅದರಿಂದ ಭತ್ತ ಬೆಳೆದಂಥ ರೈತರಿಗೆ. 20–30 ರೂಪಾಯಿ ಕ್ವಿಂಟಾಲ್ ಮೇಲೆ ಜಾಸ್ತಿ ಸಿಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ರಾಜ್ಯ ಸರ್ಕಾರದ ಆಲೋಚನೆಯಲ್ಲಿ ಟರ್ನ್ ಓವರ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ ಬಗ್ಗೆ ಇದೆ. ಅದನ್ನು ಯಾವ ರೀತಿ ಟ್ಯಾಕ್ಸ್ ಹಾಕಬೇಕು. ಹೇಗೆ ಟ್ಯಾಕ್ಸ್ ಹಾಕಬೇಕು ಎನ್ನುವುದನ್ನು ನೋಡುತ್ತೇವೆ.

ಶ್ರೀ ಸಿ. ಬೈರೇಗೌಡ:– ಕಡಿಮೆ ಮಾಡಿ ಎಂದು ಹೇಳಿದರೆ ಹಾಕುತ್ತೇವೆ ಎಂದು ಹೇಳುತ್ತಾರಲ್ಲಾ. ಇದಕ್ಕೆ ಏನು ಹೇಳುವುದು ಮಾನ್ಯ ಅಧ್ಯಕ್ಷರೇ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ತಮಿಳುನಾಡಿನಲ್ಲಿ ಹಾಕಿದ್ದಾರೆ. ನಾವು ಅದನ್ನು ಯಾವ ರೀತಿ ಹಾಕಬೇಕು, ಅಥವಾ ಬೇಡವೇ ಎನ್ನುವುದನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ:– ಸೇಲ್ಸ್ ಟ್ಯಾಕ್ಸ್ ತೆಗೆದುಹಾಕಿ ಎಂದು ನಾನು ಹೇಳುತ್ತಿದ್ದರೆ ಅಲ್ಲಿ ಹಾಕಿದ್ದಾರೆ, ಅದನ್ನು ಯಾವ ರೀತಿ ಹಾಕಬೇಕು ಎನ್ನುವುದನ್ನು ಯೋಚನೆ ಮಾಡುತ್ತೇವೆ ಎಂದು ಹೇಳಿದರೆ ಆ ಉತ್ತರದಿಂದ ನಾನು ಹೇಗೆ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆ? ದಯವಿಟ್ಟು ಹೇಳಿ.

ಅಧ್ಯಕ್ಷರು:– ಮುಂದಿನ ತಿಂಗಳು 22ನೇ ತಾರೀಖು ಬಜೆಟ್ ಬರುತ್ತದೆ. ಆಗ ಯಾವುದರ ಮೇಲೆ ಹಾಕುತ್ತಾರೆ, ಯಾವುದರ ಮೇಲೆ ತೆಗೆಯುತ್ತಾರೆ ಎಂದು ಎಲ್ಲಾ ಗೊತ್ತಾಗುತ್ತದೆ.

ಶ್ರೀ ಸಿ. ಬೈರೇಗೌಡ:– ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾರೆ. ಆ ಘೋಷಣೆಗಳಲ್ಲಿ ನನಗೇನೂ ನಂಬಿಕೆ ಇಲ್ಲ. ಆದರೆ ಈ ಸರ್ಕಾರದ ನೀತಿಯನ್ನು ತೀವ್ರವಾಗಿ ವಿರೋಧ ಮಾಡಿ ನಾನು ಹೊರಗಡೆ ಹೋಗುತ್ತೇನೆ.

(ಸಮಾಜವಾದಿ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು.)

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಧೋರಣೆಯಿಂದ, ಇಡೀ ರಾಜ್ಯದ ರೈತರಿಗೆ, ದೇಶದ ರೈತರಿಗೆ ಈ ಸ್ಥಿತಿ ಬಂದಿದೆ. ಇದರ ಬಗ್ಗೆ ತಮ್ಮ ಕ್ರಮವೇನು ಎಂದು ಸ್ಪಷ್ಟವಾಗಿ ಕೇಳಿದೆವು. ಅದನ್ನು ಹೇಳಲಿಲ್ಲ, ರಾಜ್ಯ ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ? ರೈತನಿಗೆ ಆಗಿರತಕ್ಕಂಥ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಕನಿಷ್ಟ ಈ ರಾಜ್ಯದ ರೈತನ ಸಾಲವನ್ನು ಮನ್ನಾ ಮಾಡುತ್ತೀರಾ ಎಂದು ಕೇಳಿದೆವು ಅದರ ಬಗ್ಗೆಯೂ ಉತ್ತರ ಇಲ್ಲ. ರಾಜ್ಯ ಸರ್ಕಾರ ರೈತರ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ತೋರಿಸುತ್ತಿರುವುದರಿಂದ, ಅದನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು.)

ಶ್ರೀ ವಾಟಾಳ್ ನಾಗರಾಜ್:– ತಾವು ನಗುವುದು ನೋಡಿದರೆ ನಿಜವಾಗಲೂ ಈ ಸರ್ಕಾರ ನಗೆ ಪಾಟಲಿಗೆ ಸಿಕ್ಕಿದೆ ಎಂದು ತಿಳಿಯುತ್ತದೆ, ಮುಂದಕ್ಕೆ ಹೋಗುವುದು ಬೇಡಿ.

ಅಧ್ಯಕ್ಷರು:– ನಾನು ತಮ್ಮನ್ನು ನೋಡಿ ನಗುತ್ತಿದ್ದೇನೆ. ನಾನು ಸರ್ಕಾರದ ಕಡೆಗೆ ನೋಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಮ್ಮನ್ನು ನೋಡತಕ್ಕ ಪ್ರಶ್ನೆ, ತಮಗೆ ಏನು ಅರ್ಥ ಆಯಿತೋ ನನಗಂತೂ ಅರ್ಥ ಆಗಿಲ್ಲ.

ಅಧ್ಯಕ್ಷರು:- ಎಲ್ಲಾ ವಾಕ್‌ಔಟ್ ಮಾಡಿದರಲ್ಲ, ವಾಟಾಳ್‌ರವರು ಇನ್ನೂ ಒಳಗಡೆ ಇದ್ದಾರಲ್ಲ ಎಂದು ಸೋಜಿಗದ ಸಂಗತಿ ಆಗಿದೆ.

ಶ್ರೀ ವಾಟಾಳ್ ನಾಗರಾಜ್:- ತಾವು ಯಾವ ತರಹ ಅರ್ಥ ಮಾಡಿಕೊಂಡಿದ್ದೀರಿ ನನಗೆ ಗೊತ್ತಾಗಲಿಲ್ಲ, ನಾನು ಅದರ ಬಗ್ಗೆ ಚಿಂತೆ ಪಡಬೇಕಾಗಿಲ್ಲ. ಇವತ್ತು ಕೇಂದ್ರ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರವೇ ಆಗಲಿ ಈ ಒಂದು ಪ್ರಶ್ನೆಯ ಬಗ್ಗೆ ಲಘುವಾಗಿ ತಿಳಿದುಕೊಂಡಿದೆ. ಈ ರಾಜ್ಯದ ರೈತನಿಗೆ ನಿಜವಾಗಿಯೂ ಅತ್ಯಂತ ಅನ್ಯಾಯ ಮಾಡಿದ್ದಾರೆ ಮೋಸ ಮಾಡಿದ್ದಾರೆಂದು ಹೇಳಿ ನಾನೂ ಸಭಾ ತ್ಯಾಗ ಮಾಡುತ್ತಿದ್ದೇನೆ. ಇದರಲ್ಲಿ ತಪ್ಪೇನು ಇದೆ.

ಶ್ರೀ ಗೋಪೀನಾಥ್ ಆರ್. ಸಾಂಡ್ರಾ:- ಆಯಿತು ಬಿಡಿ.

ಶ್ರೀ ವಾಟಾಳ್ ನಾಗರಾಜ್:- ಏನು ಆಯಿತು? ನೀವು ಸುಮ್ಮನೆ ಆಯಿತು ಎಂದು ಕುಳಿತುಬಿಡುವುದೇ? ಇದೇ ನಿಮ್ಮ ಪ್ರಶ್ನೆ.

ಶ್ರೀ ಗೋಪೀನಾಥ್ ಆರ್. ಸಾಂಡ್ರಾ:- ನೀವು ಏನು ಮಾಡುತ್ತೀರಿ ಎಂದು ಸುಮ್ಮನೆ ನಾವು ಕುಳಿತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ನೀವು ಏನು ಆಗಿದ್ದೀರಿ ಎಂದು ನಮಗೆ ಗೊತ್ತಿದೆ. ನಿಮ್ಮ ಜಾತಕ ಗೊತ್ತಿದೆ ಅದರಿಂದ ತಾನೇ ನಾವು ಮಾಡುವುದು? ನಿಮ್ಮ ಹಣೇಬರಹ ತಿಳಿದುಕೊಂಡಿದ್ದೇವೆ.

ಶ್ರೀ ಗೋಪೀನಾಥ್ ಆರ್. ಸಾಂಡ್ರಾ:- ನಿಮ್ಮ ಜಾತಕವೂ ನಮಗೆ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಜಾತಕವೂ ಗೊತ್ತಿದೆಯೇ? ಗೊತ್ತಿದ್ದರೆ ಇಟ್ಟುಕೊಳ್ಳಿ.

ಅಧ್ಯಕ್ಷರು:- ಈಗ ಯಾರ್ಯಾರಿಗೆ ಏನೇನು ಗೊತ್ತಿದೆ ಅದನ್ನೆಲ್ಲಾ ನಿಮ್ಮ ಪಾಕೆಟ್‌ನಲ್ಲಿ ಇಟ್ಟುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ವರ್ಷಕ್ಕೆ ಒಂದೊಂದು ಜಾತಕ ಬರುತ್ತಿದೆ.

(ಪಕ್ಷೇತರ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸಭಾ ತ್ಯಾಗ ಮಾಡಿದರು)

ಶ್ರೀ ಎ.ಕೆ. ಅನಂತಕೃಷ್ಣ:- ಬಾವಿಯಲ್ಲಿ ಬೀಳುವುದು ಹೊರಗಡೆ ಹೋಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೀವು ಮುಂಚೆ ಅದೇ ಮಾಡುತ್ತಿದ್ದೀರಿ.

ಅಧ್ಯಕ್ಷರು:- ಈಗ ಐದು ಗಂಟೆ ಆಯಿತು. ಲಕ್ಷ್ಮಣಯ್ಯನವರೆ.....

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ನಮ್ಮದು ಒಂದು ಗಮನ ಸೆಳೆಯುವ ಸೂಚನೆ ಇದೆ.

ಅಧ್ಯಕ್ಷರು:- ನೀವು ಆಗಲೇ ಶುರು ಮಾಡಿದ್ದರೆ ಚೆನ್ನಾಗಿತ್ತು. ಅದಕ್ಕೆ ಗ್ರಹಗತಿ ಸರಿ ಇಲ್ಲ ಎಂದು ಕಾಣುತ್ತದೆ, ನಿಮ್ಮ ಗಮನ ಸೆಳೆಯುವ ಸೂಚನೆಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಮುಖ್ಯ ಮಂತ್ರಿಗಳು ಬರಲೇ ಇಲ್ಲ.

ಅಧ್ಯಕ್ಷರು:- ಬರುತ್ತಾರೆ, ಹಾಸನದಲ್ಲಿ ಇದ್ದಾರೆ ಬರುತ್ತಾರೆ.

ಶ್ರೀ ಸಿ. ಬೈರೇಗೌಡ:- ನಾನು ಕಳೆದ ಮೂರು ದಿವಸದಿಂದ ಸತತವಾಗಿ ಹೇಳುತ್ತಿದ್ದೇನೆ. ಈ ವಿದ್ಯುತ್ ಮಂತ್ರಿಗಳ ಸಭೆ ದೆಹಲಿಯಲ್ಲಿ ನಡೆದಿದೆ. ರೈತರ ಮೇಲೆ ಪುನಃ ಗಧಾಪ್ರಹಾರ

ಮಾಡತಕ್ಕ ತೀರ್ಮಾನ ಆಗಿದೆ. ಒಂದು ಯೂನಿಟ್‌ಗೆ ಶೇಕಡ 50 ಪೈಸೆ ಹಾಕಬೇಕು ಎನ್ನತಕ್ಕದ್ದು. ಅದಕ್ಕೆ ಎಲ್ಲಾ ರಾಜ್ಯದವರೂ ಒಪ್ಪಿದ್ದಾರೆ ಎನ್ನತಕ್ಕದ್ದು ಪತ್ರಿಕೆಗಳಲ್ಲಿ ಓದಿದ್ದೇವೆ. ಏನು ಮಾಡುತ್ತೀರಿ, ಹೌದೋ ಅಥವಾ ಇಲ್ಲವೋ ರಾಜ್ಯ ಸರ್ಕಾರದ ನಿಲುವು ಏನು ಎಂದು ತಿಳಿದುಕೊಳ್ಳಬೇಕಾಗಿರತಕ್ಕದ್ದು ಅತಿ ಅವಶ್ಯಕ.

ಅಧ್ಯಕ್ಷರು:- ಅವರು ಬರುತ್ತಾರೆ.

ಶ್ರೀ ಸಿ. ಬೈರೇಗೌಡ:- ಅವರು ಬರುವುದರೊಳಗೆ....

ಅಧ್ಯಕ್ಷರು:- ಅವರು ಬಂದ ಮೇಲೆ ತಾವು ರೈಸ್ ಮಾಡಿ. ಮಾನ್ಯ ವಿರೋಧ ಪಕ್ಷದ ನಾಯಕರೆ, ಈ ದಿವಸದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಇನ್ನೂ ಎರಡು ಪ್ರಸ್ತಾವನೆಗಳು ಇವೆ. ಒಂದು ಟ್ರಾನ್ಸ್‌ಫಾರ್ಮರ್ ವಿಫಲವಾದ ಪ್ರಯುಕ್ತ. ಅದನ್ನು ಕೊನೆಗೆ ತೆಗೆದುಕೊಳ್ಳೋಣ. ಈಗ ಮುಖ್ಯಮಂತ್ರಿಗಳು ಬರುತ್ತಾರೆ, ಆಶ್ರಯದ ಮಂತ್ರಿಗಳು ಇದ್ದಾರೆ. ಆದ್ದರಿಂದ ಆಶ್ರಯದ್ದನ್ನು ಈಗ ತೆಗೆದುಕೊಳ್ಳೋಣ. ಈಗ ಐದು ಗಂಟೆ, ಟೈಮ್ ಬಹಳ ಸೀಮಿತವಾಗಿದೆ. ಆದ್ದರಿಂದ ಲಘುನೇ ಮುಗಿಸಿದರೆ ನಾವು ಲಘುನೇ ಆಡಜರ್ನ್ ಮಾಡಬಹುದು.

ಶ್ರೀ ಸಿ. ಬೈರೇಗೌಡ:- ಸದನ ಮುಂದುವರಿಯುತ್ತದೆಯೋ ಅಥವಾ ಇಲ್ಲವೊ?

ಅಧ್ಯಕ್ಷರು:- ನಾಳೆ ರಜೆ ಇದೆ, ಪುನಃ ಮಾನ್ಯ ಸದಸ್ಯರುಗಳು ಹೋಗಿ ಮತ್ತೆ ಬಂದು ಜೊತೆಗೆ ಮುಂದಿನ ಆಸನಗಳು ಖಾಲಿ ಇವೆ, ಎಲ್ಲಾ ಹೋಗಿದ್ದಾರೆ. ಆದ್ದರಿಂದ...

ಶ್ರೀ ಸಿ. ಬೈರೇಗೌಡ:- ಕೆಲವು ಪ್ರಮುಖವಾದ ವಿಷಯಗಳಿಗೆ ಉತ್ತರವನ್ನಾದರೂ ಕೊಡಿಸಿದರೆ, ನಾವು ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ವಿದ್ಯುತ್ ನಮ್ಮನ್ನು ಬಹಳ ಕಾಡಿಸತಕ್ಕ ವಿಷಯ, ಬಹಳ ತೊಂದರೆಯಲ್ಲಿರತಕ್ಕ ವಿಷಯ.

ಅಧ್ಯಕ್ಷರು:- ಅದು ಮುಖ್ಯಮಂತ್ರಿಗಳು ಬಂದ ಮೇಲೆ ಅದನ್ನು ತಾವು ರೈಸ್ ಮಾಡಿ.

ಶ್ರೀ ಸಿ. ಬೈರೇಗೌಡ:- ಅವರು ಬರುತ್ತಾರೆಂದು ತಮಗೆ ಖಾತರಿ ಇದ್ದರೆ ಆಗಬಹುದು.

ಅಧ್ಯಕ್ಷರು:- ಅವರು ಬರುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈಗ ನಾವು ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಮುಖ್ಯಮಂತ್ರಿಗಳು ಉತ್ತರ ಕೊಡುತ್ತೇವೆಂದು ಹೇಳಿದ್ದರು. ಕೇಳತಕ್ಕದ್ದು ಇದೆ, ತಮಗೆ ಪತ್ರವನ್ನು ಬರೆದಿದ್ದೆವು. ದಯವಿಟ್ಟು ಅವರನ್ನು ಕರೆಯಿಸಬೇಕು. ಮುಖ್ಯಮಂತ್ರಿಗಳು ನಿನ್ನೆ ಹೇಳಿದರು, ವಿಧಾನ ಪರಿಷತ್ತು ಇದೆ ಎಂದು, ಇವತ್ತೂ ಈ ಸದನದ ಕಡೆ ಬಂದೇ ಇಲ್ಲ.

ಅಧ್ಯಕ್ಷರು:- ಅವರು ಬರುತ್ತಾರೆ.

(2) ಆಶ್ರಯ ಹಾಗೂ ಇತರೆ ವಸತಿ ಯೋಜನೆಗಳಲ್ಲಿ ಆಗಿರುವ ಹಣ ದುರುಪಯೋಗ

† ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, 'ಆಶ್ರಯ' ಯೋಜನೆಯನ್ನು ಸರ್ಕಾರದವರು ಯಾವಾಗ ಘೋಷಣೆ ಮಾಡಿದರು ಆಗ ನಾವೂ ಸಹ ಸ್ವಾಗತ ಮಾಡಿದ್ದೇವೆ. ಏಕೆಂದರೆ ಈ ಯೋಜನೆಯಲ್ಲಿ ಬಡ ಜನರಿಗೆ, ಯಾರಿಗೆ ನಿವೇಶನ ಇಲ್ಲ, ಅವರಿಗೆ ನಿವೇಶನ ಕೊಡುವ ವ್ಯವಸ್ಥೆ ಮತ್ತು 15 ಸಾವಿರ ರೂಪಾಯಿ ವೆಚ್ಚದ ಒಂದು ಮನೆ ಕಟ್ಟುವ ಯೋಜನೆ ಅದು. ಆದರೆ ಆ ಯೋಜನೆ ಯಾವ ದೃಷ್ಟಿಯಿಂದ ಕಾರ್ಯರೂಪವಾಗುತ್ತಿದೆ ಎಂದು ನೋಡಿದರೆ, ಇದು 'ಸೀಟ್ ಆಫ್ ಪವರ್' ನಲ್ಲಿ ಯಾವ ಜನ ಇದ್ದಾರೆ, ಅವರಿಗೆ ಇದು ಆಶ್ರಯ ಆಗಿದೆ ಎಂದು ಹೇಳುತ್ತೇನೆ.